ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿರುವುದು ದೇಶಕ್ಕೇ ಗೊತ್ತಿದೆ. ಈ ರೀತಿ ಬರಗಾಲದ ಬಗ್ಗೆ ಸಾಕಷ್ಟು ಬೆಳಕು ಚೆಲ್ಲತಕ್ಕಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಅನೇಕ ಸಮಸ್ಯೆಗಳಿವೆ. ಇಂತಹ ಸಂದರ್ಭದಲ್ಲಿ ತಾವು ಇವತ್ತು ಜನತೆಯ ಹಿತದೃಷ್ಟಿಯಿಂದ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕ

ನಿಜವಾದ ಚರ್ಚೆ ಆಗಬೇಕಿತ್ತು, ರಾಜ್ಯದ ಜನತೆಯ ಬಗ್ಗೆ ಚರ್ಚೆ ಆಗಬೇಕು. ಆದರೆ ಇದು ಆಗುತ್ತಿಲ್ಲ ದಯವಿಟ್ಟು ವಿರೋಧಪಕ್ಷದ ಸದಸ್ಯರು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿ ಕೊಡಿ. ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡಬೇಕಾಗಿದೆಯೆಂದು ನಾನು ಸರ್ಕಾರವನ್ನು ವಿನಂತಿಮಾಡಿ ಕೊಳ್ಳುತ್ತೇನೆ. ರಾಜ್ಯದಲ್ಲಿ ಅಂಧಕಾರ ಮೂಡುತ್ತಿದೆ, ತಿನ್ನುವುದಕ್ಕೆ ಇಲ್ಲದೆ ಜನ ಸಾಯುತ್ತಿದ್ದಾರೆ. ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ತಾವು ಪ್ರಾಮಾಣಿಕ ನೀತಿಯಿಂದ ಕಾರ್ಯಪ್ರವೃತ್ತರಾಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ರಾಜ್ಯದಲ್ಲಿ ತಲೆದೋರಿರುವ ಭೀಕರ ಬರಗಾಲದ ಬಗ್ಗೆ ಚರ್ಚೆ

†ಶ್ರೀ ಬಿ. ಧರ್ಮಪ್ಪ (ಸಾಗರ್).—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಿನ್ನೆಯಿಂದ ಈ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ವಿಶೇಷವಾಗಿ ನಾನು ಮಲೆನಾಡು ಭಾಗದಿಂದ ಬಂದವನು.

ಅಧ್ಯಕ್ಷರು.—ತಾವೆಲ್ಲರೂ ಈಗ ಹತ್ತು ಹತ್ತು ನಿಮಿಷ ಮಾತನಾಡಬೇಕು, ಅಷ್ಟೆ

ಶ್ರೀ ಬಿ. ಧರ್ಮಪ್ಪ.—ಬಯಲು ಸೀಮೆಯಲ್ಲಿ ಧಾರವಾಡದಲ್ಲಿ ಬೀದರ್‌ದಲ್ಲಿ ಬರಗಾಲ ಬರುತ್ತದೆ ಆದರೆ ನಮ್ಮಲ್ಲಿ ಇಲ್ಲವೆಂದು ತಿಳಿದುಕೊಂಡಿದ್ದರು. ಆದರೆ ಬರಬರುತ್ತ ಇದು ಮಲೆನಾಡು ಭಾಗವನ್ನು ಮುಟ್ಟಿದೆ. ಆದರಲ್ಲೂ ನಮ್ಮ ಸಾಗರ, ಹೊಸನಗರ, ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ ಭಾಗಗಳಲ್ಲಿ ಎಂದೂ ಬರಗಾಲ ನೋಡಿರಲಿಲ್ಲ. ಈ ಸಲ ಮೊದಲಬಾರಿಗೆ ಬರಗಾಲ ತಲೆದೋರಿರುವುದರಿಂದ ನಮ್ಮಲ್ಲಿ ವಯಸ್ಸಾದವರು ಹೇಳುತ್ತಾರೆ, ನಮ್ಮಲ್ಲಿ ಎಂದೂ ಈ ತರಹ ಸ್ಥಿತಿ ಬಂದಿರಲಿಲ್ಲ ಎಂದು. ಈ ವರ್ಷ ಶರಾವತಿಯಲ್ಲಿ ನೀರು ತುಂಬುವಂಥ ಸ್ಥಿತಿಯಲ್ಲಿ ಇಲ್ಲ. ಮಾನ್ಯ ಕಂದಾಯ ಸಚಿವರು ಅನೇಕಸಾರಿ ಬದಲಿ ಬೆಳೆ ಬೆಳೆಯಿರಿ ಎಂದು ಹೇಳುತ್ತಾರೆ. ಮಲೆನಾಡಿನಲ್ಲಿ ಇದುವರೆಗೂ ಬದಲಿ ಬೆಳೆ ಬೆಳೆಯುವ ಅವಶ್ಯಕತೆ ಬಂದಿರಲಿಲ್ಲ. ಈ ವಿಷಯ ಅವರಿಗೆ ಗೊತ್ತೇ ಇಲ್ಲ. ಏಕೆಂದರೆ ಬದಲಿ ಬೆಳೆ ಬೆಳೆಯಬೇಕು ಎಂದರೆ ಸಾಕಷ್ಟು ಬೆಳೆ ಹಾಳಾಗಿ ಹೋಗಿದೆ. ಆದ್ದರಿಂದ ಬದಲಿ ಬೆಳೆ ಬೆಳೆಯಬೇಕಾದರೆ ಸರ್ಕಾರದವರೇ ಎಲ್ಲೆಲ್ಲಿ ಬೆಳೆ ಹಾಳಾಗಿದೆ, ಅಲ್ಲಿ ಬೀಜ ಮತ್ತು ಇತರ ಅವಶ್ಯಕತೆಗಳನ್ನು ಒದಗಿಸುವುದಕ್ಕೆ ಸಾಧ್ಯವಿದ್ದರೆ ಮಾತ್ರ ಬದಲಿ ಬೆಳೆ ಬೆಳೆಯಲು ಸಾಧ್ಯವಿದೆ. ಮತ್ತೊಂದು ದೋಷ ಏನಾಗಿದೆ ಎಂದರೆ, ಸರ್ಕಾರದವರು ಕೆಲವು ಅಂಕಿಅಂಶಗಳ ಸರಾಸರಿ ಲೆಕ್ಕಹಿಡಿದು ಇಷ್ಟು ಮಳೆಯಾದರೆ ಇಷ್ಟು ಬೆಳೆಯಾಗಿದೆ ಎಂದು, ಬ್ರಿಟಿಷರ ಕಾಲದಲ್ಲಿ ಮಾಡಿದ ರೂಲ್ಸನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಸರಾಸರಿ ಲೆಕ್ಕ ಹಾಕಿ ಯಾವನೋ ಒಬ್ಬ ಒಂದು ಅಡಿ, ಎರಡು ಅಡಿ, ಹದಿನೈದು ಅಡಿ ಸೇರಿಸಿ ಒಟ್ಟು ಸರಾಸರಿ ನಾಲ್ಕೂವರೆ ಅಡಿ ಬರುತ್ತದೆ ಎಂದು ಹೊಳೆಗೆ ಹಾರಿದನಂತೆ ನಿಜವಾಗಿಯೂ ನಮ್ಮಲ್ಲಿ ಮಳೆ ಬೇಕಾದ ಸಂದರ್ಭದಲ್ಲಿ ಬಿದ್ದಿದೆಯೋ ಎಂದು ಪರಿಶೀಲನೆ ಮಾಡಬೇಕು. ಮಲೆನಾಡಿನಲ್ಲಿ ಬಿತ್ತಿದ ಸಸಿಯನ್ನು ಎರಡೂವರೆ ತಿಂಗಳಾದರೂ ಕಿತ್ತು ನಾಟಿ ಮಾಡುವಂಥ ಪರಿಸ್ಥಿತಿ ಒದಗಿಲ್ಲ. ಒಂದು ವಾರದ ಹಿಂದೆ ಸ್ವಲ್ಪ ಮಳೆ ಬಂತು. ಆದರೆ ಇದರಿಂದ ಏನೂ ಪ್ರಯೋಜನ ಆಗಲಿಲ್ಲ, ಏನಾದರೂ ಒಣ ಮತ್ತು ಖುಷ್ಕಿ ಬೆಳೆಗೆ ಅನುಕೂಲವಾಗುತ್ತದೆ. ಆದರೆ ಮಲೆನಾಡಿನಲ್ಲಿ ಅಂತಹ ಖುಷ್ಕಿ ಬೆಳೆಯನ್ನು ಪ್ರಧಾನವಾಗಿ ಬೆಳೆಯುತ್ತಿಲ್ಲ. ಇಂತಹ ಪರಿಸ್ಥಿತಿ ಒಂದು ಕಡೆ ಇದೆ. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಬೇಡಿಕೊಳ್ಳುವುದು ಇಷ್ಟೆ ಇಡೀ ಶಿವಮೊಗ್ಗ ಜಿಲ್ಲೆಯನ್ನು ಬರಗಾಲ ಪ್ರದೇಶವೆಂದು ತೀರ್ಮಾನ ಮಾಡಬೇಕು. ಮಲೆನಾಡಿನ ಭಾಗಗಳಲ್ಲಿ ಕೆಲವು ಹಳ್ಳಿಗಳನ್ನು ಅಧಿಕಾರಿಗಳು ಕೈಬಿಟ್ಟಿದ್ದಾರೆ. ಸಾಗರ, ಹೊಸನಗರ, ಶಿಕಾರಿಪುರ ಮತ್ತು ಸೊರಬ ತಾಲ್ಲೂಕುಗಳು ವಿಶೇಷವಾಗಿ ತೊಂದರೆಗೆ ಒಳಗಾಗಿವೆ. ಇಲ್ಲಿ ವಿಪರೀತ ಬರಗಾಲ ಆವರಿಸಿದೆ. ವರ್ಷೇ ವರ್ಷೇ ಬರಗಾಲ ಬರುವಂಥ ಸಂದರ್ಭದಲ್ಲಿ, ನಾನು ಕಂದಾಯ ಸಚಿವರಲ್ಲಿ ಬೇಡಿಕೊಳ್ಳುವುದು ಇಷ್ಟೆ. ಬರಗಾಲ ಕ್ಷೇಮ ನಿಧಿಯನ್ನು ರಾಜ್ಯದಲ್ಲಿ ಖಾಯಂ ಆಗಿ ಇಟ್ಟರೆ ಏನಾದರೂ ಒಳ್ಳೆಯದಾಗಬಹುದು. ಎಷ್ಟು ವರ್ಷಗಳಿಂದ ನೋಡಿದರೂ ಕೂಡ ಈ ಬರಗಾಲವನ್ನು ತಪ್ಪಿಸುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ಮುಟ್ಟಿದ್ದೇವೆ. ಆದ್ದರಿಂದ ಬರಗಾಲ

ಕ್ಷೇಮನಿಧಿಯನ್ನು ಖಾಯಂ ಆಗಿ ಇಟ್ಟರೆ ವರ್ಷೇ ವರ್ಷೇ ಎಲ್ಲೆಲ್ಲಿ ಏನೇನು ತೊಂದರೆಗಳಾಗುತ್ತವೆ, ಅಲ್ಲೆಲ್ಲಾ ತಕ್ಷಣ ಏನಾದರೂ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಾವು ಪದೇ ಪದೇ ಕೇಂದ್ರಕ್ಕೆ ಮೊರೆ ಹೋಗುತ್ತೇವೆ. ಅಲ್ಲಿಂದ ಹಣ ಬರುವ ಹೊತ್ತಿಗೆ ಇಲ್ಲಿ ಜನ ನೆಲಸಮವಾಗಿರುತ್ತಾರೆ. ನಾವು ಇಲ್ಲಿ ಬರೀ ಚರ್ಚೆ ಮಾಡಿ, ಇಷ್ಟಕ್ಕೇ ಮುಗಿಸಿದರೆ ಏನೂ ಪ್ರಯೋಜನವಿಲ್ಲ. ಎಲ್ಲೆಲ್ಲಿ ಎರಡನೇ ಬೆಳೆ ಹಾಕುವುದಕ್ಕೆ ಸಾಧ್ಯವಿದೆ, ಅಂತಹ ಕಡೆಗಳಿಗೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಭೇಟಿ ಕೊಡಬೇಕು. ಯಾವ ಯಾವ ಭಾಗದಲ್ಲಿ, ಯಾವ ಯಾವ ಬೆಳೆಯನ್ನು ಬೆಳೆಯಬಹುದು ಎಂಬುದನ್ನು ನೋಡಿ, ತಕ್ಷಣ ಕೆಲಸ ಶುರು ಮಾಡುವ ಕೆಲಸ ಆಗಬೇಕು. ಈ ಸಂದರ್ಭದಲ್ಲಿ ಈ ಸಭೆಯ ಗಮನಕ್ಕೆ ಒಂದು ವಿಷಯವನ್ನು ತರಬೇಕಾಗಿದೆ. ಸರ್ಕಾರದವರು ಬ್ಯಾಂಕ್ ಮುಖಾಂತರ ಅಥವಾ ಕೋ ಆಪರೇಟಿವ್ ಸೊಸೈಟಿಗಳ ಮುಖಾಂತರ ಬೆಳೆ ಸಾಲ ಎಂದು ಕೊಡುತ್ತಾರೆ. ಈ ರೀತಿ ನಮಗೆ ಬೆಳೆ ಸಾಲ ಕೊಟ್ಟರೆ, ಇದರಲ್ಲಿ ಬೆಳೆ ವಿಮೆ ಎಂದು ಒಂದು ಭಾಗ ವಸೂಲ್ಮಾಡುತ್ತಾರೆ ಈ ಬೆಳೆ ವಿಮೆ ಮಾಡುವುದು ಎಂದರೆ, ಇವತ್ತು ಇಡೀ ತಾಲ್ಲೂಕಿನ ಬೆಳೆ ಪೂರ್ತಿ ನಾಶವಾದಾಗ ಮಾತ್ರ ವಿಮೆ ಕೊಡುತ್ತೇವೆಂದು ಹೇಳುತ್ತಾರೆ. ಇದು ಸೆಂಟ್ರಲ್ ಗವರ್ನಮೆಂಟ್ ಸ್ಕೀಮ್ ರೈತರು ಬೆಳೆ ಸಾಲ ಪಡೆಯಬೇಕಾದರೆ ವಿಮೆಯಲ್ಲಿ ಸಾಕಷ್ಟು ಮುರಿದು ಕೊಡುತ್ತಾರೆ. ಇಡೀ ತಾಲ್ಲೂಕು ಪೂರ್ತಿ ಬೆಳೆ ನಾಶವಾಗಿದ್ದರೆ ಮಾತ್ರ ವಿಮೆ ಸಾಲ ಬರುತ್ತದೆಂದು ಹೇಳುತ್ತಾರೆ. ಈ ರೀತಿ ರೈತರನ್ನು ಸುಲಿಗೆ ಮಾಡುತ್ತಿದ್ದಾರೆ. ಬೆಳೆಗಾರರನ್ನು ವಿಮೆ ಹೆಸರಿನಲ್ಲಿ ಸುಲಿಗೆ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮಲ್ಲಿ ಅನೇಕ ಕಡೆ ಕೆರೆಗಳಿಗೆ ಅಕ್ರಮ ಪ್ರವೇಶ ಮಾಡಿ ಇವತ್ತು ಬೆಳೆ ಬೆಳೆಯುತ್ತಿದ್ದಾರೆ; ಇವತ್ತು ಎಷ್ಟೋ ಕೆರೆಗಳು ತುಂಬದೇ ಇರುವುದಕ್ಕೆ ಕಾರಣ, ಕೆರೆಗಳ ಮೇಲೆ ನೀರನ್ನು ತಡೆಹಿಡಿದು, ಕೆರೆಯನ್ನು ಆಕ್ರಮಣ ಮಾಡಿಕೊಂಡಿದ್ದಾರೆ. ಇದನ್ನು ತಕ್ಷಣ ನಿಲ್ಲಿಸಬೇಕು. ಇದರ ಬಗ್ಗೆ ಸೂಕ್ತವಾದ ಮತ್ತು ದಿಟ್ಟವಾದ ಕ್ರಮ ತೆಗೆದುಕೊಂಡು, ಎಲ್ಲೆಲ್ಲಿ ಕೆರೆಗಳನ್ನು ಆಕ್ರಮಣ ಮಾಡಿಕೊಂಡಿದ್ದಾರೆ ಅಂತಹ ಕಡೆಗಳಲ್ಲಿ ಅವರನ್ನು ಬಿಡಿಸುವ ಕೆಲಸ ಮಾಡಬೇಕು. ಹಿಂದಿನ ಕಾಲದವರು ವೈಜ್ಞಾನಿಕವಾಗಿ ಕೆರೆಗಳನ್ನು ಕಟ್ಟಿದ್ದಾರೆ. ಈ ಕೆರೆಗಳ ಹೂಳನ್ನು ತೆಗೆಸುವ ಕೆಲಸವನ್ನು ಮಲೆನಾಡು ಭಾಗದಲ್ಲಿ ಕೈಗೊಳ್ಳುವಂತೆ ಶೀಘ್ರವಾಗಿ ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ನಮ್ಮಲ್ಲಿ ನದಿ, ಜಲಸಂಪತ್ತು ಇದ್ದರೂ ಕೂಡ ಸಾಕಷ್ಟು ನೀರಿನ ಉಪಯೋಗವನ್ನು ಸರಿಯಾಗಿ ನಾವು ಮಾಡಿಕೊಳ್ಳುತ್ತಿಲ್ಲ. ನಾವು ಬೆಳೆಯುತ್ತಿರುವ ಬೆಳೆಗಳನ್ನೂ ಕೂಡ ಬದಲಾವಣೆ ಮಾಡಬೇಕು. ಎಲ್ಲೆಲ್ಲಿ ನೀರಾವರಿ ಇದೆ, ಅಂತಹ ಕಡೆಗಳಲ್ಲೆಲ್ಲಾ ಬರೀ ಭತ್ತ, ಕಬ್ಬು ಬೆಳೆಯುತ್ತೇವೆ. ಮುಕ್ಕಾಲು ಭಾಗ ನೀರು ಈ ಬೆಳೆಗಳಿಗೆ ಹೋಗುತ್ತದೆ. ಇಸ್ರೇಲ್ ದೇಶದಲ್ಲಿ ಗೆಲಿಲೀ ಎಂಬ ಸರೋವರದಿಂದ ಇಡೀ ದೇಶಕ್ಕೆ ಆಗುವಷ್ಟು ಬೆಳೆ ಬೆಳೆದುಕೊಳ್ಳುತ್ತಿದ್ದಾರೆ. ಅಲ್ಲಿಯ ನೀರನ್ನು ಇಡೀ ದೇಶದಲ್ಲಿ ಉಪಯೋಗ ಮಾಡಿಕೊಂಡು ಬೇಸಾಯ ಮಾಡುತ್ತಿದ್ದಾರೆ. ಅಲ್ಲಿ ಡ್ರಿಪ್ ಇರಿಗೇಷನ್ ಮಾಡುತ್ತಾರೆ. ಅಂತಹ ನೀರಾವರಿ ಇಲ್ಲಿ ಇಲ್ಲ. ಎಲ್ಲರೂ ನೀರಾವರಿ ಇರುವ ಕಡೆ ಬತ್ತ ಬೆಳೆಯುತ್ತಾರೆ. ಇಸ್ರೇಲ್‌ನಲ್ಲಿ ಒಂದು ಸರೋವರ ಬಿಟ್ಟರೆ, ಬೇರೆ ಯಾವ ಕೆರೆಕಟ್ಟೆಗಳೂ ಇಲ್ಲ. ಅಂತಹ ಬೆಂಗಾಡು ಪ್ರದೇಶದಲ್ಲಿ ಬೇಸಾಯ ಮಾಡುತ್ತಿದ್ದಾರೆ. ನಮ್ಮಲ್ಲಿ ಬರೀ ಭತ್ತ, ಕಬ್ಬು ಬೆಳೆಯುವುದಕ್ಕೆ ಹೋಗಿ ಇರತಕ್ಕ ನೀರನ್ನು ಬರೀ ಈ ಬೆಳೆಗಳಿಗೇ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ನೀರಿನ ವಿತರಣೆ ಸರಿಯಾಗಿ ಆಗುತ್ತಿಲ್ಲ ಈ ಸಾರಿ ಎಂದೆಂದೂ ಕಾಣದ ಬರಗಾಲವನ್ನು ಮಲೆನಾಡಿನಲ್ಲಿ ನಾವು ಕಂಡಿದ್ದೇವೆ. ಎರಡನೇ ಬೆಳೆ ಬೆಳೆಯುವ ಸ್ಥಿತಿ ಇಲ್ಲ, ಆ ಅಭ್ಯಾಸವೂ ಇಲ್ಲ. ಇಂತಹ ಪರಿಸ್ಥಿತಿ ಬಂದು ರೈತರು ಕಂಗಾಲಾಗಿರುವುದೇ ಅಲ್ಲ. ಕೂಲಿಕಾರರೂ ಕೆಲಸ ಇಲ್ಲದೆ ಅಲೆದಾಡುತ್ತಿದ್ದಾರೆ.

ಈಗ ಮಲೆನಾಡಿನವರು ಇನ್ನೆಲ್ಲಿಗೆ ಹೋಗಬೇಕು ಎಂಬ ಪರಿಸ್ಥಿತಿಗೆ ತಲುಪಿದ್ದಾರೆ. ಈ ಸಂದರ್ಭದಲ್ಲಿ ನಾನು ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ. ಇಡೀ ಮಲೆನಾಡಿನ ಎಲ್ಲಾ ತಾಲ್ಲೂಕುಗಳನ್ನು, ಅಂದರೆ ಶಿವಮೊಗ್ಗ ಜಿಲ್ಲೆ, ಚಿಕ್ಕಮಂಗಳೂರು ಜಿಲ್ಲೆಯ ಎಲ್ಲಾ ಭಾಗವನ್ನೂ ಪೂರ್ತಿಯಾಗಿ ಬರಗಾಲ ಪ್ರದೇಶ ಎಂದು ಘೋಷಣೆ ಮಾಡಬೇಕು. ಈ ಸಾರಿ ಅದೇನು ಗ್ರಹಚಾರವೋ ಮಲೆನಾಡಿಗೆ ಅತ್ಯಂತ ಕೆಟ್ಟ ಪರಿಸ್ಥಿತಿ ಬಂದುಬಿಟ್ಟಿದೆ. ಇಲ್ಲಿಯವರೆಗೆ ಮಲೆನಾಡಿನ ಜನ ಬರಗಾಲ ಪರಿಸ್ಥಿತಿಯನ್ನು ನೋಡದೇ ಇರುವ ಜನರಾಗಿದ್ದರು. ಈಗ ಅವರು ಹೊಸದಾಗಿ ಬರಗಾಲ ಪರಿಸ್ಥಿತಿಯನ್ನು ನೋಡುತ್ತಿರುವುದರಿಂದ ಇವರ ಬಗ್ಗೆ ವಿಶೇಷವಾದ ಲಕ್ಷ್ಯವನ್ನು

ವಹಿಸಬೇಕೆಂದು ಕೋರುತ್ತೇನೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಇದುವರೆಗೆ ನಮ್ಮ ಭಾಗದಲ್ಲಿ ಒಂದು ಸಾರಿಯೂ ಬರಗಾಲ ಪರಿಹಾರ ಕಾಮಗಾರಿಯನ್ನು ತೆಗೆದುಕೊಂಡಿಲ್ಲ. ನಮ್ಮ ಯಾವುದೇ ಚರಿತ್ರೆಯಲ್ಲಿ ನೋಡಿದರೂ ಕೂಡಾ ನಮ್ಮ ಮಲೆನಾಡಿನ ಭಾಗಕ್ಕೆ ಇಂತಹ ಪರಿಹಾರ ಬಂದಿಲ್ಲ, ಇಂತಹ ಪರಿಹಾರವನ್ನು ಮಲೆನಾಡಿನವರು ಪಡೆದಿಲ್ಲ. ಈ ಸಾರಿ ಅದಕ್ಕೋಸ್ಕರವಾಗಿ ಮಲೆನಾಡಿನ ಭಾಗಕ್ಕೆ ಆದ್ಯತೆಯನ್ನು ಕೊಟ್ಟು ಅವರಿಗೆ ಪರಿಹಾರವನ್ನು ನೀಡಬೇಕು ಮತ್ತು ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯಿಸುತ್ತಾ, ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೇ, ಈಗತಾನೆ ನಮ್ಮ ಮಲೆನಾಡಿನ ಸದಸ್ಯರೂ, ಶಾಸಕರೂ ಆದ ಶ್ರೀಮಾನ್ ಧರ್ಮಪ್ಪನವರು ಹೇಳಿದಹಾಗೆ ಹಿಂದೆ ಬೇರೆ ಜಿಲ್ಲೆಗಳಲ್ಲಿ ಬರಗಾಲ ಬಂದಿದ್ದನ್ನು ನಾವು ಕೇಳಿದ್ದೇವೆಯೇ ವಿನಹ, ಅದನ್ನು ನೋಡಿದ ಅನುಭವ ನಮ್ಮ ಕಡೆಯವರಿಗೆ ಇಲ್ಲ. ಬರಗಾಲ ಪರಿಹಾರ ನಿಧಿಯನ್ನು ಅಪೇಕ್ಷೆ ಮಾಡಿದವರೂ ಅಲ್ಲ, ಅದನ್ನು ತೆಗೆದುಕೊಂಡವರೂ ಅಲ್ಲ. ದುರಾದೃಷ್ಟ ವಶಾತ್ ನಮ್ಮ ಜಿಲ್ಲೆಯಲ್ಲೂ ಕೂಡಾ ಜುಲೈ ತಿಂಗಳಾದರೂ ಮಳೆ ಬಾರದೆ ಕಷ್ಟ ಆಯಿತು. ಆಗಸ್ಟ್ ತಿಂಗಳ ಮಧ್ಯ ಭಾಗದಲ್ಲಿ ಮಳೆ ಬಂತು. ಆದರೂ ಅದರಿಂದ ನಮ್ಮ ನಾಟಿಗೆ ಏನೂ ಪ್ರಯೋಜನ ಆಗಲಿಲ್ಲ. ಸಾಧಾರಣವಾಗಿ ಬಿತ್ತನೆ ಮಾಡಿದ ೨೩ ರಿಂದ ೨೫ ದಿನಗಳಲ್ಲಿ ಪೈರನ್ನು ಕಿತ್ತು ನಾಟಿ ಮಾಡುವಂತಹದ್ದು ಕ್ರಮ. ಆದರೆ ಜುಲೈ ತಿಂಗಳಲ್ಲಿ ಮಳೆ ಇಲ್ಲದಿದ್ದುದರಿಂದ, ಗದ್ದೆಗಳಲ್ಲಿ ನೀರು ಇಲ್ಲದೇ ಇದ್ದುದರಿಂದ ೫೦—೬೦ ದಿನಗಳ ನಂತರ ನಾಟಿ ಮಾಡಬೇಕಾಯಿತು. ಇದರಿಂದ ಭತ್ತದ ಇಳುವರಿ ಅರ್ಧಕ್ಕರ್ಧ ಕಡಿಮೆಯಾಗಿ ಬರೀ ಹುಲ್ಲು ಬೆಳೆಯುವ ಪ್ರಸಂಗ ಬಂದಿದೆ. ಶೇಕಡಾ ೭೫ ರಷ್ಟು ಭತ್ತದ ಗದ್ದೆಗಳಲ್ಲಿ ನಾಟಿ ಆಗಲಿಲ್ಲ. ಅಷ್ಟೇ ಅಲ್ಲ, ನಮ್ಮ ಕೃಷಿ ಇಲಾಖೆಯವರು ಏನೋ ಒಂದು ಸಮೀಕ್ಷೆ ಮಾಡಿದರು, ಅದನ್ನು ೭ ದಿವಸಗಳಲ್ಲಿ ಪೂರ್ಣ ಮಾಡಿದ್ದಾರೆ. ಕೃಷಿ ಇಲಾಖೆಯಲ್ಲೂ ಕೂಡಾ ಸಾಕಷ್ಟು ಸಿಬ್ಬಂದಿ ವರ್ಗದ ಹುದ್ದೆಗಳು ಖಾಲಿ ಉಂಟು, ಅದನ್ನು ಭರ್ತಿ ಮಾಡಬೇಕು. ಆದುದರಿಂದ ಅವರೂ ಕೂಡಾ ಸಮೀಕ್ಷೆಯನ್ನು ಸಮರ್ಪಕವಾಗಿ ಮಾಡಿ ವರದಿಯನ್ನು ಕೊಟ್ಟಿದ್ದಾರೆ ಎಂದು ನಾವು ಭಾವಿಸುವುದಿಲ್ಲ. ನಾನು ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ ನಂತರ ಪರಿಪೂರ್ಣವಾದ ಸಮೀಕ್ಷೆ ನಡೆಸಬೇಕು. ಆಗ ಜಿಲ್ಲೆಯ ಪರಿಸ್ಥಿತಿ ಸರಿಯಾಗಿ ಗೊತ್ತಾಗುತ್ತದೆ. ಮಾನ್ಯ ಅಮರನಾಥ ಶೆಟ್ಟರು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು. ಅವರು ಅಲ್ಲಿಗೆ ಪ್ರವಾಸ ಬಂದಾಗ ಅಲ್ಲಿನ ಅಧಿಕಾರವರ್ಗದವರ ಹತ್ತಿರ ಮಾತನಾಡುತ್ತಾ, ಜಿಲ್ಲೆಯಲ್ಲಿ ಬರಗಾಲವೇ ಇಲ್ಲ ಎಂದು ಹೇಳಿ ರೈತರ ಕೋಪಕ್ಕೆ ತುತ್ತಾಗಿದ್ದಾರೆ. ಇದನ್ನು ಪುನರ್ ಪರಿಶೀಲನೆ ಮಾಡಿ ಸರಿಯಾದ ಸಮೀಕ್ಷೆ ಮಾಡಿ ನಿಜವಾದ ತೊಂದರೆಯಾಗಿದ್ದರೆ ಪರಿಹಾರ ಕೊಡುವ ವ್ಯವಸ್ಥೆ ಮಾಡಬೇಕು. ಅವರು ಮಂತ್ರಿಗಳಾಗಬೇಕೆಂದು ನಾವೂ ಕೂಡಾ ಶಿಫಾರಸ್ಸು ಮಾಡಿದ್ದೇವೆ, ಅವರು ಕಂದಾಯ ಮಂತ್ರಿಗಳಿಗೆ ಹೇಳಬೇಕು, ನಮ್ಮ ಜಿಲ್ಲೆಯಲ್ಲಿ ಬರಗಾಲ ಇದೆ ಎಂಬುದನ್ನು ಮನವರಿಕೆ ಮಾಡಿಕೊಡಬೇಕು.

ಶ್ರೀ ಕೆ. ಅಮರನಾಥ ಶೆಟ್ಟಿ.—ನಾನು ಬರಗಾಲ ಇಲ್ಲ ಎಂದು ಹೇಳಿಲ್ಲ. ಆ ರೀತಿ ನಾನು ಹೇಳಿರುವುದಿಲ್ಲ, ಅದು ತಪ್ಪಾಗಿ ಪ್ರಕಟಣೆಯಾಗಿದೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಪತ್ರಿಕೆಯಲ್ಲಿ ಬಂದಿದೆ. ತಾವು ನಮ್ಮ ಜಿಲ್ಲೆಯ ಮಂತ್ರಿಗಳಾಗಿ ನಮ್ಮ ಕಡೆಯ ರೈತರಿಗೆ ಸಾಕಷ್ಟು ಉಪಕಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಬರೀ ಭತ್ತದ ವಿಚಾರ ಮಾತ್ರವಲ್ಲ, ಅಡಿಕೆ, ತೆಂಗು, ರಬ್ಬರು ಮುಂತಾದ ತೋಟದ ಬೆಳೆಗೂ ಕೂಡಾ ನಷ್ಟವಾಗಿವೆ. ಮಾನ್ಯ ವೈ. ಕೆ. ರಾಮಯ್ಯನವರು ನಮ್ಮ ಜಿಲ್ಲೆಗೆ ಬಂದಾಗ ಸೂಕ್ತವಾದ ರೀತಿಯಲ್ಲಿ ಮಾತನಾಡಿದ್ದಾರೆ. ಇದರಿಂದ ನಮಗೆ ಬಹಳ ಸಂತೋಷ ಆಯಿತು. ಅವರು ಪರಿಸ್ಥಿತಿಯ ಅರಿವಿದ್ದು ಮಾತನಾಡಿದ್ದಾರೆ. ಇನ್ನೊಂದು ವಿಚಾರ ಎಂದರೆ, ಈ ಬಗೆ ಕೂಡಾ ಸಮೀಕ್ಷೆ ನಡೆಸಿ, ಅಡಿಕೆ ಮರಗಳಿಗೆ ಎಷ್ಟು ನಷ್ಟವಾಗಿದೆ, ಇದೇ ರೀತಿ ತೆಂಗು ಮತ್ತು ರಬ್ಬರ್

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ಬೆಳೆಗಳಿಗೆ ಎಷ್ಟು ಹಾನಿಯಾಗಿದೆ ಇದರಿಂದ ಎಷ್ಟು ಇಳುವರಿ ಕಡಿಮೆಯಾಗಿದೆ ಎಂಬುದರ ಬಗ್ಗೆ ಮಾನ್ಯ ಕಂದಾಯ ಸಚಿವರು ನಿಗಾ ತೆಗೆದುಕೊಳ್ಳಬೇಕು. ಇನ್ನೊಂದು ವಿಚಾರ ಎಂದರೆ, ನಮ್ಮ ಜಿಲ್ಲೆಯಲ್ಲಿ ಹಾವು ಕಪ್ಪೆಗಳನ್ನು ನಾಶ ಮಾಡಿರುವುದರಿಂದ, ಇಲಿ, ಹೆಗ್ಗಣಗಳ ಹಾವಳಿ ಹಾಗೂ ಕ್ರಿಮಿಕೀಟಗಳ ಹಾವಳಿ ಜಾಸ್ತಿಯಾಗಿದೆ. ತೆಂಗಿನ ಮರಕ್ಕೆ ಹೆಗ್ಗಣಗಳು ಹತ್ತಿ ಎಷ್ಟು ಎಳನೀರನ್ನು ಕಡಿದುಹಾಕಿವೆ ಎಂಬುದನ್ನು ನೋಡಿದರೆ ಬಹಳ ಹಾನಿಯಾಗಿದೆ. ಇವುಗಳ ಹಾವಳಿ ನಮ್ಮಲ್ಲಿ ಜಾಸ್ತಿಯಾಗುತ್ತಾ ಉಂಟು ಅಂಗಡಿಯಲ್ಲಿ ಔಷಧಗಳನ್ನು ಕೇಳಿದರೆ ಅದೂ ಕೂಡಾ ಇಲ್ಲ. ಈ ಕ್ರಿಮಿಕೀಟಗಳ ಹಾವಳಿಯನ್ನು ಹಾಗೂ ಇಲಿ ಹೆಗ್ಗಣಗಳ ಹಾವಳಿಯನ್ನು ನಿವಾರಣೆ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡದಿದ್ದರೆ ತೆಂಗಿನ ಬೆಳೆ ಅರ್ಧಕ್ಕರ್ಧ ನಾಶವಾಗುವ ಸಂದರ್ಭ ಉಂಟು ಎಂದು ಹೇಳುತ್ತೇನೆ. ಅಷ್ಟೇ ಅಲ್ಲ, ನಮ್ಮ ನೀರಾವರಿ ಯೋಜನೆ ಬಗ್ಗೆ ನೋಡಿದರೆ ನಮ್ಮ ಜಿಲ್ಲೆಯಲ್ಲಿ ಬರೀ ಮಳೆ ನೀರನ್ನು ಅವಲಂಬಿಸಿಕೊಂಡು ಬೆಳೆ ಮಾಡುವಂಥ ವ್ಯವಸ್ಥೆ ಇದೆ. ದೊಡ್ಡ ನೀರಾವರಿ ಯೋಜನೆಗಳು ನಮ್ಮ ಕಡೆ ಇಲ್ಲ. ವರಾಹಿ ನೀರಾವರಿ ಯೋಜನೆಗೆ ನಮ್ಮ ಸರ್ಕಾರ ಇದ್ದಾಗ ಮಾನ್ಯತೆ ಕೊಟ್ಟಿತ್ತು. ಆದರೆ, ಇವತ್ತು ಆ ಯೋಜನೆಗೆ ಒಂದು ನಯಾಪೈಸೆ ಕೂಡ ಖರ್ಚು ಮಾಡಿಲ್ಲ. ವರಾಹಿ ಯೋಜನೆಗೆ ಕೊಟ್ಟ ಹಣ ಬರೀ ರಸ್ತೆ ಅದೂ ಇದು ಮಾಡುವುದಕ್ಕೆ ಖರ್ಚಾಗಿರುವುದುಂಟು. ಇನ್ನು ಮುಂದಾದರೂ ಈ ಯೋಜನೆಯನ್ನು ಮಾಡಲಿಕ್ಕೆ ಪ್ರಯತ್ನ ಮಾಡಿ ನಮ್ಮ ಕಡೆಗೆ ನೀರಿನ ಸೌಕರ್ಯವನ್ನು ಕಲ್ಪಿಸಿಕೊಡ ಬೇಕೆಂದು ನಾನು ಸರ್ಕಾರವನ್ನು ತಮ್ಮ ಮುಖೇನ ಕೇಳಿಕೊಳ್ಳುತ್ತೇನೆ. ಅದೇ ರೀತಿ ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ಮತ್ತು ಸಣ್ಣಪುಟ್ಟ ನೀರಾವರಿ ಯೋಜನೆಗಳಿಗೆ ಜಿಲ್ಲಾ ಪರಿಷತ್ತಿನವರ ಹತ್ತಿರ ಹೋದರೆ ಅವರು ನಮ್ಮ ಹತ್ತಿರ ಹಣ ಇಲ್ಲ ಎಂದು ಹೇಳುತ್ತಾರೆ. ಮಂಡಲ ಪಂಚಾಯಿತಿಗಳಿಗೆ ವಹಿಸಿಕೊಟ್ಟಿರುವ ಕೆಲಸಗಳು ಹಣ ಇಲ್ಲದೆ ಅರ್ಧಕ್ಕೆ ಸ್ಥಗಿತಗೊಂಡಿವೆ. ವೆಂಟೆಡ್ ಡ್ಯಾಮ್‌ಗಳಿಗೆ ಹಲಗೆಗಳು ಸಿಗುತ್ತಿಲ್ಲ. ಆದುದರಿಂದ ಮಾನ್ಯ ಸರ್ಕಾರದವರು ಈ ವರ್ಷವೇ ನಮ್ಮ ಜಿಲ್ಲೆಯನ್ನು ಬರಗಾಲದ ಜಿಲ್ಲೆ ಎಂದು ಪರಿಗಣಿಸಿ ಯಾವ ರೀತಿಯಲ್ಲಿ ಬೇರೆ ಬರಗಾಲ ಜಿಲ್ಲೆಗಳಿಗೆ ಪರಿಹಾರವನ್ನು ಒದಗಿಸುತ್ತೀರೋ ಅದೇ ಮಟ್ಟದಲ್ಲಿ ಪರಿಹಾರ ಸಿಗುವ ರೀತಿಯಲ್ಲಿ ನಮ್ಮ ಜಿಲ್ಲೆಗೂ ಒದಗಿಸಿಕೊಡಿ. ನೀರಾವರಿ ಯೋಜನೆಗಳಿಗೆ ಆದ್ಯತೆ ಕೊಟ್ಟು ನಮ್ಮ ಜಿಲ್ಲೆಯನ್ನು ರಕ್ಷಣೆ ಮಾಡ ಬೇಕೆಂದು ಸರ್ಕಾರದಲ್ಲಿ ವಿನಂತಿಸಿಕೊಂಡು ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಮಾನ್ಯ ಕಂದಾಯ ಸಚಿವರು ಕ್ಷಾಮ ಮತ್ತು ಅದರ ಪರಿಹಾರದ ಬಗ್ಗೆ ಈ ಸದನದಲ್ಲಿ ಮಂಡಿಸಿರತಕ್ಕಂಥ ವರದಿಯನ್ನು ನಾನು ಸ್ವಾಗತಿಸುತ್ತಾ, ಅನೇಕ ಜನ ನನ್ನ ಸ್ನೇಹಿತರುಗಳು ಮಾತನಾಡಿರುವುದರ ಜೊತೆಗೆ ನನಗೆ ತಿಳಿದಿರುವ ವಿಷಯಗಳನ್ನೂ ಸರ್ಕಾರಕ್ಕೆ ತಿಳಿಸಲು ಇಷ್ಟಪಡುತ್ತೇನೆ. ಈ ವರದಿಯಲ್ಲಿ ನಮೂದಿಸಿರುವ ಪ್ರಕಾರ ತುಮಕೂರು ಜಿಲ್ಲೆಯಲ್ಲಿ ಶೇಕಡ ಒಂದರಷ್ಟು ಕೂಡ ಬಿತ್ತನೆ ಆಗಿಲ್ಲವೆಂದು ತಿಳಿದು ಬಂದಿದೆ, ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನ ಹರಿಸಬೇಕು. ತುಮಕೂರು ಜಿಲ್ಲೆಗೆ ಪರಿಹಾರವನ್ನು ಒದಗಿಸುವ ಬಗ್ಗೆ ಪ್ರಥಮ ಆದ್ಯತೆಯನ್ನು ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತುಮಕೂರು ಜಿಲ್ಲೆಯಲ್ಲಿ ಈಗ ಮಳೆ ಬಂದರೂ ಸಹ ಸರಿಯಾಗಿ ಬೆಳೆ ಆಗುವುದಿಲ್ಲ ಎನ್ನುವುದನ್ನು ಸರ್ಕಾರ ಮನಗಾಣಬೇಕು. ಇನ್ನೂ ಅನೇಕ ಕಡೆಗಳಲ್ಲಿ ಬಿತ್ತನೆ ಕೂಡ ಆಗಿಲ್ಲ, ಕೆರೆಗಳಿಗೆ ನೀರು ಬಂದಿಲ್ಲ, ಬಾವಿಗಳು ಬತ್ತಿ ಹೋಗಿ ರೈತರುಗಳು ಕಳವಳಕಾರಿಯಾಗಿದ್ದಾರೆ. ತುಮಕೂರು ಜಿಲ್ಲೆಯು ಸತತವಾಗಿ ೫ ವರ್ಷಗಳಿಂದಲೂ ಬರಗಾಲವನ್ನು ಅನುಭವಿಸುತ್ತಿದೆ. ಕುಡಿಯುವ ನೀರಿಗಾಗಿ ಜನರು ಪರದಾಡುವ ಸ್ಥಿತಿಯಲ್ಲಿದ್ದಾರೆ. ಕುಡಿಯುವ ನೀರಿನ ಬೋರ್‌ವೆಲ್‌ಗಳನ್ನು ತೋಡುವುದಕ್ಕೆ ತುಮಕೂರು ಜಿಲ್ಲೆಯಲ್ಲಿ ಎರಡು ರಿಗ್ ಯಂತ್ರಗಳು ಮಾತ್ರ ಇವೆ. ಎರಡು ರಿಗ್ ಯಂತ್ರಗಳು ಇರುವುದರಿಂದ ನಿರೀಕ್ಷಿತ ಮಟ್ಟದಲ್ಲಿ ಈ ಬೋರ್‌ವೆಲ್‌ಗಳು ಕೊರೆಯುವುದಕ್ಕೆ ಆಗುತ್ತಿಲ್ಲ. ಆದುದರಿಂದ ಸರ್ಕಾರವು ಇನ್ನೂ ಕೆಲವು ರಿಗ್ ಯಂತ್ರಗಳನ್ನು ಒದಗಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಅದೂ ಅಲ್ಲದೆ ಈಗಾಗಲೇ ತೋಡಿರುವ ಕೊಳವೆ ಬಾವಿಗಳಲ್ಲಿ ಅನೇಕ ಕೊಳವೆ ಬಾವಿಗಳು ಕೆಟ್ಟು ಹೋಗಿರುತ್ತವೆ. ಈ ಕೆಟ್ಟಿರುವ ಕೊಳವೆ ಬಾವಿಗಳನ್ನು ರಿಪೇರಿ ಮಾಡಿಸುವ ಬಗ್ಗೆ ಅಧಿಕಾರಿಗಳು ಸರಿಯಾಗಿ ಗಮನ ಹರಿಸುತ್ತಿಲ್ಲ. ಸಿಬ್ಬಂದಿ ಕೊರತೆ ಇರುವುದರಿಂದ ಕೆಟ್ಟಿರುವ ಕೊಳವೆ ಬಾವಿಗಳನ್ನು ರಿಪೇರಿ ಮಾಡಿಸಿಲ್ಲವೆಂದು ಕಾಣುತ್ತದೆ. ಆದುದರಿಂದ ಸರ್ಕಾರವು ಆದಷ್ಟು ಜರೂರಾಗಿ ಸಂಬಂಧಪಟ್ಟ ಸಿಬ್ಬಂದಿವರ್ಗದವರನ್ನು ನೇಮಿಸಿ ಕಳುಹಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳು

ತ್ತೇನೆ. ಇನ್ನು ಆಹಾರ ವಿತರಣೆ ಬಗ್ಗೆ ಹೇಳಬೇಕಾದರೆ, ಗ್ರಾಮಾಂತರ ಮಟ್ಟದಲ್ಲಿ ಬಡ ಜನರಿಗೆ ಹಸಿರು ಕಾರ್ಡ್ ಮತ್ತು ಕೇಸರಿ ಬಣ್ಣದ ಕಾರ್ಡ್‌ಗಳನ್ನು ಕೊಟ್ಟಿದ್ದಾರೆ. ಹಸಿರು ಕಾರ್ಡ್‌ಗಳನ್ನು ಹಂಚಿರುವಲ್ಲಿ ಅನೇಕ ಲೋಪದೋಷಗಳು ಇವೆ. ಯಾರು ಬಡವರಿದ್ದು ಅರ್ಹರಾಗಿರುತ್ತಾರೋ ಅಂಥಹವರಿಗೆ ಹಸಿರು ಕಾರ್ಡ್ ಸಿಕ್ಕಿಲ್ಲ. ಯಾರು ಅರ್ಹರಲ್ಲವೋ ಅಂಥವರಿಗೆ ಹಸಿರು ಕಾರ್ಡ್ ಸಿಕ್ಕಿದೆ. ಇದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲನೆ ನಡೆಸಿ ಅರ್ಹರಾದವರಿಗೆ ಮಾತ್ರ ಹಸಿರು ಕಾರ್ಡ್ ಸಿಗುವಂತೆ ಮಾಡಬೇಕು. ಆಮೇಲೆ ಕ್ಷಾಮ ಬಂದಿರುವ ಗ್ರಾಮಾಂತರ ಪ್ರದೇಶಗಳಿಗೆ ಆಹಾರ ಧಾನ್ಯಗಳನ್ನು ಒದಗಿಸುವಾಗ ಎಲ್ಲಾ ಜನರಿಗೂ ಸಿಗುವಂತೆ ನೋಡಿ ಕೊಳ್ಳಬೇಕು. ಆಹಾರ ಧಾನ್ಯಗಳನ್ನು ಸರಬರಾಜು ಮಾಡುವ ಗುತ್ತಿಗೆದಾರರು ಕೆಲವು ಪ್ರದೇಶಗಳಿಗೆ ಆಹಾರ ಧಾನ್ಯಗಳನ್ನು ಸರಬರಾಜೇ ಮಾಡುವುದಿಲ್ಲ. ಇದರಿಂದ ಬಹಳ ಜನರಿಗೆ ತೊಂದರೆಯಾಗುತ್ತದೆ. ಇದರಿಂದಾಗಿ ಎಷ್ಟೋ ಪ್ರಮಾಣದ ಆಹಾರ ಧಾನ್ಯಗಳು ಎಲ್ಲೆಲ್ಲಿ ಸಿಗಬೇಕೋ, ಅಲ್ಲಿ ಸರಿಯಾಗಿ ಸಿಗುವುದರ ಬಗ್ಗೆ ಒಂದು ವ್ಯವಸ್ಥಿತವಾದ ವ್ಯವಸ್ಥೆ ಇಲ್ಲ. ಆದುದರಿಂದ ಈ ಸಾಗಾಣಿಕೆಯ ಬಗ್ಗೆ ಕಟ್ಟುನಿಟ್ಟಾದ ಒಂದು ವ್ಯವಸ್ಥೆ ಆಗಬೇಕಾಗಿದೆ.

ಇನ್ನು ಕಾಮಗಾರಿಗಳನ್ನು ತೆಗೆದುಕೊಳ್ಳುವಾಗ ಎಸ್‌ಬಿಆರ್. ಪದ್ಧತಿ ಪ್ರಕಾರ ಮಾಡುವುದರಿಂದಾಗಿ, ಆ ಒಂದು ನೀತಿ ನಿಯಮಗಳನ್ನು ಅನುಸರಿಸುವುದರಿಂದಾಗಿ, ಅಧಿಕಾರಿಗಳು ಸಾಕಷ್ಟು ಹಣವನ್ನು ಈ ಮೂಲಕ ಲಪಟಾಯಿಸುವುದಕ್ಕೆ ಅನುವು ಮಾಡಿಕೊಟ್ಟಂತಾಗಿದೆ. ಈ ವಿಚಾರವು ಸರ್ಕಾರದವರಿಗೆ ಮತ್ತು ಜನತೆಗೂ ಕೂಡ ಗೊತ್ತಿದೆ. ಈಗ ಇರುವ ಪದ್ಧತಿಯನ್ನು ಮಾರ್ಪಾಡು ಮಾಡಿ, ಕಾಮಗಾರಿಗಳ ಬಗ್ಗೆ ಏನು ಹಣವನ್ನು ಖರ್ಚು ಮಾಡುತ್ತಿದ್ದೀರಿ, ಅದು ಪೂರ್ಣ ಪ್ರಮಾಣದಲ್ಲಿ ಸದ್ವಿನಿಯೋಗವಾಗುವಂತೆ ಕಾನೂನುಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಾ, ಯಾವುದೇ ಕಾಮಗಾರಿಗಳನ್ನು ತೆಗೆದುಕೊಳ್ಳುವಾಗ ಶಾಶ್ವತವಾಗಿರತಕ್ಕಂಥ ಕೆಲಸಕಾರ್ಯಗಳಿಗೆ ಆದ್ಯತೆಯನ್ನು ನೀಡಬೇಕೆಂದು ಹೇಳಲಿಚ್ಛಿಸುತ್ತೇನೆ. ಮತ್ತು ಆ ಬಗ್ಗೆ ಸೂಕ್ತ ಸಲಹೆ ಹಾಗೂ ಆದೇಶಗಳನ್ನು ಎಲ್ಲಾ ತಾಲ್ಲೂಕಿನ ಸಂಬಂಧಪಟ್ಟವರಿಗೆ ನೀಡಿ, ಅಲ್ಲೆಲ್ಲಾ ಪ್ರಾಮಾಣಿಕವಾಗಿ ಕೆಲಸಗಳು ಈ ಕಾಮಗಾರಿಯಡಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು. ಮತ್ತು ನೀರಾವರಿ ಇಲಾಖೆಯ ಮೂಲಕ ಖಾಯಂ ಕಾಮಗಾರಿಗಳು ಆಗುವಂತೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೂಡ ಸೂಕ್ತ ರೀತಿಯಲ್ಲಿ ಕೆಲಸವನ್ನು ತೆಗೆದುಕೊಂಡಲ್ಲಿ ಆ ಜನರಿಗೆ ಶಾಶ್ವತವಾದ ಒಂದು ಪರಿಹಾರ ದೊರಕುತ್ತದೆ. ಅಂತಹ ಕೆಲಸಗಳನ್ನು ನೋಡಿಕೊಂಡು ಆದ್ಯತೆಯನ್ನು ಕೊಟ್ಟು ಮಾಡಿಸಬೇಕು.

ಇನ್ನು ರೈತರುಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೋಸ್ಕರ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಅದು ಸಫಲವಾದೀತು ಎಂಬ ಬಗ್ಗೆ ಸಮಗ್ರ ಪರಿಶೀಲನೆ ನಡೆಸಿ, ತನ್ಮೂಲಕ ಕೃಷಿಕ ಸಮಾಜದ ಆರ್ಥಿಕ ಸುಧಾರಣೆ ಮಾಡಲು ಅನುಕೂಲವಾಗುವಂತೆ ಒಂದು ಆಯೋಗವನ್ನು ರಚನೆ ಮಾಡಬೇಕು. ಶೋಷಣೆಗೆ ಒಳಗಾಗಿರತಕ್ಕಂತಹವರ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕು. ಕೃಷಿ ಕಾರ್ಮಿಕರಿಗೆ ಯೋಗ್ಯ ಕೂಲಿ ದೊರಕುವಂತೆ ನೋಡಿಕೊಳ್ಳಬೇಕು. ರೈತರು ಬೆಳೆದ ಬೆಳೆಗೆ ಯೋಗ್ಯ ಬೆಲೆ ದೊರಕಿಸಿಕೊಡತಕ್ಕಂಥಾದ್ದರ ಬಗ್ಗೆ ಒಂದು ಪ್ರೈಸ್ ಬೋರ್ಡ್‌ನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರಕಾರದವರೊಡನೆ ಸಮಾಲೋಚನೆ ನಡೆಸಿ, ಅದನ್ನು ಜಾರಿಗೆ ತರಬೇಕು.

ಇನ್ನು ದನಕರುಗಳಿಗೆ ಒದಗಿಸುತ್ತಿರುವ ಮೇವಿನ ಬಗ್ಗೆ ಹೇಳುವುದಾದರೆ, ಸದ್ಯಕ್ಕೆ ಪೂರೈಕೆಯಾಗುತ್ತಿರುವ ಮೇವಿನ ಗುಣಮಟ್ಟ ಅಷ್ಟಾಗಿ ಸರಿಯಾಗಿಲ್ಲ. ಅದರ ಬದಲು ಪ್ರತಿಯೊಂದು ಮಂಡಳಕ್ಕೂ ಒಂದು ನೂರು ಎಕರೆಗಳಷ್ಟು ಜಾಗವನ್ನು ಮೀಸಲಾಗಿಟ್ಟು, ಅಲ್ಲಿ ಉತ್ತಮವಾದಂತಹ ನೀರಿನ ಸೌಕರ್ಯವನ್ನು ಮಾಡಿಕೊಟ್ಟು, ಅವರಿಗೆ ಆ ಸ್ಥಳದಲ್ಲಿ ತಮಗೆ ಬೇಕಾದ ಹುಲ್ಲು ಬೆಳಸಿಕೊಳ್ಳಲು ಅನುವು ಮಾಡಿಕೊಟ್ಟರೆ ಅದರಿಂದ ಉತ್ತಮ ಪ್ರತಿಫಲ ನಿರೀಕ್ಷೆ ಮಾಡಬಹುದಾಗಿದೆ. ಇದರಿಂದ ಮೇವಿನ ಪೂರೈಕೆಯಲ್ಲಾಗುತ್ತಿರುವ ಹಣದ ಪೋಲು ನಿಲ್ಲುವುದರ ಜೊತೆಗೆ ಜನರಿಗೂ ತುಂಬಾ ಅನುಕೂಲವಾಗುತ್ತದೆ ಎಂಬ ವಿಷಯವನ್ನು ತಮ್ಮಲ್ಲಿ ಪ್ರಸ್ತಾಪಿಸುತ್ತಾ, ನಮ್ಮ ತುಮಕೂರು ಜಿಲ್ಲೆಯಲ್ಲಿ ಶಾಶ್ವತವಾದಂತಹ ಒಂದು ನೀರಾವರಿ ವ್ಯವಸ್ಥೆಯಾಗಬೇಕಾಗಿದೆ. ತುಮಕೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿ ಹೇಮಾವತಿಯಿಂದ ನೀರು ಪಡೆಯತಕ್ಕಂಥ ಒಂದು ವ್ಯವಸ್ಥೆ ಆಗಿದೆ. ಇನ್ನೂ ಕೂಡಾ ಅನೇಕ ತಾಲ್ಲೂಕುಗಳಲ್ಲಿನ ಈ ಬಾಬಿನ ತೊಂದರೆಯನ್ನು ನಿವಾರಿಸುವುದಕ್ಕೆ

ಸಾಧ್ಯ ಆಗುತ್ತಾ ಇಲ್ಲ. ಈ ತೊಂದರೆಯ ನಿವಾರಣೆಗಾಗಿ ಅಪ್ಪರ್ ಭದ್ರಾ ಯೋಜನೆಯನ್ನು ವಿಸ್ತರಿಸಿ ಕಾರ್ಯಗತಗೊಳಿಸುವುದರ ಬಗ್ಗೆ ಕೇಂದ್ರ ಸರಕಾರದವರಿಗೆ ಒತ್ತಾಯವನ್ನು ತರಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇಷ್ಟು ಮಾತುಗಳನ್ನು ಆಡಲು ನನಗೆ ಅವಕಾಶವನ್ನು ಕೊಟ್ಟ ಸನ್ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಜೂಗೌಡ (ಹನೂರು).—ಸನ್ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಯು ಉದ್ಭವವಾಗಿದೆ. ಶತಮಾನದ ಆದಿಯಿಂದಲೂ ಕೂಡ ಎಂದೂ ಕಂಡರಿಯದ ಪರಿಸ್ಥಿತಿಯ ಬಿಸಿ ನಮಗೆಲ್ಲರಿಗೆ ತಟ್ಟಿದೆ. ಬಹುಶಃ ಮುಂಗಾರು ಮತ್ತು ಹಿಂಗಾರು ಎರಡೂ ಮಳೆಗಳು ಕೈಕೊಟ್ಟ ಕಾರಣದಿಂದಾಗಿ ಈ ಭಯಾನಕ ಪರಿಸ್ಥಿತಿಯು ಉದ್ಭವವಾಗಿದೆ. ಭೂಮಿತಾಯಿಯ ಮಕ್ಕಳ ಈ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದೆ. ಈ ಪರಿಯ ಅನಾವೃಷ್ಟಿಯು ಬಂದಿರುವುದು ನಮ್ಮ ದುರ್ದೈವ ಎಂದು ಹೇಳಬೇಕಾಗಿದೆ. ಹಿಂದಿನ ವರ್ಷಗಳನ್ನು ನಮ್ಮ ಕಣ್ಣೆದುರು ಇರಿಸಿಕೊಂಡು ಮುಂದೆ ಬರಗಾಲ ತಲೆದೋರಬಹುದೆಂದು ಊಹಿಸಿಕೊಂಡು ಆ ಭೀಕರ ಪರಿಸ್ಥಿತಿಯನ್ನು ಎದುರಿಸಲು ನಾವು ಏನು ಮಾಡಬೇಕೆಂಬುದನ್ನು ಮುಂಚಿತವಾಗಿಯೇ ಯೋಚಿಸಿಕೊಂಡು ಸೂಕ್ತ ಕ್ರಮಗಳನ್ನು ಸಕಾಲಿಕವಾಗಿ ತೆಗೆದುಕೊಂಡಿದ್ದಲ್ಲಿ ಈ ಒಂದು ಭೀಕರ ಸ್ಥಿತಿಯು ಒದಗುತ್ತಿರಲಿಲ್ಲವೋ ಏನೋ ಎಂದು ಭಾವಿಸಬೇಕಾಗಿದೆ. ಒಂದು ವೇಳೆ ಮಳೆಯು ಸಕಾಲದಲ್ಲಿ ಸಾಕಷ್ಟು ಆಗಿದ್ದರೆ ಈ ಪರಿಸ್ಥಿತಿಯು ನಮಗೆ ಬರುತ್ತಿರಲಿಲ್ಲ. ಈಗ ನಾವು ಕಷ್ಟಕಾಲದಲ್ಲಿ ಇದ್ದೇವೆ.

2-00 ಪಿ.ಎಂ.

ಬರಗಾಲ ಬಂದಾಗ ಯಾವ ವರ್ಗಕ್ಕೆ ಎಷ್ಟು ಮಟ್ಟಿನ ಬಾಧೆ ತಪ್ಪುತ್ತದೆಂದು ಯೋಚನೆ ಮಾಡಿದಾಗ, ವ್ಯಾಪಾರಸ್ಥರಿಗೆ ಬರಗಾಲ ಬಂದಾಗ ವ್ಯಾಪಾರ ಸ್ವಲ್ಪ ಕಡಿಮೆಯಾಗಬಹುದು, ಆದರೆ ಹೊಟ್ಟೆಬಟ್ಟೆಗೆ ತೊಂದರೆಯಾಗಿ ಕಷ್ಟಪಡುವವರೆಂದರೆ ಕೃಷಿ ಕಾರ್ಮಿಕರು ಮತ್ತು ರೈತವರ್ಗ. ಇವರಲ್ಲಿ ಕೃಷಿ ಕಾರ್ಮಿಕರಿಗೆ ಕೆಲಸ ಸಿಕ್ಕದಿದ್ದರೆ ಕೆಲಸವಿರುವ ಕಡೆ ಹುಡುಕಿಕೊಂಡು ಹೋಗುವರು, ಆದರೆ ಬಡ ರೈತರು ಅಂದರೆ ನಾಲ್ಕೈದು ಎಕರೆ ಭೂಮಿ ಇಟ್ಟುಕೊಂಡು ಸ್ವಂತ ವ್ಯವಸಾಯ ಮಾಡುತ್ತಿರುವವರು ನಾಲ್ಕು ವರ್ಷದಿಂದ ಅನುಭವಿಸಿಕೊಂಡು ಬಂದಂಥ ಪರಿತಾಪ ಹೇಳುವುದು ಅಸಾಧ್ಯ. ಮೊದಲನೇ ವರ್ಷ ಸಾಲ ಮಾಡಿ ತಮ್ಮ ಭೂಮಿ ಹೇಗೋ ಆಬಾದು ಮಾಡಿದರು. ಬೆಳೆ ಬರಲಿಲ್ಲ. ತೆಗೆದುಕೊಂಡಿದ್ದ ಸಾಲ ತೀರಿಸಲಿಲ್ಲ, ಬಡ್ಡಿ ಬೆಳೆಯಿತು. ಮತ್ತೆ ಸಹಕಾರ ಸಂಘಗಳಲ್ಲೋ ಖಾಸಗಿಯವರಿಂದಲ್ಲೋ ಈ ಸಲವಾದರೂ ಬೆಳೆ ಬರಬಹುದು ಎಂದು ಸಾಲ ಮಾಡಿದರು. ಆ ಸಲವೂ ಬೆಳೆ ಬರಲಿಲ್ಲ, ಪರಿಣಾಮವಾಗಿ ಅರ್ಧ ಭೂಮಿ ಮಾರುವ ಪರಿಸ್ಥಿತಿ ಬಂತು. ಉಳಿದರ್ಧದಲ್ಲಿ ಮುಂದಿನ ವರ್ಷವಾದರೂ ಒಳ್ಳೆಯದಾಗಬಹುದೆಂಬ ಆಶಾ ಭಾವನೆಯನ್ನು ವ್ಯಕ್ತಮಾಡಿ ಮತ್ತೆ ಸಾಲ ಮಾಡಿ ಬೀಜ ಬಿತ್ತಿದರು. ಆ ಸಲವೂ ಮಳೆ ಬರದೆ ಬರ ಸೆರಗು ಚಾಚಿದಾಗ ಇರುವ ಜಮೀನನ್ನೂ ಮಾರಿಕೊಂಡು ಕೃಷಿ ಕಾರ್ಮಿಕನಾಗಿ ಪರದೇಶಿಯಾಗುವಂತಾಯಿತು. ಇದನ್ನು ಒಂದು ಉದಾಹರಣೆ ಮೂಲಕ ಹೇಳುವುದಾದರೆ ಯಾವನೋ ಒಬ್ಬ ಳ ಜೊತೆ ಎತ್ತು ಕಟ್ಟಿಕೊಂಡು ೧೫ ಎಕರೆ ಉಳುಮೆ ಮಾಡುತ್ತಿದ್ದ. ಒಂದು ನಾಲ್ಕು ವರ್ಷ ಬರಗಾಲ ಬಂದಾಗ ಅವನು ಸರ್ವಸ್ವವನ್ನೂ ಮಾರಬೇಕಾದ ಸ್ಥಿತಿಗೆ ಬಂದನು. ಆ ರೀತಿ ಮಾಡಿಯಾದ ಮೇಲೆ ಅವನಿಗೆ ಉಳಿದಿದ್ದು ಲಂಗೋಟಿ ಮಾತ್ರ. ಅದನ್ನು ಹಾಕಿಕೊಂಡು ಅವನು ದೇಶಾಂತರ ಹೋಗುತ್ತಿದ್ದಾಗ ಲಂಗೋಟಿಯೂ ಇಲ್ಲದ ನಿರ್ಗತಿಕನನ್ನು ನೋಡಿದ ಮೇಲೆ ಅವನು ಚಿಂತೆ ಬಿಟ್ಟನಂತೆ. ಇಂಥ ಕಷ್ಟ ನಮ್ಮ ಕೃಷಿ ಕಾರ್ಮಿಕರಿಗೆ ಮತ್ತು ಬಡ ರೈತರಿಗೆ ಬಂದಿದೆ ಸ್ವಾಮಿ. ಇದನ್ನು ನಾವು ಗಾಢವಾಗಿ ಯೋಚನೆ ಮಾಡಬೇಕಾಗಿದೆ. ಕೆಲವು ವಿಷಯಗಳಲ್ಲಿ ನಮ್ಮಿಂದ ಲೋಪಗಳೂ ಆಗಿರುವುದುಂಟು. ಹಿಂದೆ ಇದೇ ಸದನದಲ್ಲಿ ಹಿಂದೆ ಕೃಷಿ ರಾಜ್ಯ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶರು ಒಂದು ಯೋಜನೆ ಪ್ರಕಟಿಸಿ ರೈತರಿಗೆ ಧಾನ್ಯದ ಸಾಲದ ಯೋಜನೆಯನ್ನು ತಿಳಿಸಿದ್ದರು. ಸತತವಾಗಿ ಬರಗಾಲ ಬಂದರೆ ಪ್ರತಿ ರೈತ ಕುಟುಂಬಕ್ಕೆ ಮೂರು ಅಥವಾ ನಾಲ್ಕು ಕ್ವಿಂಟಾಲ್ ಧಾನ್ಯವನ್ನು ಸಾಲವಾಗಿ ಕೊಡುವುದಾಗಿಯೂ, ಕೇಂದ್ರ ಸರ್ಕಾರವೂ ಇದಕ್ಕೆ ಸಹಕಾರ ಕೊಡುತ್ತದೆಂಬ ಆಶ್ವಾಸನೆ ಕೊಟ್ಟಿದ್ದರು. ಆದರೆ ಆಶ್ವಾಸನೆ ಹಾಗೆಯೇ ಉಳಿಯಿತು.

ಜಾರಿಗೆ ಬರಲಿಲ್ಲ. ಈಗಲೂ ಏತಕ್ಕೋಸ್ಕರ ಕೇಂದ್ರದಿಂದ ಧಾನ್ಯವನ್ನು ಸಾಲ ಪಡೆದು ರೈತರಿಗೆ ಹಂಚುವ ಯೋಜನೆಯನ್ನು ರಾಜ್ಯ ಸರ್ಕಾರ ಯೋಚನೆ ಮಾಡಬಾರದು ? ಪ್ರತಿ ವರ್ಷ ರೈತ ಕುಟುಂಬ ಒಂದಕ್ಕೆ ನಾಲ್ಕೈದು ಕ್ವಿಂಟಾಲ್ ಧಾನ್ಯವನ್ನು ಸಾಲವಾಗಿ ಕೊಟ್ಟು ಮಳೆಬೆಳೆ ಚೆನ್ನಾಗಿ ಆದಾಗ ವಾಪಸ್ಸು ಪಡೆದುಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇವತ್ತು ಗ್ರಾಮಾಂತರ ಪ್ರದೇಶದ ಸಣ್ಣ ಕಾರ್ಮಿಕರಿಗೆ ನೀರಿಗೆ ತೆರಿಗೆ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೀರಿ. ಭೂಕಂದಾಯ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೀರಿ. ಗ್ರಾಮೀಣ ಅಧಿಕಾರಿಗಳು ಈ ಬಗ್ಗೆ ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಂದ ಆದೇಶ ಬಂದಿದೆ ಎಂದು ಹೇಳುತ್ತಾರೆ. ತಹಶೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳೆಲ್ಲ ಇದೇ ಕೆಲಸದ ಮೇಲಿದ್ದಾರೆ. ಇಷ್ಟಿಷ್ಟು ಹಣ ವಸೂಲು ಮಾಡದೇ ಹೋದರೆ ನನಗೇನು ಇನ್‌ಕ್ರಿಮೆಂಟ್ ಕಟ್ ಮಾಡುತ್ತಾರೆ ಅಂತ ತಹಶೀಲ್ದಾರ್ ಜನರಿಗೆ ಹೇಳಿ ವಸೂಲು ಮಾಡುತ್ತಿದ್ದಾರೆ. ದಯವಿಟ್ಟು ಇದನ್ನು ತಾತ್ಕಾಲಿಕವಾಗಿ ಕೈಬಿಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆಯೇ ಮಳೆಯಿಂದ ಬಿದ್ದ ನೀರು ಹಿಂಗದಂತೆ ಒಡ್ಡುಗಳನ್ನು ತೆಗೆಸುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಬಿದ್ದ ನೀರೆಲ್ಲ ಹರಿದುಹೋಗುತ್ತದೆ. ಇದರಿಂದ ಬಾವಿಗಳಿಗೂ ನೀರು ಸಿಗುತ್ತದೆ. ಈ ದೇಶದಲ್ಲಿ ಉತ್ತರದ ಕಡೆಗಳಲ್ಲಿ ಪ್ರವಾಹ ಬಂದು ಭೀಕರವಾಗಿರತಕ್ಕಂತಹ ಪರಿಸ್ಥಿತಿ ಉಂಟಾಗುತ್ತಿದೆ. ಬೆಳೆಗಳು ಹಾಳಾಗಿ ಕೆಲಸಗಳಿಗೆ ತೊಂದರೆಯಾಗುತ್ತಿದೆ. ದಕ್ಷಿಣದ ಕಡೆಗಳಲ್ಲಿ ಬರ ಬಂದು ನೀರಿಲ್ಲದೆ ತೊಂದರೆಯಾಗಿದೆ. ಉತ್ತರ ಪ್ರದೇಶದಲ್ಲಿ ಮಳೆ ಕಡಿಮೆಯಾದರೂ ಕೂಡ ಭೀಕರವಾಗಿ ಪ್ರವಾಹ ಬರುತ್ತದೆ ನದಿಗಳೆಲ್ಲಾ ತುಂಬಿ ಭಯಾನಕವಾದ ಪ್ರವಾಹ ಬಂದು ಪರಿಸ್ಥಿತಿ ಹದಗೆಟ್ಟಿದೆ. ಹಿಂದೆ ಯೋಚನೆ ಮಾಡಿದ ರೀತಿಯಲ್ಲಿ ಪಶ್ಚಿಮದಲ್ಲಿರತಕ್ಕಂತಹ ನದಿಗಳನ್ನು ದಕ್ಷಿಣಕ್ಕೆ ಒಂದುಗೂಡಿಸತಕ್ಕಂತಹ ವ್ಯವಸ್ಥೆ ಮಾಡಿದರೆ ದಕ್ಷಿಣಕ್ಕೂ ಕೂಡ ಅನುಕೂಲವಾಗುತ್ತದೆ. ಏತಕ್ಕೋಸ್ಕರ ಈ ರೀತಿ ಮಾಡಬಾರದು. ಪಶ್ಚಿಮ ಬಂಗಾಳ, ಬಿಹಾರ ಕಡೆಗಳಲ್ಲಿ ಕೋಟ್ಯಾನು ಕೋಟಿ ರೂಪಾಯಿಗಳು ನಷ್ಟವಾಗಿದೆ. ಈ ಪ್ರವಾಹವನ್ನು ತಪ್ಪಿಸಬೇಕಾದರೆ ನಮ್ಮ ತಜ್ಞರೂ ಕೂಡ ಇದರ ಬಗ್ಗೆ ಯೋಚನೆ ಮಾಡಬೇಕು. ಆ ನದಿಯ ನೀರನ್ನು ದಕ್ಷಿಣ ರಾಜ್ಯಗಳ ಕಡೆಗೆ ತಿರುಗಿಸುವಂತಹ ಪ್ರಯತ್ನ ಮಾಡಿದರೆ ನಷ್ಟವಾಗುವುದನ್ನು ತಪ್ಪಿಸಿ ಇಲ್ಲಿ ನಮಗೆ ಕೂಡ ಅನುಕೂಲವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ೩ನೇ ತಾರೀಖು ಪ್ರಧಾನ ಮಂತ್ರಿಗಳು ಕರೆದಿರತಕ್ಕಂತಹ ಸಭೆಯಲ್ಲಿ ಭಾಗವಹಿಸುವುದಕ್ಕೆ ಹೋಗುತ್ತಾರೆ. ಅಲ್ಲಿ ಇದನ್ನು ಏಕೆ ಪ್ರಸ್ತಾಪ ಮಾಡಬಾರದು. ಈ ಮೂಲಕ ತಮಗೆ ಒಂದು ಸಲಹೆಯನ್ನು ಕೊಡಲಿಚ್ಛಿಸುತ್ತೇನೆ ಕಾವೇರಿ ನದಿ ನೀರನ್ನು ಪಕ್ಕದಲ್ಲಿರತಕ್ಕಂತಹ ಗ್ರಾಮಗಳಿಗೆ ಹರಿಸಿ ಶಾಶ್ವತವಾದ ಬರ ಪರಿಹಾರವನ್ನು ಮಾಡುವುದಕ್ಕೋಸ್ಕರ ಏತಕ್ಕೆ ಒದಗಿಸಬಾರದು. ಎನ್‌ಆರ್‌ಇಪಿ ಯೋಜನೆಯಲ್ಲಿ ಕೊಳವೆ ಬಾವಿಗಳನ್ನು ತೋಡಿಸಿಕೊಡಿ. ಮತ್ತೆ ಬರ ಬರತಕ್ಕಂತಹ ಪರಿಸ್ಥಿತಿ ಇರುವಾಗ ಶಾಶ್ವತವಾದ ಪರಿಹಾರವನ್ನು ಮಾಡಲಿಕ್ಕೆ ಸಾಧ್ಯವಿದೆ. ಅದನ್ನು ಯೋಚನೆ ಮಾಡಿ ನೋಡಬೇಕು. ನದಿಯ ಪಕ್ಕದಲ್ಲಿರತಕ್ಕಂತಹ ಗ್ರಾಮಗಳಿಗೆ ನದಿಯಿಂದ ನೀರು ಸರಬರಾಜು ಮಾಡತಕ್ಕಂತಹ ವ್ಯವಸ್ಥೆ ಮಾಡಿದಾಗ ಶಾಶ್ವತವಾದ ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯ ಸತತವಾಗಿ ೫ ವರ್ಷಗಳಿಂದ ಬರವನ್ನು ಅನುಭವಿಸುತ್ತಿದೆ. ನಾನು ಮಲೆನಾಡಿನ ಜಿಲ್ಲೆಯಿಂದ ಬಂದಿರತಕ್ಕಂತಹವನು ನನ್ನ ಅನುಭವದಿಂದ ಹೇಳಬೇಕಾದರೆ ಮತ್ತು ನಮ್ಮ ಗ್ರಾಮದಲ್ಲಿರತಕ್ಕಂತಹ ೭೦-೮೦ ವರ್ಷ ವಯಸ್ಸಾದ ಹಿರಿಯರು ಹೇಳುತ್ತಾರೆ, ಈ ಶತಮಾನದಲ್ಲಿ ಇಂತಹ ಬರವನ್ನು ನಾವು ಕಂಡಿರಲಿಲ್ಲ ಎಂದು. ಶಿವಮೊಗ್ಗ ಜಿಲ್ಲೆಯಲ್ಲಿ, ಆಗುಂಬೆಯಲ್ಲಿ ಸಾಕಷ್ಟು ಮಳೆಯಾಗುತ್ತಿದ್ದು ಈಗ ಅಲ್ಲಿ ಕೂಡ ದನಕರುಗಳಿಗೆ ಕುಡಿಯುವ ನೀರಿಗೆ ಸಂಕಷ್ಟ ಒದಗಿ ಬಂದಿದೆ. ಈ ದೃಷ್ಟಿಯಲ್ಲಿ ನೋಡುವುದಾದರೆ ಈಗ ನಾವು ಸೆಪ್ಟೆಂಬರ್ ತಿಂಗಳಲ್ಲಿ ಇದ್ದೇವೆ, ಇನ್ನೂ ಜೂನ್, ಜುಲೈ ತಿಂಗಳವರೆಗೆ ಈ ವ್ಯವಸ್ಥೆಯನ್ನು ಎದುರಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಕಾಮಗಾರಿ ಕೆಲಸವನ್ನು ಕೈಗೊಳ್ಳಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಕರ ಮತ್ತು ರೈತರ ಬಗ್ಗೆ ಹೆಚ್ಚಿನ ಚಿಂತನೆಯನ್ನು ಮಾಡಿ ಪ್ರತಿ ದಿವಸ ಕೆಲಸ ದೊರೆಯುತಕ್ಕಂತಹ ಕೆಲಸ ಮಾಡಬೇಕು. ಈ ವ್ಯವಸ್ಥೆಯನ್ನು ಮಾಡಲು ಕೋಟ್ಯಾಂತರ ರೂಪಾಯಿಗಳು ಬೇಕಾಗುತ್ತದೆ, ಇದರ ಜವಾಬ್ದಾರಿ ಆಳುವ ಪಕ್ಷಕ್ಕೆ ಒಂದೇ ಅಲ್ಲ, ವಿರೋಧ ಪಕ್ಷಕ್ಕೂ ಜವಾಬ್ದಾರಿ ಇದೆ. ಕಳೆದ ನಾಲ್ಕು ವರ್ಷಗಳಿಂದ ಎದುರಿಸುತ್ತಿರುವ ಪರಿಸ್ಥಿತಿಯನ್ನು ಮನಗಂಡು

ಇವತ್ತು ಅವರು ನಮ್ಮ ಸಹಾಯಕ್ಕೆ ಬರಬೇಕು. ಪಕ್ಷಾತೀತವಾಗಿ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿ ನಮ್ಮ ರಾಜ್ಯಕ್ಕೆ ಹೆಚ್ಚಿನ ಹಣವನ್ನು ಒದಗಿಸುವಂತಹ ವ್ಯವಸ್ಥೆ ಮಾಡದೇ ಹೋದರೆ ಕೃಷಿಕರಿಗೆ, ಸಣ್ಣ ರೈತರಿಗೆ ಮತ್ತು ಮಧ್ಯಮ ವರ್ಗದವರಿಗೆ ವ್ಯವಸಾಯಗಾರರಿಗೆ ತುಂಬಾ ತೊಂದರೆಯಾಗುತ್ತದೆ. ಅಲ್ಪಸ್ವಲ್ಪ ಬಂಡವಾಳವನ್ನು ವ್ಯವಸಾಯದಲ್ಲಿ ವಿನಿಯೋಗಿಸಿಕೊಂಡು ಯಾವ ರೀತಿ ತತ್ತರಿಸಿ ಹೋಗಿದ್ದಾರೆಂದರೆ, ಕೂಲಿ ಮಾಡತಕ್ಕಂತಹ ಪರಿಸ್ಥಿತಿಯಲ್ಲಿ ಕೂಡ ಇಲ್ಲ, ಅವರು ಒಡವೆ ವಸ್ತ್ರಗಳನ್ನು ಮಾರಿಕೊಳ್ಳುವಂತಹ ಸನ್ನಿವೇಶವನ್ನು ನಾವು ಇಂದು ನೋಡುತ್ತಿದ್ದೇವೆ. ಅವರು ಬೇರೆ ಕಡೆಗಳಿಗೆ ವಲಸೆ ಹೋಗುತ್ತಿದ್ದಾರೆ. ಆದ್ದರಿಂದ ಸರ್ಕಾರ ಸಣ್ಣ, ಅತಿ ಸಣ್ಣ ರೈತರ ನೆರವಿಗೆ ಬಂದು ಶಾಶ್ವತವಾದ ಬರಗಾಲ ಬಂದಂತಹ ಈ ಸಂದರ್ಭದಲ್ಲಿ ಅದನ್ನು ಬಗೆಹರಿಸಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಭೂಗರ್ಭದಿಂದ ನೀರನ್ನು ಮೇಲಕ್ಕೆ ತಂದು ಅನುಕೂಲ ಮಾಡಿಕೊಡಬೇಕು. ನಬಾರ್ಡ್‌ನವರಿಂದ ಇಲ್ಲವೇ ಬೇರೆ ಏಜೆನ್ಸಿಗಳ ಮುಖಾಂತರ ಸಾಲ ಸೌಲಭ್ಯವನ್ನು ಒದಗಿಸಿಕೊಡಬೇಕು. ನೂರು ಬಾವಿ ತೆಗೆಯುವ ಯೋಜನೆ ಏನಿದೆ ಅದರಲ್ಲಿ ಈಗ ಕೆಲವು ತೊಂದರೆ ಇದೆ. ಯಾರಾದರೂ ಒಬ್ಬ ೨-೩ ಎಕರೆ ಜಮೀನಿದ್ದಂತಹ ಸಣ್ಣ ರೈತ ನೂರು ಬಾವಿ ತೆಗೆಯುವ ಯೋಜನೆಯಲ್ಲಿ ಸಾಲ ಪಡೆಯಬೇಕೆಂದು ಹೇಳಿದರೆ ಅದರಲ್ಲಿ ಕೆಲವು ಆತಂಕಗಳು ಇವೆ. ಅವನ ಜಮೀನನ್ನು ಸರ್ಕಾರವು ರಿಜಿಸ್ಟರ್ ಮಾಡಿಸಿಕೊಡಬೇಕು. ಇದರಿಂದ ಅವನಿಗೆ ೪೦೦-೫೦೦ ರೂಪಾಯಿ ಖರ್ಚು ಬೀಳುತ್ತದೆ. ಇಲ್ಲದಿದ್ದರೆ ಒಂದೊಂದು ವೇಳೆ ಒಂದು ಸಾವಿರ ರೂಪಾಯಿ ಖರ್ಚು ಬೀಳುತ್ತದೆ, ಅದನ್ನು ತಡೆದುಕೊಳ್ಳತಕ್ಕಂಥ ಶಕ್ತಿ ಆ ರೈತನಿಗೆ ಇರುವುದಿಲ್ಲ, ಜಿಯೋಫಿಸಿಕಲ್ ಸರ್ವೆ ಸರ್ಟಿಫಿಕೇಟ್ ಜಿಯಾಲಜಿಸ್ಟ್‌ಗೆ ಕೃಷಿ ಕೈಗಾರಿಕೆ ನಿಗಮಗಳ ಏಜೆನ್ಸಿಗಳ ಮುಖಾಂತರ ಮಾಡಿ ೪೦೦-೫೦೦ ರೂಪಾಯಿ ಖರ್ಚು ಬೀಳುತ್ತದೆ. ಅದನ್ನೆಲ್ಲಾ ಕೊಟ್ಟು ಪಂಪ್‌ಸೆಟ್ ಹಾಕಿಸಿಕೊಳ್ಳಬೇಕೆಂದರೆ ನಿಜವಾಗಿಯೂ ಆ ರೈತನಿಗೆ ಕಷ್ಟವಾಗುತ್ತದೆ. ಸರ್ಕಾರ ಈ ದಿಸೆಯಲ್ಲಿ ಮುಂದೆ ಬಂದು ೫-೧೦ ರೂಪಾಯಿಗಳ ಸ್ಟ್ಯಾಂಪ್ ಪೇಪರ್‌ನಲ್ಲಿ ಅವರ ಆಸ್ತಿಯನ್ನು ಬರೆಸಿಕೊಡತಕ್ಕಂಥ ವ್ಯವಸ್ಥೆ ಮಾಡಿದರೆ ಅನೇಕ ಜನ ಸಣ್ಣ ರೈತರು ಈ ಸೌಲಭ್ಯವನ್ನು ಪಡೆದುಕೊಳ್ಳುತ್ತಾರೆ. ಆದ್ದರಿಂದ ಸರ್ಕಾರ ಈ ಕಡೆಗೆ ತೀವ್ರವಾಗಿ ಗಮನಹರಿಸಬೇಕು. ಮತ್ತೆ ಇನ್ನು ಕೆಲವೊಂದು ಸಲಹೆಗಳನ್ನು ನಾನು ಕೊಡುವುದಕ್ಕೆ ಬಯಸುತ್ತೇನೆ. ಈಗ ಬಂದಂಥ ಅಲ್ಪಸ್ವಲ್ಪ ಮಳೆ ಮಲೆನಾಡಿನ ಅನೇಕ ಭಾಗಗಳಲ್ಲಿ ಕಾಡುಗಳಲ್ಲಿ ಯಥೇಚ್ಛವಾಗಿ ಆಗಿರುವುದರಿಂದ ಹುಲ್ಲು ಸಾಕಷ್ಟು ಬೆಳೆದಿದೆ, ಈ ಹುಲ್ಲನ್ನು ಕೃಷಿ ಇಲಾಖೆಯವರು ಮತ್ತು ಅರಣ್ಯ ಇಲಾಖೆಯವರು ಎನ್.ಆರ್.ಇ.ಪಿ. ಮತ್ತು ಆರ್.ಎಲ್.ಇ.ಜಿ.ಪಿ. ಯಲ್ಲಿ ಏನು ಕೂಲಿ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ, ಅವರನ್ನೇ ಆ ಪ್ರಾಂತ್ಯಕ್ಕೆ ಕಳುಹಿಸಿ ಮೇವಿನ ಸಂಗ್ರಹ ಮಾಡಿದರೆ ಅದನ್ನು ಒಣಗಿಸಿ ಬರ ಬಂದಂಥ ಜಿಲ್ಲೆಗಳಲ್ಲಿ ಅದನ್ನು ರವಾನೆ ಮಾಡಿದರೆ ಕಡಿಮೆ ಖರ್ಚಿನಲ್ಲಿ ಕಡಿಮೆ ದರದಲ್ಲಿ ಈ ಮೇವಿನ ಬರವನ್ನು ನಿವಾರಣೆ ಮಾಡಬಹುದು. ಆದ್ದರಿಂದ ಶೀಘ್ರವೇ ಸರ್ಕಾರ ಈ ತೀರ್ಮಾನವನ್ನು ಕೈಗೊಂಡು ಈ ಕೆಲಸವನ್ನು ಮಾಡಲಿಕ್ಕೆ ಪ್ರಾರಂಭ ಮಾಡಿದರೆ ಒಳ್ಳೆಯದು. ಏಪ್ರಿಲ್, ಮೇ ತಿಂಗಳು ಬರಲಿ ಎಂದು ಕಾಯ್ದುಕೊಂಡು ಕುಳಿತರೆ ಹುಲ್ಲು ಒಣಗಿ ಹೋಗತಕ್ಕಂಥ ಸಂಭವ ಇರುತ್ತದೆ ಮತ್ತು ಬೆಂಕಿ ಬಿದ್ದು ನಷ್ಟ ಆಗತಕ್ಕಂಥ ಸಂದರ್ಭಗಳೂ ಇವೆ. ಅಲ್ಲಿ ಲಕ್ಷಾಂತರ ಟನ್ ಹುಲ್ಲು ಸಿಗುತ್ತದೆ. ಮಲೆನಾಡಿನ ಪ್ರದೇಶಗಳಲ್ಲಿ ಮೇವನ್ನು ಕೂಡಲೇ ಸಂಗ್ರಹಿಸಿದರೆ ನಾವು ಮುಕ್ಕಾಲು ಭಾಗ ಮೇವಿನ ಬರವನ್ನು ನಿವಾರಿಸಬಹುದು. ಆದ್ದರಿಂದ ಸರ್ಕಾರ ಈ ಕೂಡಲೇ ಇದರ ಕಡೆಗೆ ಗಮನಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಶಿವಮೊಗ್ಗ ಜಿಲ್ಲೆಗೆ ಸೀಮಿತವಾಗಿ ಮಾತನಾಡುವುದಾದರೆ, ನಮ್ಮ ಮಲೆನಾಡಿನ ಭಾಗಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ. ಅಲ್ಲಿ ಕೆರೆಗಳ ಆಳವನ್ನು ತೆಗೆಸಿದರೆ ಮತ್ತು ಅಲ್ಲಿ ತುಂಬಿರುವ ಹೂಳನ್ನು ತೆಗೆಸಿದರೆ ಒಳ್ಳೆಯದಾಗುತ್ತದೆ. ಕೆರೆಗಳ ಆಳವನ್ನು ತೆಗೆಯಬೇಕು. ಈ ರೀತಿ ಮಾಡುವಾಗ ಕೆಲವೊಂದು ಸಾರಿ ಇದ್ದ ಬದ್ದ ನೀರನ್ನೆಲ್ಲಾ ಆಚೆಬಿಟ್ಟು ಆಳ ತೆಗೆಯುವುದು ಮಾಡುತ್ತಾರೆ. ಈಗ ಹೇಗೋ ಸ್ವಲ್ಪ ನೀರು ಶೇಖರಣೆಯಾಗಿಗುತ್ತದೆ. ಮತ್ತೆ ಮಳೆ ಬರುವವರೆಗೂ ಕಾಯಬೇಕಾಗುತ್ತದೆ. ಆದ್ದರಿಂದ ಆ ರೀತಿ ಮಾಡದೇ ಯಾವ ಕೆರೆಯಲ್ಲಿ ನೀರು ಇರುವುದಿಲ್ಲ, ಅಂತಹ ಕೆರೆಗಳಲ್ಲಿ ಹೂಳನ್ನು ತೆಗೆಯುವ ಕೆಲಸ ಮಾಡಿದರೆ ಒಳ್ಳೆಯದು. ಆದ್ದರಿಂದ ಈ ಕಾಮಗಾರಿಗಳನ್ನು ಕೈಗೊಳ್ಳಬೇಕು ಮತ್ತು ಸರ್ಕಾರ ಇದರ ಬಗ್ಗೆ ಗಮನಹರಿಸಬೇಕೆಂದು ಹೇಳುತ್ತೇನೆ. ಕೆಲವು ಕಡೆ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ನೀರು ಬರದೇ ಹೋದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಓಪನ್ ವೆಲ್‌ಗಳನ್ನು ತೆಗೆಯಬೇಕು. ಓಪನ್ ವೆಲ್‌ಗಳನ್ನು ತೆಗೆಯುವಂಥ ವ್ಯವಸ್ಥೆಯನ್ನು ಮಾಡಬೇಕು. ಈಗಾಗಲೇ ಅನೇಕ ಹಳ್ಳಿಗಳಲ್ಲಿ ನೀರಿನ ಸಮಸ್ಯೆ ತಲೆದೋರಿದೆ. ನಮ್ಮ

ಜನತಾ ಪಕ್ಷದ ಅಧಿಕಾರಾವಧಿಯಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಿ ಎಷ್ಟೋ ಕಡೆ ನೀರಿನ ತೊಂದರೆಯನ್ನು ನೀಗಿಸಿದ್ದಾರೆ. ಆದರೂ ಕೆಲವು ಕಡೆ ನೀರಿನ ಸಮಸ್ಯೆ ಉದ್ಭವಿಸಿರುವುದರಿಂದ ಬರ ಸಂಕಷ್ಟದಲ್ಲಿ ಇಂಥ ಒಂದು ತೊಂದರೆಯಿರುವುದರಿಂದ ಸರ್ಕಾರ ತೀವ್ರ ಗತಿಯಿಂದ ಕೆಲಸ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಇನ್ನು ರೈತರಿಗೆ ಮುಫತ್ತಾಗಿ ಬೀಜ, ಗೊಬ್ಬರಗಳನ್ನು ಕಡಿಮೆ ಬೆಲೆಗೆ ಕೊಡುವಂತಾಗಬೇಕು. ಸರ್ಕಾರ ಇತ್ತ ಕಡೆ ಕೂಡಲೇ ಗಮನಹರಿಸಬೇಕೆಂದು ಹೇಳುತ್ತೇನೆ. ಆ ರೀತಿ ಒದಗಿಸಿಕೊಟ್ಟರೆ ಅವನು ಹಿಂಗಾರು ಬೆಳೆಯನ್ನು ಬೆಳೆಯಲಿಕ್ಕೆ ಅನುಕೂಲವಾಗುತ್ತದೆ. ವ್ಯವಸಾಯ ಇಲಾಖೆಯವರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡರೆ ಒಳ್ಳೆಯದು. ಅಲ್ಪಕಾಲಾವಧಿ ಬೆಳೆಗಳನ್ನು ಬೆಳೆಯುವುದಕ್ಕೆ ವ್ಯವಸಾಯ ಇಲಾಖೆಯವರನ್ನೇ ಸಂಪರ್ಕಿಸಿದಾಗ ಕಾಳುಗಳೇ ಸಿಗುತ್ತಿಲ್ಲ ಎಂದು ಹೇಳಿದರು. ಅಂದರೆ ಸೂರ್ಯಕಾಂತಿ, ಹಿಂಗಾರು ಜೋಳವನ್ನು ಒದಗಿಸಿಕೊಟ್ಟರೆ ಅನುಕೂಲವಾಗುತ್ತದೆ. ಸುದೈವದಿಂದ ನಮ್ಮ ರಾಜ್ಯಕ್ಕೆ ಮಳೆ ಬಂದರೆ ಆಗ ನಮ್ಮ ರೈತರು ಬೀಜ ಇಲ್ಲ ಎನ್ನುವ ಕಾರಣದಿಂದ ಬಿತ್ತನೆ ಕೆಲಸ ನಿಲ್ಲಿಸಬಾರದು. ಆದ್ದರಿಂದ ಸರ್ಕಾರ ಮುಂಜಾಗರೂಕತಾ ಕ್ರಮವಾಗಿ ಕೆಲಸ ಕಾರ್ಯಗಳನ್ನು ಮಾಡಬೇಕು ನಮ್ಮ ರೆವಿನ್ಯೂ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಬಹುಶಃ ನಾಳೆ ಡೆಲ್ಲಿಗೆ ಹೋಗುತ್ತಿದ್ದಾರೆಂದು ಕೇಳಿದೆ. ಮಾನ್ಯ ಪ್ರಧಾನ ಮಂತ್ರಿಗಳಿಂದ ನಮ್ಮ ಮುಖ್ಯಮಂತ್ರಿಗಳು ಹೆಚ್ಚಿನ ಆರ್ಥಿಕ ನೆರವನ್ನು ದೊರಕಿಸಿಕೊಂಡು, ಅದನ್ನು ಇಡೀ ರಾಜ್ಯದ ಬರಗಾಲ ಪೀಡಿತ ಪ್ರದೇಶಗಳಿಗೆ ನೀಡಿ, ಪ್ರೋತ್ಸಾಹ ಕೊಡಬೇಕು. ಈ ದಿಶೆಯಲ್ಲಿ ನಮ್ಮ ವಿರೋಧ ಪಕ್ಷದವರೂ ಸಹಕಾರ ನೀಡುತ್ತಾರೆಂದು ನನಗೆ ಭರವಸೆ ಇದೆ ವಿರೋಧಪಕ್ಷದವರು ರಾಜ್ಯದಲ್ಲಿ ಬರಗಾಲ ಬಂತೆಂದು ಹೇಳುವ ಹಾಗಿಲ್ಲ. ಏಕೆಂದರೆ ಬರಗಾಲ ಇಡೀ ದಕ್ಷಿಣದಿಂದ ಉತ್ತರದವರೆಗೆ ಹಬ್ಬಿದೆ. ಜನತಾ ಪಕ್ಷದವರು ಇರಬಹುದು ಅಥವಾ ಕಾಂಗ್ರೆಸ್ ಪಕ್ಷದವರು ಇರಬಹುದು, ಆದರೆ ಇದು ೪ ಕೋಟಿ ಜನರ ಪ್ರಶ್ನೆ. ಇದು ಬರಗಾಲದ ಪ್ರಶ್ನೆ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ನೂರಕ್ಕೆ ನೂರು ಪರಿಹಾರ ಯೋಜನೆಗಳನ್ನು ಮಾಡಬೇಕೆಂದು ಕೇಳಿಕೊಳ್ಳಬೇಕೆಂದು ಹೇಳಿ ಅಧ್ಯಕ್ಷರು ತಾವು ಕೊಟ್ಟ ನಿಗದಿತ ವೇಳೆಗಿಂತ ಬೇಗ ಮುಗಿಸುತ್ತಿದ್ದೇನೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿನಯ ಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ಈ ಬರದ ಮಟ್ಟಿಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಹೊಂದಿಕೊಂಡು ನಾವು ಹೇಳುವುದಾದರೆ, ಬರದ ರೂಪ ಆಗದಿದ್ದರೂ ಮಳೆಯ ಅಭಾವದಿಂದ ವಿಪರೀತವಾಗಿ ರೈತರಿಗೆ ತೊಂದರೆ ಆಗಿದೆ. ಕಳೆದ ೫೦ ವರ್ಷಗಳ ಒಂದು ಅಂತರಕ್ಕೆ ನಾವು ತುಲನೆ ಮಾಡಿ ನೋಡಿದರೆ ನಮ್ಮ ಪುತ್ತೂರು ತಾಲ್ಲೂಕಿನಲ್ಲಿ ೪೮ ಡಿಗ್ರಿ ಮಳೆ ಕಡಿಮೆ ಆಗಿದೆ. ಈ ವರ್ಷದಲ್ಲಿ ರೈತರಿಗೆ ಕೃಷಿಕರು ಭತ್ತದ ನಾಟಿ ಬೇಸಾಯ ಮಾಡುವ ರೈತರಿಗೆ ಮೇವು ಬೆಳೆಯುವವರಿಗೆ, ನಾಟಿ ಮಾಡಿ ಭತ್ತದ ಬೇಸಾಯವನ್ನು ಮಾಡುವವರಿಗೆ ತೊಂದರೆ ಆಗಿದೆ. ಮಳೆಯ ಪೂರ್ಣ ವೈಫಲ್ಯದ ಒಂದು ಕಾರಣದಿಂದ ಯಾರು ಯಾವ ಕಾಲದಲ್ಲಿ ನಾಟಿ ಮಾಡಬೇಕೆಂದು ಅಂದುಕೊಂಡರೋ ಆ ಕಾಲದಲ್ಲಿ ಅದನ್ನು ಮಾಡಲಾಗಲಿಲ್ಲ. ನನ್ನ ತಾಲ್ಲೂಕಿಗೆ ಹೊಂದಿಕೊಂಡು ಹೇಳುವುದಾದರೆ, ಹಲವಾರು ಸಮಿತಿಗಳ ಮುಖಾಂತರ, ಜಿಲ್ಲಾ ಪರಿಷತ್ ಮುಖಾಂತರ. ಮಳೆ ಅಭಾವದಿಂದ ತೊಂದರೆಗೆ ಒಳಗಾದ ರೈತರಿಗೆ ಪರಿಹಾರ ಕೊಡುವುದಕ್ಕೆ ನಾವು ಸರ್ಕಾರಕ್ಕೆ ಮನವಿ ಕಳಿಸಿಕೊಟ್ಟಿದ್ದೇವೆ. ನನ್ನ ಪುತ್ತೂರು ಕ್ಷೇತ್ರಕ್ಕೆ ಹೊಂದಿಕೊಂಡಂತೆ ವಿಶೇಷ ಸಮಿತಿ ಮುಖಾಂತರ ಸಭೆ ಕರೆದು ಮಂಡಲ್ ಪ್ರಧಾನರನ್ನು ಕರೆದು, ಗ್ರಾಮಾಂತರ ಪ್ರದೇಶದ ಮಾಹಿತಿಯನ್ನು ಸಂಗ್ರಹಿಸಿ ಸರ್ಕಾರಕ್ಕೆ ಕೊಟ್ಟಿದ್ದೇವೆ. ರೈತರಿಗೆ ೧೧ ಲಕ್ಷ ರೂಪಾಯಿಗಳ ಸಹಾಯವನ್ನು ಮಾಡುವುದಕ್ಕಾಗಿ ನಾವು ಸರ್ಕಾರಕ್ಕೆ ಒಂದು ಮನವಿಯನ್ನು ಕಳಿಸಿಕೊಟ್ಟಿದ್ದೇವೆ, ಈ ತರಹ ೧೧ ಲಕ್ಷ ರೂಪಾಯಿಗಳನ್ನು ನಾಟಿ ಸಮಯದಲ್ಲಿ ಕೊಟ್ಟರೆ, ಇದನ್ನು ಸರಿಯಾಗಿ ಉಪಯೋಗ ಮಾಡಿದರೆ ಅಧಿಕ ಇಳುವರಿ ಕೊಡುವ ಭತ್ತದ ಉತ್ಪಾದನೆ ಸಕಾಲದಲ್ಲಿ ಆಗುತ್ತದೆ, ಆದಾಯ ಬರುತ್ತದೆ. ಈ ದೃಷ್ಟಿಯಿಂದ ಹಾಗೂ ಭತ್ತದ ಉತ್ಪಾದನೆಯ ದೃಷ್ಟಿಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಇದರ ಜೊತೆಗೆ ಕುಡಿಯುವ ನೀರಿನ ತೊಂದರೆ ಬಗ್ಗೆ ಗಮನ ಹರಿಸಬೇಕು. ಮುಂಬರುವ ವರ್ಷಗಳಲ್ಲಿ ಕುಡಿಯುವ ನೀರಿನ ತೊಂದರೆ ಬಗ್ಗೆ ಹೆಚ್ಚಾಗಿ ಕಂಡು ಬರುವ ಸೂಚನೆ ಇದೆ. ಸುಗ್ಗಿ ಕಾಲದಲ್ಲಿ ಬೆಳೆಗೆ ಅಗತ್ಯವಾದ ರಸಗೊಬ್ಬರ, ನೀರು ಕೊಡುವುದಕ್ಕೆ ಹಾಗೂ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಇದನ್ನೆಲ್ಲಾ ಕಲ್ಪಿಸಿಕೊಡಬೇಕೆಂದು ನಾವು ಈಗಾಗಲೇ ಮಾಹಿತಿಯನ್ನು ಕಳುಹಿಸಿಕೊಟ್ಟಿದ್ದೇವೆ. ಇದೇ ರೀತಿ ನಮ್ಮ ತಾಲ್ಲೂಕಿನಲ್ಲಿ ೫೦ ಪರ್ಸೆಂಟ್ ಮೇವು ಮಾತ್ರ ಉತ್ಪಾದನೆ ಆಗುತ್ತದೆ, ಹೊರಗಡೆಯಿಂದ ಮೇವು ಕಳಿಸಿಕೊಡುವ ವ್ಯವಸ್ಥೆ ಮಾಡುವುದರ

ಜೊತೆಗೆ ಅಲ್ಲಿನ ಜನರಿಗೆ ಉದ್ಯೋಗ ಒದಗಿಸಿಕೊಡಲಿಕ್ಕೆ ಬೇರೆ ಬೇರೆ ರೀತಿಯ ಹೆಚ್ಚಿನ ಸೌಲಭ್ಯಗಳನ್ನು ರೈತರಿಗೆ ಕಲ್ಪಿಸಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಕಾಡು ಹೆಚ್ಚಾಗಿದ್ದರೆ ಮಾತ್ರ ಮಳೆ ಹೆಚ್ಚಾಗಿ ಬರುತ್ತದೆಂಬ ನಂಬಿಕೆ ನಮ್ಮ ರೈತರಲ್ಲಿದೆ, ಆದರೆ ನಮ್ಮ ಭಾಗದಲ್ಲಿ ಕಳೆದ ಮೂರು ವರ್ಷಗಳಿಂದ ಇದ್ದಂಥ ಕಾಡಿಗೆ ಬೆಂಕಿ ಬಿದ್ದು ಕಾಡೆಲ್ಲಾ ಸಂಪೂರ್ಣವಾಗಿ ಸುಟ್ಟು ಹೋಗಿದೆ. ಕಾಡಿನ ಒಂದು ಭಾಗದಲ್ಲಿ ಬೆಂಕಿ ಬಿದ್ದರೆ, ಕಾಡಿನ ಅಕ್ಕಪಕ್ಕದಲ್ಲಿರುವಂತಹ ಜಮೀನುಗಳ ಬೆಳೆಗಳೂ ಸಹ ಹಾಳಾಗುತ್ತದೆ. ಇದರಿಂದ ರೈತರಿಗೆ ಬಹಳ ನಷ್ಟವಾಗುತ್ತದೆ. ಕಾಡು ಕಡಿಮೆಯಾದರೆ ಮಳೆಯೂ ಕಡಿಮೆ ಆಗುತ್ತದೆ ಎಂಬ ವಿಚಾರ ರೈತರಿಗೆ ಈಗ ಮನವರಿಕೆಯಾಗುತ್ತಿರುವ ಕಾರಣ ನಮ್ಮ ಸರ್ಕಾರ ವನ್ಯ ರಕ್ಷಣೆ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಎನ್‌ಆರ್‌ಇಪಿ., ಆರ್‌ಎಲ್‌ಇಜಿಪಿ., ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಕೆಳಗೆ ಕಾಡನ್ನು ಬೆಳೆಸಬೇಕು ಮತ್ತು ಇರುವಂಥ ಕಾಡನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ನಮ್ಮ ಪುತ್ತೂರು ಭಾಗದಲ್ಲಿ ಮಳೆ ಇಲ್ಲದೆ ತೊಂದರೆಗೆ ಒಳಗಾದ ರೈತರಿಗೆಲ್ಲಾ ಪರಿಹಾರ ಒದಗಿಸಿಕೊಡಬೇಕೆಂದು ಮಂಡಲ ಪಂಚಾಯಿತಿಗಳ ಮೂಲಕ ಜಿಲ್ಲಾ ಪರಿಷತ್‌ಗೆ ಕಳುಹಿಸಿಕೊಟ್ಟಿರುವ ಶಿಫಾರಸ್‌ಗಳನ್ನು ಕೂಡಲೇ ಅನುಷ್ಠಾನದಲ್ಲಿ ತರುವಂತಹ ವ್ಯವಸ್ಥೆ ಆಗಬೇಕು. ರೈತರು ಮತ್ತೆ ಸಾಗುವಳಿ ಮಾಡಲು ಬೇಕಾದಂಥ ಎಲ್ಲ ಅನುಕೂಲಗಳನ್ನು ಸರ್ಕಾರದವರು ಒದಗಿಸಿಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಈ ಸಲ ಕೆಲವು ಕಡೆಗಳಲ್ಲಿ ಬೆಳೆ ಆಗಿದ್ದರೂ ಸಹ ಜಾಸ್ತಿ ಬರುವುದಿಲ್ಲ. ಇದರಿಂದ ರೈತರ ಆದಾಯ ಕಡಿಮೆ ಆಗುತ್ತದೆ. ಈ ಕಾರಣದಿಂದ ರೈತರಿಗೆ ಎಲ್ಲ ರೀತಿಯಿಂದಲೂ ಸಹಾಯ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಲಕ್ಷ್ಮಯ್ಯನವರು ಸಭೆಯಲ್ಲಿ ಇಲ್ಲದಿರುವ ಕಾರಣ ಈಗ ಶ್ರೀ ನೀಲಕಂಠಪ್ಪನವರು ಚರ್ಚೆ ಪ್ರಾರಂಭ ಮಾಡಬಹುದು.

ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ರಾಜ್ಯದಲ್ಲಿ ಉಂಟಾಗಿರುವ ಭೀಕರ ಬರಗಾಲದ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ಈ ಬರಗಾಲ ಪೀಡಿತ ಪ್ರದೇಶಗಳಲ್ಲಿ ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ಮಾನ್ಯ ಸದಸ್ಯರು ನಾನಾ ರೀತಿಯ ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಈ ಬರಗಾಲದ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಒಂದು ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಈ ಬರಗಾಲದಿಂದ ನಮ್ಮ ರಾಜ್ಯದ ಜನರು ಕಂಗಾಲಾಗಿದ್ದಾರೆಂಬುದನ್ನು ಕೇಂದ್ರ ಸರ್ಕಾರವೂ ಸಹ ಮನಗಂಡಿದೆ. ಕೇಂದ್ರ ಸರ್ಕಾರದವರು ಈಗಾಗಲೇ ಬೇರೆ ಬರಪೀಡಿತ ರಾಜ್ಯಗಳಿಗೆ ಹಣವನ್ನು ಬಿಡುಗಡೆ ಮಾಡಿದರೂ ಸಹ ನಮ್ಮ ರಾಜ್ಯಕ್ಕೆ ಇನ್ನೂ ಹಣವನ್ನು ಬಿಡುಗಡೆ ಮಾಡಿಲ್ಲ. ಕೇಂದ್ರ ಸರ್ಕಾರದ ಈ ವಿಚಿತ್ರವಾದಂಥ ಮಲತಾಯಿ ಧೋರಣೆಯನ್ನು ಈ ಸದನ ಖಂಡನೆ ಮಾಡಬೇಕಾಗುತ್ತದೆ.

ಶ್ರೀ ಜಿ.ಎಸ್. ಶಿವನಂಜಪ್ಪ.—ಕೇಂದ್ರ ಸರ್ಕಾರದವರು ನಮ್ಮ ಸರ್ಕಾರಕ್ಕೆ ಯಾವ ಯಾವ ಬಾಬುಗಳಿಗೆ ಹಣ ಕೊಟ್ಟಿಲ್ಲ ಎಂಬುದನ್ನು ಹೇಳಬೇಕೇ ಹೊರತು, ಈ ರೀತಿಯಾಗಿ ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು.—ಅವರು ಹೊಸ ಸದಸ್ಯರಿದ್ದಾರೆ. ಆದ್ದರಿಂದ ಅವರು ಮಾತನಾಡಲು ತಾವು ಅವಕಾಶ ಮಾಡಿಕೊಡಿ. ಮಾನ್ಯ ನೀಲಕಂಠಪ್ಪನವರು ಸರ್ಕಾರಕ್ಕೆ ಬರಗಾಲದ ಬಗ್ಗೆ ಸಲಹೆ ಮತ್ತು ಸೂಚನೆಗಳು ಏನಾದರೂ ಇದ್ದರೆ ಕೊಡಬೇಕು.

ಶ್ರೀ ಬಿ.ಆರ್. ನೀಲಕಂಠಪ್ಪ.—ನಾನು ಸರ್ಕಾರಕ್ಕೆ ಸಲಹೆ ಮತ್ತು ಸೂಚನೆಗಳನ್ನು ಕೊಡುತ್ತಿದ್ದೇನೆ.

ಶ್ರೀ ಬಿ. ಲಕ್ಕಪ್ಪ.—ಅವರು ಕೇಂದ್ರ ಸರ್ಕಾರದ ಬಗ್ಗೆ ಏನಾದರೂ ಹೇಳುವುದಿದ್ದರೆ ಒಳ್ಳೆಯ ರೀತಿಯಿಂದ ಹೇಳಬೇಕೇ ಹೊರತು, ಕುಸ್ತಿ ಮಾಡುವ ರೀತಿಯಲ್ಲಿ ಹೇಳಿದರೆ ಹೇಗೆ?

ಅಧ್ಯಕ್ಷರು.—ಅವರು ಪೈಲ್ವಾನರಾಗಿದ್ದಾರೆ. ಆದ್ದರಿಂದ ಅವರು ಕುಸ್ತಿ ಮಾಡುವ ರೀತಿಯಲ್ಲಿ ಮಾತನಾಡುತ್ತಾರೆ, ನೀವು ವಿಷಯ ಹೇಳಿ, ಅವರ ಹೆಸರನ್ನು ತೆಗೆಯಬೇಡಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಇದ್ದದ್ದನ್ನು ಇದ್ದಹಾಗೆ ಹೇಳಿದರೆ ಸಿಡಿಲು ಬಂದು ಬಡಿಯಿತು ಎಂದ ಹಾಗೆ ಆಯಿತು.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ನೀಲಕಂಠಪ್ಪನವರ ಹತ್ತಿರ ಮಾತನಾಡುವುದಕ್ಕೆ ಸಾಮಗ್ರಿ ಇರುವುದು ಎರಡು ನಿಮಿಷಕ್ಕೆ ಆಗುವಷ್ಟು. ಅವರು 10 ನಿಮಿಷ ಏನಾದರೂ ಮಾಡಿ ಮಾತನಾಡ ಬೇಕು. ಎರಡು ನಿಮಿಷದ್ದನ್ನು 10 ನಿಮಿಷ ಮಾತನಾಡಬೇಕು. ಅದಕ್ಕೋಸ್ಕರ ಈ ರೀತಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ನೀಲಕಂಠಪ್ಪನವರೇ ತಾವು 10 ನಿಮಿಷದಲ್ಲಿ ಮುಗಿಸಿ.

ಶ್ರೀ ಬಿ. ಆರ್. ನೀಲಕಂಠಪ್ಪ.—೫ ನಿಮಿಷದಲ್ಲಿ ಮುಗಿಸುತ್ತೇನೆ. ಇದರಲ್ಲಿ ಕೇಂದ್ರ ಸರ್ಕಾರದ್ದೂ ಹೊಣೆ ಇದೆ, ಜವಾಬ್ದಾರಿ ಇದೆ. ರಾಷ್ಟ್ರದಲ್ಲಿ ಈ ರಾಜ್ಯ ಸರ್ಕಾರ ಏನೂ ಕೆಲಸ ಮಾಡುತ್ತಾ ಇಲ್ಲ, ಜಿಲ್ಲಾ ಪರಿಷತ್‌ನಲ್ಲಿ ಹಣ ಇಲ್ಲ ಎಂಬ ಪೊಳ್ಳು ಹೇಳಿಕೆಗಳನ್ನು ಹೇಳಿಕೊಂಡು ಜನತಾ ಸರ್ಕಾರವನ್ನು ತಪ್ಪು ದಾರಿಗೆ ಎಳೆಯುತ್ತಾ ಇದ್ದಾರೆ. ಆದರೆ ಕೇಂದ್ರ ಸರ್ಕಾರದವರು ಏನು ಹೇಳಿಕೆ ಮಾಡಿದರು, ಏನು ಮಾಡಿದರು ಎನ್ನುವುದನ್ನು ನಾನು ಈ ಸದನದ ಮೂಲಕ ಹೇಳಲಿಕ್ಕೆ ಯಾವ ಕಡಿವಾಣವೂ ಇಲ್ಲ, ಯಾರು ಕಡಿವಾಣವೂ ಹಾಕಿದರೂ ಕೇಳದೇ ನನ್ನ ಹೇಳಿಕೆಯನ್ನು ನಾನು ಹೇಳೇ ಹೇಳುತ್ತೇನೆ. ಈ ಬಗ್ಗೆ ಕೇಂದ್ರ ಸರ್ಕಾರದ ಪೂರ್ಣ ವಿಫಲತೆಯನ್ನು ಖಂಡಿಸಿ ಬರಗಾಲದ ಬಗ್ಗೆ ನಾನು ಮಾತನಾಡುತ್ತೇನೆ. ಇಡೀ ರಾಜ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆ ತೀರ ಬರಗಾಲದ ಪರಿಸ್ಥಿತಿಗೆ ಒಳಗಾಗಿದೆ ನಮ್ಮ ಮಲೆನಾಡಿನ ಶಾಸಕ ಮಿತ್ರರು ಹೇಳಿದಂತೆ ವಿಶಿಷ್ಟ ರೀತಿಯಲ್ಲಿ ಚಿಕ್ಕಮಗಳೂರು ಜಿಲ್ಲೆ ಬರಗಾಲಕ್ಕೆ ಒಳಗಾಗಿದೆ. ಮಲೆನಾಡು ಮತ್ತು ಅರೆ ಮಲೆನಾಡಿಗೆ ಸೇರಿದಂಥ ಜನ ನಾವು. ನಮ್ಮಲ್ಲಿ ಬಹಳ ಗಂಭೀರವಾಗಿ ಎದುರಿಸುವ ಪರಿಸ್ಥಿತಿ ಇದೆ. ಒಂದು ಕಡೆ ಕಾಫಿ, ತೆಂಗು, ಅಡಿಕೆ ಮತ್ತು ಕಾಡನ್ನು ಸಂರಕ್ಷಣೆ ಮಾಡುವ ರೀತಿಯಲ್ಲಿ ವಿಶಿಷ್ಟವಾದ ಬರಗಾಲದ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಮನುಷ್ಯ ಸಾಮಾನ್ಯವಾಗಿ ಎಲ್ಲಾದರೂ ಬಾಳಬಹುದು, ಬದುಕಬಹುದು. ಆದರೆ ಇಂದು ಒಳ್ಳೆಯ ಸಂಪತ್ತನ್ನು ನಾವು ಕಳೆದುಕೊಳ್ಳುವ ಪರಿಸ್ಥಿತಿಯಲ್ಲಿದ್ದೇವೆ. ಅರಣ್ಯ ಸಂಪತ್ತು ಮತ್ತು ಅಡಿಕೆ, ತೆಂಗು, ಕಾಫಿ ಬೆಳೆಯ ಸಂಪತ್ತನ್ನು ನಾವು ಕಳೆದುಕೊಳ್ಳುತ್ತಾ ಇದ್ದೇವೆ. ಪದೇಪದೇ ೪ ವರ್ಷಗಳ ಕಾಲವೂ ಸಹ ಬರಗಾಲಕ್ಕೆ ತುತ್ತಾಗಿದ್ದೇವೆ. ನಾನು ಹೋದ ಸಾರಿ ಬರಗಾಲದ ಬಗ್ಗೆ ಚರ್ಚೆ ಮಾಡು ವಾಗ ಕೆಲವು ಸೂಚನೆಗಳನ್ನು ಕೊಟ್ಟಿದ್ದೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ನಾವು ಎಷ್ಟೋ ಸಲ ಹೇಳಿದ್ದೇವೆ. ಇವತ್ತು ಬರಗಾಲದ ಬಗ್ಗೆ ಚರ್ಚೆಯಾಗುತ್ತಾ ಇರುವಾಗ ಸಂಬಂಧಪಟ್ಟ ಒಬ್ಬ ಅಧಿಕಾರಿಯೂ ಇಲ್ಲ. ಸಂಬಂಧ ಪಟ್ಟ ಮಂತ್ರಿಗಳೂ ಇರಬೇಕು, ಅಧಿಕಾರಿಗಳೂ ಇರಬೇಕು. ಸದಸ್ಯರು ಬರಗಾಲದ ಬಗ್ಗೆ ಚರ್ಚೆ ಮಾಡುತ್ತಾ ಇದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಇರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಂಬಂಧಪಟ್ಟ ಮಂತ್ರಿಗಳು ಇದ್ದರು, ನಂತರ ಎಲ್ಲಿಗೋ ಹೋದರು.

ಅಧ್ಯಕ್ಷರು.—ಅವರು ಊಟಕ್ಕೆ ಹೋಗಿದ್ದಾರೆ, ಅವರ ಪರವಾಗಿ ಬೇರೆ ಮಂತ್ರಿಗಳು ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಟ್ಟು ೩೫ ಜನ ಮಂತ್ರಿಗಳು ಇದ್ದು, ಸಂಬಂಧಪಟ್ಟ ೫-೬ ಜನ ಮಂತ್ರಿಗಳು ಸದನದಲ್ಲಿ ಇಲ್ಲದೇ ಹೋದರೆ ಹೇಗೆ. ಬರಗಾಲದ ಬಗ್ಗೆ ಚರ್ಚೆ ಮಾಡುವಾಗ ೫-೬ ಜನ ಮಂತ್ರಿಗಳು ಇರಬೇಕು. ಅನಿಮಲ್ ಹಸ್ಬೆಂಡರಿ ಮಿನಿಸ್ಟರ್ ಇರಬೇಕು. ಮಾನ್ಯ ಪಿಡಬ್ಲ್ಯುಡಿ ಮಿನಿಸ್ಟರ್ ಹೋಗುತ್ತಿದ್ದರು, ಈಗ ಬಂದಿದ್ದಾರೆ ಫಾರೆಸ್ಟ್ ಮಿನಿಸ್ಟರ್ ಇರಬೇಕು. ಏಕೆಂದರೆ ಯಾರ್ಯಾರು ಏನೇನು ಸಲಹೆಗಳನ್ನು ಕೊಡುತ್ತಾರೆ, ಲೋಪದೋಷಗಳನ್ನು ಹೇಳುತ್ತಾರೆ ಅದನ್ನು ತಿಳಿದುಕೊಳ್ಳಬೇಕು.

೨-೩೦ ಪಿ. ಎಂ.

ಸದಸ್ಯರು ಲೋಪದೋಷಗಳನ್ನು ಹೇಳುತ್ತಿದ್ದಾರೆ. ಕೇಳುವುದಕ್ಕೆ ಯಾರು ಇಲ್ಲ ಅಂದರೆ ಹೇಗೆ?

ಅಧ್ಯಕ್ಷರು.—ನೀವು ಮಂತ್ರಿಯಾಗಿ ಕೆಲಸ ಮಾಡಿದ್ದೀರಿ, ತಮಗೆ ಗೊತ್ತಿದೆ. ಅವರು ರೆಕಾರ್ಡ್ ತರಿಸಿಕೊಂಡು ನೋಡಿ ಉತ್ತರ ಕೊಡುತ್ತಾರೆ.

ಶ್ರೀ ಧರ್ಮಸಿಂಗ್.—ಅಧಿಕಾರಿಗಳು ಏತಕ್ಕೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಟ್ಟು ೩೫ ಜನ ಮಂತ್ರಿಗಳು ಇದ್ದಾರೆ, ಸದನದಲ್ಲಿ ೫-೬ ಜನ ಮಂತ್ರಿಗಳು ಇರುವುದಕ್ಕೆ ತೊಂದರೆ ಏನು?

ಅಧ್ಯಕ್ಷರು.—ತಾವು ಅಸೆಂಬ್ಲಿಯೊಳಗೆ ಕಾಲಿಟ್ಟ ಕೂಡಲೇ ಏನಾದರೂ ಎತ್ತಬೇಕು.

ಶ್ರೀ ಧರ್ಮಸಿಂಗ್.—ಮಂತ್ರಿಗಳ ಬಗ್ಗೆ ಹೇಳುತ್ತಿಲ್ಲ. ಅಧಿಕಾರಿಗಳು ಕೂಡ ಇಲ್ಲ. ಇಲ್ಲಿ ನಡೆದಂಥ ಚರ್ಚೆ ಬಗ್ಗೆ ನೋಟ್ ತೆಗೆದುಕೊಳ್ಳುವುದು ಬೇಡವೆ?

ಅಧ್ಯಕ್ಷರು.—ನಿಮ್ಮವರು ೮ ಜನ ಆಬ್ಸೆಂಟ್ ಆಗಿದ್ದಾರೆ. ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩೫ ಜನರ ಏರ್‌ಬಸ್ ಇದೆ.

ಅಧ್ಯಕ್ಷರು.—ದೇವರಾಜು ಅರಸು ಅವರ ಕಾಲದಲ್ಲಿ ನೀವು ನಾವು ಕೂಡಿ ಏರ್‌ಬಸ್‌ನಲ್ಲಿದ್ದೆವು.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಬರಗಾಲದ ಬಗ್ಗೆ ಚರ್ಚೆಯಾಗಬೇಕೆಂದು ಎಷ್ಟು ಆಗ್ರಹ ಪಡಿಸಿದರೋ ಅಷ್ಟು ಆಸಕ್ತಿ ಈಗ ಕಾಣುತ್ತಿಲ್ಲ. ಸಭೆಯ ಕಾರ್ಯಕಲಾಪ ನಡೆಯುತ್ತಿದೆ. ಸದಸ್ಯರುಗಳು ಮಾತನಾಡಲಿ ಇಲ್ಲಿ ನಾವು ಕೂತುಕೊಂಡು ಬರೆದುಕೊಳ್ಳುತ್ತಿದ್ದೇವೆ, ಕಂದಾಯ ಮಂತ್ರಿಗಳು ಉತ್ತರ ಕೊಡುತ್ತಾರೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬರಗಾಲದ ಮೇಲೆ ಚರ್ಚೆ ನಡೆಯುವಾಗ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಂತೆ ವಿಷಯಗಳು ಬರುತ್ತವೆ. ಹೆಲ್ತ್‌ಗೆ ಸಂಬಂಧಪಟ್ಟಂತೆ, ರೂರಲ್ ಡೆವಲಪ್‌ಮೆಂಟ್‌ಗೆ ಸಂಬಂಧಪಟ್ಟಂತೆ, ಫುಡ್ ಮತ್ತು ಫಾರೆಸ್ಟ್‌ಗೆ ಸಂಬಂಧಪಟ್ಟಂತೆ ವಿಷಯಗಳು ಬರುವುದರಿಂದ ಸಂಬಂಧಪಟ್ಟ ಮಂತ್ರಿಗಳು ಇರಬೇಕಾಗುತ್ತದೆ. ಇಲ್ಲಿ ಇರುವುದಕ್ಕೆ ಏನು ತೊಂದರೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಕೆಲಸದ ಮೇಲೆ ಹೋಗಿದ್ದಾರೆ. ಗೃಹಮಂತ್ರಿಗಳು ಇರಬೇಕಾಗಿಲ್ಲ ಫುಡ್, ಕೋಆಪರೇಟೀವ್ ಮತ್ತು ಫಾರೆಸ್ಟ್ ಖಾತೆಗಳ ಮಂತ್ರಿಗಳು ಏತಕ್ಕೆ ಇರಬಾರದು.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಇರಬೇಕಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇರಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರದ ಪರವಾಗಿ ಕಂದಾಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಅಧ್ಯಕ್ಷರು.—ನಿಮ್ಮ ಲೀಡರ್ ಇಲ್ಲ, ಡೆಪ್ಯುಟಿ ಲೀಡರ್ ಕೂಡ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಈ ರೀತಿ ರಕ್ಷಣೆ ಕೊಟ್ಟರೆ ಅವರು ಒಬ್ಬರೂ ಬರುವುದಿಲ್ಲ,

ಅಧ್ಯಕ್ಷರು.—ರಕ್ಷಣೆ ನಿಮಗೂ ಕೊಡಬೇಕು, ಅವರಿಗೂ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಕೆಲಸ ಮಾಡಿ, ಸಾಗರ್‌ರವರು ಬೇಕಾಗಿಲ್ಲ ಬರೀ ರೆಕಾರ್ಡ್ ನೋಡಿಕೊಂಡು ಕೂತುಕೊಳ್ಳೋಣ.

ಅಧ್ಯಕ್ಷರು.—ನೀವೂ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಇದ್ದಾಗ ಸೀನಿಯರ್ ಮೆಂಬರುಗಳು ಮಾತನಾಡುತ್ತಾರೆ. ಅವರು ಏನು ಸಲಹೆ ಸೂಚನೆಗಳನ್ನು ಕೊಡುತ್ತಾರೆಂದು ಕೇಳುವ ಸಲುವಾಗಿ ಅವರಿಗೆ ಗೌರವ ಕೊಟ್ಟುಕೊಂಡು ಕೂತುಕೊಳ್ಳುತ್ತಿದ್ದೆವು. ತಾವು ಚೀಮಾರಿ ಹಾಕಿ ಅವರನ್ನು ಕರೆಸಿ,

ಅಧ್ಯಕ್ಷರು.—ಊಟಕ್ಕೆ ಹೋಗಿದ್ದಾರೆ; ಬರುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇರಬೇಕಾಗಿಲ್ಲ ಸ್ವಾಮಿ. ಜಂಟೀ ಜವಾಬ್ದಾರಿ ಇದೆ. ನಾವುಗಳ ಇಲ್ಲೀ ಕೂತುಕೊಂಡು ಬರೆದುಕೊಳ್ಳುತ್ತಿದ್ದೇವೆ,

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಬಂದಿದ್ದಾರೆ, ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಅವರಿಗೆ ತಾವು ಕಿವಿ ಹಿಂಡಿ ಕರೆಸಿ, ಛೀಮಾರಿ ಹಾಕಬೇಕು ಇಲ್ಲದೇ ಇದ್ದರೆ ಉಪಯೋಗ ಏನು?

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೆ, ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ. ತಾವು ಸ್ಪೀಕರ್ ಆಗಿದ್ದೀರಿ ಎಂಬುದನ್ನು ತಾವು ಮರೆತಿದ್ದೀರಿ. ನೀವು ಸರ್ಕಾರದ ಪರವಾಗಿ ಮಾತನಾಡಲಿಕ್ಕೆ ಶುರು ಮಾಡಿದರೆ ನಾವು ಎಲ್ಲಿಗೆ ಹೋಗಬೇಕು. ಇದು ನಮಗೇನೂ ಅರ್ಥವೇ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ಆಗಲೇ ತಮ್ಮನ್ನು ಕರೆದಾಗ ನೀವು ಇರಲಿಲ್ಲ. ನೀವು ಏತಕ್ಕೆ ಹೋಗಿದ್ದಿರಿ.

ಶ್ರೀ ಬಿ. ಬಸವಲಿಂಗಪ್ಪ.—ನಾವು ವಾಕ್ ಔಟ್ ಮಾಡಿದ್ದೆವು. ಅದನ್ನು ತಾವು ಉಪಯೋಗಿಸಿಕೊಂಡು ನಾನು ಕರೆದಾಗ ತಾವು ಇರಲಿಲ್ಲ ಅಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು.—ಈಗ ತಾವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಈಗ ನೀಲಕಂಠಪ್ಪನವರು ಮಾತನಾಡಬೇಕು, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಮಂತ್ರಿಗಳು ಇಲ್ಲಿ ಇರಲಿಲ್ಲ, ಅದನ್ನು ನಾವು ಹೇಳಬಾರದೇನು?

(ಗೊಂದಲ)

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಅಧ್ಯಕ್ಷರೆ. ಮಾನ್ಯ ಬಸವಲಿಂಗಪ್ಪನವರು ತಮ್ಮ ಬಗ್ಗೆ ಏನು ಆಪಾದನೆಯನ್ನು ಮಾಡಿದ್ದಾರೆ ಅದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಇಲ್ಲಿ ಇರಬೇಕು ಎನ್ನುವವರಲ್ಲಿ ನಾನು ಒಬ್ಬ, ನಾನು ಅವರಿಗೆ ಹೇಳುತ್ತೇನೆ ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಬೇಕೆಂದು ಮಾನ್ಯ ಸದಸ್ಯರು ಮಾತನಾಡುತ್ತಾರೆ. ಡ್ರಾಫ್ಟ್‌ಗೆ ಸಂಬಂಧಪಟ್ಟಂತೆ ಕೆಲವೊಂದು ಲೋಪದೋಷಗಳನ್ನು ಮಾನ್ಯ ಸದಸ್ಯರು ಇಲ್ಲಿ ಹೇಳುವಾಗ ಮಾನ್ಯ ಮಂತ್ರಿಗಳು ಇಲ್ಲಿ ಇರಬೇಕೋ ಬೇಡವೋ, ಆ ಸದನದಲ್ಲಿ ಕೆಲಸ ಇದೆ ಅಂದರೆ ಒಪ್ಪುತ್ತೇನೆ, ಅಲ್ಲಿ ಕೆಲಸವೂ ಇಲ್ಲ. ಅವರು ಇಲ್ಲಿಯೂ ಇಲ್ಲ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಬಂದಿದ್ದಾರೆ. ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು. ತಾವು, ಅವರು ಇಬ್ಬರೂ ಆಸಕ್ತಿಯಿಂದ ಇರಬೇಕು.

(ಗೊಂದಲ)

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಬಸವಲಿಂಗಪ್ಪನವರು ಮಾನ್ಯ ಸಭಾಧ್ಯಕ್ಷರ ಬಗ್ಗೆ ಏನು ಹೇಳಿದ್ದಾರೆ ಅದನ್ನು ಕಡತದಿಂದ ತೆಗೆಸಿಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ಪಾಯಿಂಟ್ ಆಫ್ ಆರ್ಡರ್, ಅಧ್ಯಕ್ಷರೆ, ತಾವು ಈ ಸಭೆಯ ಅಧ್ಯಕ್ಷರಾಗಿ ಇಲ್ಲಿ ಕುಳಿತಿದ್ದೀರಿ. ತಮಗೆ ಮಾನ್ಯ ಬಸವಲಿಂಗಪ್ಪನವರು ಮಾತನಾಡುತ್ತಾ ತಾವು ಜನತಾ ಪಕ್ಷದ ಬಗ್ಗೆ ರಕ್ಷಣೆ ಕೊಟ್ಟು ಕೆಲಸ ಮಾಡುತ್ತಿದ್ದೀರಾ ಎನ್ನುವ ಆಪಾದನೆಯನ್ನು ಮಾಡಿದ್ದಾರೆ ಅದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

MR SPEAKER.—I will not take it seriously.

ಶ್ರೀ ವೇದಾಂತ ಹೆಮ್ಮಿಗೆ.—ಪಾರ್ಲಿಮೆಂಟರಿ ಸಂಪ್ರದಾಯಕ್ಕೆ, ಆ ಗೌರವ ತರತಕ್ಕಂಥ ಹೇಳಿಕೆಯನ್ನು ಮಾನ್ಯ ಬಸವಲಿಂಗಪ್ಪನವರು ಮಾಡಿದ್ದಾರೆ, ಅದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.—ನಾನು ಎಲ್ಲರಿಗೂ ರಕ್ಷಣೆಯನ್ನು ಕೊಡಬೇಕಾಗುತ್ತದೆ. I will not take his words seriously.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಅಧ್ಯಕ್ಷರೆ, ಮಾನ್ಯ ಬಸವಲಿಂಗಪ್ಪನವರು ಏನು ಆಪಾದನೆ ಮಾಡಿದ್ದಾರೆ ಅದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—I will ignore ಯಾರು ಏನು ಹೇಳಿದರೂ ನಾನು ಸುಧಾರಿಸಿಕೊಳ್ಳಬೇಕಾಗುತ್ತದೆ. ಈಗ ಮಾನ್ಯ ಸದಸ್ಯರಾದ ಬಿ. ಆರ್. ನೀಲಕಂಠಪ್ಪನವರು ಮಾತನಾಡಬೇಕು.

† ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೆ, ಕಳೆದ ಸಾರಿ ನಾನು ಇದೇ ಸದನದಲ್ಲಿ ಕೆಲವು ಸೂಚನೆಗಳನ್ನು ಸರ್ಕಾರದವರಿಗೆ ಕೊಟ್ಟಿದ್ದೆ. ಅದು ಏನೆಂದರೆ ರೈತರ ಮತ್ತು ಮಧ್ಯಮ ವರ್ಗದ ರೈತರ ಸಂಘರ್ಷದ ಬಗ್ಗೆ. ಅಂದರೆ, ಅಡಿಕೆ, ತೆಂಗು ತೋಟಗಾರಿಕೆಯನ್ನು ಮಾಡತಕ್ಕ ಮಧ್ಯಮವರ್ಗದ ರೈತರು ಬಾವಿಗಳನ್ನು ತೆಗೆಸಿದ್ದಕ್ಕೆ ಸಂಬಂಧಪಟ್ಟಂತೆ ಮತ್ತು ಅವರಿಗೆ ಅದರಿಂದಾಗಿರತಕ್ಕ ನಷ್ಟದ ಬಗ್ಗೆ ಪರಿಹಾರವನ್ನು ಸರ್ಕಾರದವರು ಕೂಡಲೇ ಕೊಡಬೇಕೆಂದು ಹೇಳಿದ್ದೆ. ಕಳೆದಸಾರಿ ನನ್ನ ತಾಲ್ಲೂಕಿನಲ್ಲಿ ೫೦ ಎಕರೆಗೆ ಮೇಲ್ಪಟ್ಟವರಿಗೆ ಪರಿಹಾರವನ್ನು ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದರು. ಆದರೆ ಇದುವರೆಗೂ ಕೂಡ ಅವರಿಗೆ ಪರಿಹಾರ ಹಣವನ್ನು ಕೊಟ್ಟಿರುವುದಿಲ್ಲ. ಇದರ ಬಗ್ಗೆ ಸರ್ಕಾರಕ್ಕೆ ಒಂದು ವರದಿಯೂ ಕೂಡ ಬಂದಿದೆ. ಆದರೂ ಪರಿಹಾರ ಮಾತ್ರ ರೈತರಿಗೆ ಸಿಕ್ಕಿಲ್ಲ. ಈ ವರ್ಷ ಬರಗಾಲದ ಪ್ರಯುಕ್ತ ಕೆಲವು ಕಾಮಗಾರಿಗಳನ್ನು ಮಾಡಿಸಿದ್ದಾರೆ. ಆದರೆ ಅವರಿಗೆ ಕೊಡಬೇಕಾದ ಲಕ್ಷಾಂತರ ರೂಪಾಯಿ ಹಣ ಪಾವತಿ ಆಗಿಲ್ಲ. ಈ ವಿಚಾರ ಪದೇ ಪದೇ ಕೇಳಿ ಬರುತ್ತಿದೆ.

(ಶ್ರೀ ಎಸ್. ಎಸ್. ಕಡಪಟ್ಟಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಕಳೆದಸಾರಿ ಬರಗಾಲದಲ್ಲಿ ಕೆಲಸ ಮಾಡಿದ ಕೂಲಿಗಾರರಿಗೆ ಹಣವನ್ನು ಏನು ಕೊಡಬೇಕಾಗಿತ್ತು ಅದನ್ನು ಇದುವರೆಗೂ ಕೊಟ್ಟಿಲ್ಲ. ಈ ಹಣವನ್ನು ಪಾವತಿ ಮಾಡಿಸಲು ಏನು ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ? ಪ್ರತಿವರ್ಷವೂ ಬರಗಾಲ ಪರಿಸ್ಥಿತಿ ಇದೆಯೆಂಬ ಕೂಗು ಕೇಳಿಬರುತ್ತಿರುವುದರಿಂದ ಯಾವ ರೀತಿ ಆಹಾರ ಸಾಮಗ್ರಿಗಳನ್ನು ಸರ್ಕಾರದವರು ಬರಗಾಲ ಪ್ರದೇಶಗಳಿಗೆ ಒದಗಿಸಲು ಕ್ರಮ ಕೈಗೊಳ್ಳುತ್ತಾರೋ ಅದೇರೀತಿ, ಸಹಕಾರ ಸಂಘಗಳ ಮೂಲಕ ಮಧ್ಯಮವರ್ಗದ ಜನರಿಗೆ ಸಾಲವನ್ನೂ ಕೂಡ ಕೊಡಿಸಲು ಕ್ರಮ ಕೈಗೊಳ್ಳಬೇಕು. ಚಿಕ್ಕಮಗಳೂರು, ಶೃಂಗೇರಿ, ಕೊಪ್ಪ ಮುಂತಾದ ಕಡೆಗಳಲ್ಲಿ ಕುಡಿಯುವುದಕ್ಕೆ ನೀರೂ ಕೂಡ ಸಿಕ್ಕುತ್ತಿಲ್ಲ. ಕೆಲವು ಕಡೆ ೨೦೦–೩೦೦ ಅಡಿ ಕೊಳವೆ ಬಾವಿಗಳನ್ನು ಕೊರೆದರೆ ನೀರು ಸಿಕ್ಕುತ್ತದೆ, ಇನ್ನು ಕೆಲವು ಕಡೆ ೪೦೦ ಅಡಿ ಕೊಳವೆಬಾವಿಯನ್ನು ಕೊರೆದರೂ ನೀರು ಸಿಕ್ಕುವುದೇ ಇಲ್ಲ. ಆದ್ದರಿಂದ ಆ ಭಾಗದಲ್ಲಿ ಬರಗಾಲ ಪರಿಸ್ಥಿತಿಯು ನಿವಾರಣೆಗಾಗಿ

ವಿಶಿಷ್ಟ ರೀತಿಯ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಈಗ ಬರಗಾಲ ಕಾಮಗಾರಿಗಳನ್ನು ನಮ್ಮ ಕಡೆ ಸಂಪೂರ್ಣವಾಗಿ ನಿಲ್ಲಿಸಿದ್ದಾರೆ. ಮೊದಲು ನನ್ನ ತಾಲ್ಲೂಕಿನ ಬಡ ಜನರು, ಕೂಲಿಗಾರರು ಬೇರೆ ಕಡೆ ವಲಸೆ ಹೋಗುತ್ತಿದ್ದರು. ಆದರೆ ಈಗ ಆ ರೀತಿ ಆಗುವುದಿಲ್ಲ ಅವರು ಎಲ್ಲಿಗೆ ಹೋದರೂ ಕೆಲಸ ಸಿಕ್ಕುವುದಿಲ್ಲ. ಬರಗಾಲ ನಿವಾರಣೆಗಾಗಿ ಕೇಂದ್ರದಿಂದ ಹಣ ಬರುತ್ತದೆಂದು ನಮ್ಮ ಸರ್ಕಾರದವರು ಎದುರು ನೋಡದೆ ರಾಜ್ಯ ಸರ್ಕಾರವೇ ಹಣವನ್ನು ಕೊಟ್ಟು ಕೆಲಸ ಮಾಡಿಸಬೇಕು. ನಮ್ಮಲ್ಲಿ ೪ ಡಿವಿಜನ್‌ಗಳಿವೆ. ಈ ಕೆಲಸವನ್ನು ಮಾಡಿಸುವ ಸಲುವಾಗಿ ಜಿಲ್ಲಾವಾರು ಮತ್ತು ಡಿವಿಜನ್‌ವಾರು ಸಮಿತಿಗಳನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಧ್ಯದಲ್ಲೇ ನಮ್ಮ ರಾಜ್ಯದ ಬರಗಾಲ ಪರಿಸ್ಥಿತಿಯನ್ನು ಪರಿಶೀಲಿಸಲು ಬರುತ್ತಿರುವ ಕೇಂದ್ರಸರ್ಕಾರದ ಅಧ್ಯಯನ ತಂಡಕ್ಕೂ ಕೂಡ ಇಲ್ಲಿನ ವಾಸ್ತವಾಂಶವನ್ನು ಮನದಟ್ಟು ಮಾಡಿಕೊಟ್ಟು ನಮ್ಮ ರಾಜ್ಯಕ್ಕೆ ಹೆಚ್ಚು ಹಣ ಸಿಕ್ಕುವಂತೆ ಪ್ರಯತ್ನಿಸಬೇಕಾಗಿ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ ಎಂ. ಇದಿನಬ್ಬ (ಉಳ್ಳಾಲ).—ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಸಂಪದ್ಭರಿತವಾದ ಕರ್ನಾಟಕದಲ್ಲಿ ಸತತವಾಗಿ ಕಳೆದ ೪-೫ ವರ್ಷಗಳಿಂದಲೂ ಬರಗಾಲ ಬರುತ್ತಲೇ ಇದೆ. ಈ ಬಾರಿ ವಿಧಾನಸಭೆಯಲ್ಲಿಯೂ ಕೂಡ ಪ್ರಪ್ರಥಮವಾಗಿ ಈ ಬರಗಾಲದ ಬಗ್ಗೆ ಮಾತನಾಡಬೇಕಾಯಿತಲ್ಲಾ ಎಂಬ ವಿಷಾದ ನನ್ನ ಮನಸ್ಸಿನಲ್ಲಿದೆ. ಪ್ರತಿ ವರ್ಷವೂ ಬರುತ್ತಿರುವ ಈ ಬರಗಾಲವನ್ನು ನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರದವರು ಹಣವನ್ನು ಕೊಡುತ್ತಿದ್ದರೂ ಕೂಡ, ಅದನ್ನು ಉಪಯೋಗಿಸಿಕೊಂಡು ನಮ್ಮ ಸರ್ಕಾರ ಮುಂದುವರಿಯುವ ಲಕ್ಷಣ ಯಾವ ರೀತಿಯಲ್ಲೂ ಕಂಡು ಬರುತ್ತಿಲ್ಲ.

ಈಗ ಬರಗಾಲ ಬಂದಿದೆ. ನಮ್ಮ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಅಭಿವೃದ್ಧಿ ಕೆಲಸವಾಗಬೇಕಾಗಿದೆ. ಮನಸ್ಸು ಇದ್ದರೆ ಸರ್ಕಾರ ಅನೇಕ ದುಂದು ವೆಚ್ಚಗಳನ್ನು ಕಡಿಮೆ ಮಾಡಬಹುದು. ಎಲ್ಲಿ ನೋಡಿದರೂ ದುಂದು ವೆಚ್ಚದ ಕಾರ್ಯಕ್ರಮಗಳು ನಡೆಯುತ್ತಿವೆ. ಜಿಲ್ಲಾ ಪರಿಷತ್ತು ಮಾಡುವಾಗ ಜಿಲ್ಲಾ ಪರಿಷತ್ತು ಮಾಡಬೇಡಿ ಎಂದು ನಾನು ಹೇಳಿದ್ದೆ. ಜಿಲ್ಲಾ ಪರಿಷತ್ತು ಚುನಾವಣೆಗಳು ನಡೆದ ಮೇಲೆ ಮಂಡಲ್ ಪಂಚಾಯಿತಿಗಳನ್ನು ಮಾಡಬೇಕಾಗುತ್ತದೆ. ಇದಕ್ಕೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡತಕ್ಕಂಥ ಪರಿಸ್ಥಿತಿ ಬರುತ್ತದೆಂದು ಹೇಳಿದೆ. ಆದರೆ ಕಡೆಗೂ ಚುನಾವಣೆ ಮಾಡಿದರು. ಅದರ ತಾಪವನ್ನು ೨-೩ ವರ್ಷಗಳಾದರೂ ತಡೆದುಕೊಳ್ಳಲಿಕ್ಕೆ ಸಾಧ್ಯವಾಗಲಾರದು. ಮಾನ್ಯ ನಜೀರ್ ಸಾಬ್‌ರವರ ಕನಸಿನ ಕೂಸು ಎಂದು ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತಿಗಳನ್ನು ಮಾಡಿದ್ದರಿಂದ ಯಾವ ಅಭಿವೃದ್ಧಿ ಕೆಲಸಗಳಿಗೂ ಹಣವನ್ನು ಕೊಡಲಿಕ್ಕೆ ಇಲ್ಲದಂತಾಯಿತು. ಜಿಲ್ಲಾ ಪರಿಷತ್ತಿಗೆ ಒಬ್ಬ ಅಧ್ಯಕ್ಷರು, ಒಬ್ಬ ಉಪಾಧ್ಯಕ್ಷರು ಇಲ್ಲಿ ೩೫ ಜನ ಮಂತ್ರಿಗಳು ಇದ್ದಾರೆ. ಕಾನೂನು ಪ್ರಕಾರ ಹತ್ತಕ್ಕೆ ಒಬ್ಬರಂತೆ ೨೦-೨೨ ಮಂತ್ರಿಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಇದಕ್ಕೆ ಬರಗಾಲ ಇಲ್ಲವೇ ? ಇದನ್ನು ಆಲೋಚನೆ ಮಾಡಬೇಕು. ಎಲ್ಲಿ ನೋಡಿದರೂ ದುಂದು ವೆಚ್ಚ. ಈ ದುಂದು ವೆಚ್ಚವನ್ನು ಕಡಿಮೆ ಮಾಡದಿದ್ದರೆ, ಅನಾವಶ್ಯಕವಾಗಿ ಆಗುತ್ತಿರತಕ್ಕಂಥ ಖರ್ಚನ್ನು ಕಡಿಮೆ ಮಾಡದಿದ್ದರೆ, ಇದಕ್ಕೆಲ್ಲ ಎಲ್ಲಿಂದ ಸಂಪನ್ಮೂಲಗಳು ಬರಬೇಕು. ಬಹಳ ಅರಣ್ಯ ಸಂಪತ್ತಿನಿಂದ ಕೂಡಿದ್ದ ಈ ರಾಜ್ಯದ ಅರಣ್ಯವನ್ನೆಲ್ಲ ಕಡಿದು ಸಂಪೂರ್ಣವಾಗಿ ಸಫಾಯಿ ಮಾಡಿಬಿಟ್ಟರು. ಬರಗಾಲದ ವಿಚಾರವನ್ನು ಪ್ರಸ್ತಾಪ ಮಾಡುವಾಗ ಏನು ಇಟ್ಟಿದ್ದೀರಿ ? ಇದು ಬರೀ ಕಣ್ಣೊರೆಸುವ ತಂತ್ರ ಎನ್ನುವುದೇ ನಮ್ಮ ಅಭಿಪ್ರಾಯ. ಕೇಂದ್ರ ಸರ್ಕಾರದಿಂದ ಎಷ್ಟೋಂದು ಹಣ ಬರುತ್ತಿದೆ. ಐ.ಆರ್.ಡಿ.ಪಿ, ಎನ್.ಆರ್.ಇ.ಪಿ. ಆರ್.ಎಲ್.ಇ.ಜಿ.ಪಿ, ಇವೇ ಮುಂತಾದ ವಿಶೇಷ ಘಟಕ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದವರು ಬೇಕಾದಷ್ಟು ಹಣವನ್ನು ಕೊಡುತ್ತಿದ್ದಾರೆ. ಇದನ್ನು ನಿಮ್ಮ ವರದಿಯಲ್ಲಿ ಹೇಳುವುದಕ್ಕೆ, ಪುಸ್ತಕದಲ್ಲಿ ಪ್ರಕಟಿಸಲು ಆಗಿಲ್ಲ, ಆದ್ದರಿಂದ ಬರಗಾಲದ ವಿಚಾರವನ್ನು ತಾವು ಪದೇ ಪದೇ ಹೇಳುತ್ತಿರುವುದನ್ನು ನೋಡಿದಲ್ಲಿ ಬರಗಾಲ ಶಾಶ್ವತವಾಗಿ ಇರಬೇಕು ಎನ್ನುವುದೇ ನಿಮ್ಮ ಉದ್ದೇಶ ಎಂದು ಸಂಶಯ ಬರುತ್ತದೆ. ತಾವು ಯಾವುದೇ ತೊಂದರೆಗಳನ್ನು ಕಡಿಮೆ ಮಾಡಲಿಲ್ಲ. ೩೫ ಜನ ಮಂತ್ರಿಗಳು, ಅದೇ ರೀತಿಯಲ್ಲಿ ಜಿಲ್ಲಾ ಪರಿಷತ್ತಿಗೆ ಒಬ್ಬ ಅಧ್ಯಕ್ಷರು, ಒಬ್ಬ ಉಪಾಧ್ಯಕ್ಷರು ಅದಕ್ಕೆ ಬೇಕಾದಷ್ಟು ಸವಲತ್ತುಗಳು ಒಂದು ಕಾರು, ಜೀಪು ಇವೆಲ್ಲವುಗಳನ್ನು ಕೊಟ್ಟಿರುತ್ತೀರಿ. ಒಬ್ಬ ಜಿಲ್ಲಾ ಪರಿಷತ್ ಅಧ್ಯಕ್ಷರು ತಿಂಗಳಿಗೆ ಹತ್ತು ಸಾವಿರ ರೂಪಾಯಿಗಳಿಂದ ಹದಿನೈದು ಸಾವಿರ ರೂಪಾಯಿಗಳ ವರೆಗೆ

ಟಿ.ಎ. ಡಿ.ಎ. ತೆಗೆದುಕೊಳ್ಳುತ್ತಿದ್ದಾರೆ. ಇದಕ್ಕೆಲ್ಲ ಲಗಾವಮು ಹಾಕದೆ ಸುಮ್ಮನೆ ಬರಗಾಲ ಬರಗಾಲ ಎಂದು ರಾಜ್ಯಭಾರ ಮಾಡಲು ಬಹಳ ಕಾಲ ಬರುವುದಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರಗಾಲವೇ ಇಲ್ಲ ಎಂದಿದ್ದೀರಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕಥೆಯನ್ನು ಕೇಳಿ. ಇಡೀ ಜಿಲ್ಲೆಗೆ ಮಳೆಗಾಲ ಪ್ರಾರಂಭವಾಗಿ ಒಂದೂವರೆ ತಿಂಗಳಾದರೂ ಕೂಡ ಮಳೆಯೇ ಇಲ್ಲ, ಮತ್ತೆ ಆಗಸ್ಟ್ ಹತ್ತನೇ ತಾರೀಖು ಮಳೆ ಬಿದ್ದು ಇಲ್ಲಿಯವರೆಗೂ ಮಳೆಯಿಲ್ಲದೆ ಈಗ ಎರಡು ದಿವಸಗಳಿಂದ ಮಳೆ ಬರುತ್ತಿದೆ. ಮಳೆಯಿಲ್ಲದೆ ರೈತರು ಸಂಪೂರ್ಣವಾಗಿ ನಾಶವಾಗಿದ್ದಾರೆ. ೩೫-೩೭ ಸಾವಿರ ಹೆಕ್ಟೇರ್ ಪ್ರದೇಶ ಬೆಳೆಯಿಲ್ಲದೆ ನಾಶವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಇದಿನಬ್ಬನವರು ಯಾರಿಗೋಸ್ಕರವಾಗಿ ಮಾತನಾಡುತ್ತಿದ್ದಾರೋ ಗೊತ್ತಾಗುತ್ತಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ದಕ್ಷಿಣದ ಕನ್ನಡ ಜಿಲ್ಲೆಯ ಬಗ್ಗೆ ಮಾನ್ಯ ಸದಸ್ಯರು ಬಹಳವಾಗಿ ಅಧ್ಯಯನ ಮಾಡಿಕೊಂಡು ಹೇಳುತ್ತಿದ್ದಾರೆ. ಅದನ್ನು ಕೇಳುವ ಅವಶ್ಯಕತೆ ಇಲ್ಲವೇ ? ಎರಡು ದಿವಸಗಳಿಂದ ಬಹಳ ವಿಸ್ತಾರವಾಗಿ ಚರ್ಚೆಯಾಗುತ್ತಿದೆ, ರೆಸ್‌ಪಾನ್ಸಿಬಲ್ ಮಿನಿಸ್ಟರ್ ಇಲ್ಲ, ರೆವಿನ್ಯೂ ಮಿನಿಸ್ಟರ್ ಇಲ್ಲ ಫುಡ್ ಮಿನಿಸ್ಟರ್ ಇಲ್ಲ, ಫಾರೆಸ್ಟ್ ಮಿನಿಸ್ಟರ್ ಒಬ್ಬರು ಮಹನಿಯರು ಮತ್ತು ಸಿರಿಕಲ್ಚರ್ ಮಿನಿಸ್ಟರ್‌ರವರು ಇರುತ್ತಾರೆ. ಈ ವಿಚಾರಗಳನ್ನು ಯಾರಲ್ಲಿ ಹೇಳಬೇಕೆಂಬುದು ಅರ್ಥವಾಗುತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ತಾವು ಬಹಳ ವಿಚಾರಗಳನ್ನು ತಿಳಿದುಕೊಂಡಿರತಕ್ಕಂಥವರು. ತಮ್ಮ ಅಧ್ಯಕ್ಷತೆಯಲ್ಲಿ ಯಾರೂ ಇಲ್ಲವೆಂದರೆ ಏನು ವಿಚಾರ. ಸ್ವಲ್ಪ ಅವರ ಕಿವಿಯನ್ನು ಹಿಂಡಿರಿ.

ಶ್ರೀ ಆರ್. ವೆಂಕಟರಾಮಯ್ಯ.—ರೆವಿನ್ಯೂ ಕಮಿಷನರ್ ಕೂಡ ಇಲ್ಲ. ಡೆಪ್ಯುಟಿ ಸೆಕ್ರೆಟರಿ, ಅಂಡರ್ ಸೆಕ್ರೆಟರಿಯವರನ್ನು ಕಳುಹಿಸಿಕೊಟ್ಟರೆ ಅವರು ಏನು ನೋಟ್ ಮಾಡಿ ಕೊಳ್ಳುತ್ತಾರೆ. ಏನು ಕೊಡುತ್ತಾರೆ ತಾವೇ ಹೇಳಿ ? ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ವಿಧಾನ ಸಭೆಯಲ್ಲೂ ಯಾರು ಸಂಬಂಧಪಟ್ಟ ಸಚಿವರು ಇಲ್ಲದಿರುವುದನ್ನು ನೋಡಿದರೆ ಇಲ್ಲಿಯೂ ಕೂಡ ಬರ ಬಂದಿದೆ ಎಂದು ಹೇಳಬೇಕಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಬಹಳ ಗಂಭೀರವಾದ ವಿಚಾರ. ಇದರ ಬಗ್ಗೆ ಆಲೋಚನೆ ಮಾಡಬೇಕು. ಇಡೀ ಜಿಲ್ಲೆಯಲ್ಲಿ ಮೂರು ತಿಂಗಳಿಂದ ಮಳೆ ಬರಲಿಲ್ಲ.
ನಾವು ಎಂದೂ ಇಂಥ ಬರಗಾಲವನ್ನು ಕಂಡಿರಲಿಲ್ಲ

ಶ್ರೀ ಆರ್. ವೆಂಕಟರಾಮಯ್ಯ.—ಆ ಕಡೆ ಯಾರು ಕೇಳುವವರೇ ಇಲ್ಲ. Sir you can pull them. Ask them to sit and hear the Honble Member.

ಶ್ರೀ ಬಿ. ಎಂ ಇದಿನಬ್ಬ.—ಮಂತ್ರಿಗಳು ಸದನಕ್ಕೆ ಬರುವ ಹಾಗೆ ತಾವು ಮಾಡಬೇಕು.

ಉಪಾಧ್ಯಕ್ಷರು.—ಮಂತ್ರಿಗಳು ಇದ್ದಾರೆ ನೀವು ಮಾತನಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರದವರು ವಿಷಯವನ್ನು ಸೀರಿಯಸ್ ಆಗಿ ತೆಗೆದುಕೊಳ್ಳದಿದ್ದರೆ ಸದಸ್ಯರುಗಳು ಮಾತನಾಡಿ ಏನು ಪ್ರಯೋಜನ ? ಮಾನ್ಯ ದೇವೇಗೌಡರು ಮಾತ್ರ ಸದನದಲ್ಲಿ ಇದ್ದರೆ ಸಾಲದು. ಎಲ್ಲರನ್ನೂ ಕರೆಸಿ, ಸದಸ್ಯರು ಹೇಳುವ ವಿಷಯಗಳನ್ನು ಗಮನ ಕೊಟ್ಟು ಕೇಳುವಂತೆ ಮಂತ್ರಿಯವರಿಗೆ ತಾವು ಹೇಳಬೇಕು. ಮಂತ್ರಿಗಳು ಬರುವವರೆಗೂ ಸದನವನ್ನು ಮುಂದಕ್ಕೆ ಹಾಕಿ.

ಉಪಾಧ್ಯಕ್ಷರು.—ಮಾತನಾಡಿ.

ಶ್ರೀ ಎಂ. ಎಸ್. ಪಾಟೀಲ್.—ಯಾರು ಕೇಳುವವರಿದ್ದಾರೆಂದು ನಾವು ಮಾತನಾಡಬೇಕು ?

ಶ್ರೀ ಎಸ್. ಜಿ. ನಂಜಯ್ಯನಮಠ್.—ರಾಜ್ಯದಲ್ಲಿ ಬರಗಾಲ ಬಿದ್ದಿದೆ ಎಂದು ಮಾತನಾಡುತ್ತಾ ಇದ್ದರೆ, ಇತ್ತ ಕಡೆ ಮಂತ್ರಿಗಳು ಸದನದಲ್ಲಿ ಇರುವುದಕ್ಕೆ ಬರ ಬಂದಿದೆ

ಉಪಾಧ್ಯಕ್ಷರು.—ಇದಿನಬ್ಬನವರೇ ತಾವು ಮಾತನಾಡಿ.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೪೫ ದಿವಸಗಳ ಕಾಲ ಮಳೆ ಬರಲಿಲ್ಲ. ಸುಮಾರು ೩೭ ಸಾವಿರ ಹೆಕ್ಟೇರ್ ಪ್ರದೇಶಗಳಲ್ಲಿ ಬೆಳೆ ನಷ್ಟವಾಗಿದೆ. ಕೆಲವು ಕಡೆ ಹಾಕಿದ್ದ ಬೆಳೆಯು ಸಂಪೂರ್ಣವಾಗಿ ಸುಟ್ಟುಹೋಗಿದೆ. ಆದುದರಿಂದ ಬರಗಾಲದ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳುವಾಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೂ ಪ್ರಾಧಾನ್ಯ ಕೊಡಬೇಕು. ಮಳೆ ಇಲ್ಲದೆ ಬೆಳೆ ಎಲ್ಲಾ ಸುಟ್ಟು ಹೋಗಿರುವುದರಿಂದ ರೈತರು ತೆಗೆದುಕೊಂಡಿರುವ ಸಾಲವನ್ನು ವಸೂಲಿ ಮಾಡುವುದನ್ನು ನಿಧಾನ ಮಾಡಬೇಕು ಅಥವಾ ಸಾಲವನ್ನು ಮನ್ನಾ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಕುಡಿಯುವ ನೀರಿಗೂ ಕೂಡ ಬಹಳ ತೊಂದರೆ ಬಂದಿದೆ. ಕುಡಿಯುವ ನೀರನ್ನು ಜಿಲ್ಲೆಯ ಜನರಿಗೆ ಒದಗಿಸುವುದಕ್ಕೋಸ್ಕರವಾಗಿ ಸರ್ಕಾರವು ಎರಡು ಕೋಟಿ ರೂಪಾಯಿಗಳನ್ನಾದರೂ ಕೂಡಲೇ ಬಿಡುಗಡೆ ಮಾಡಬೇಕು. ಕುಡಿಯುವ ನೀರಿನ ವ್ಯವಸ್ಥೆಗೆ ಸೂಕ್ತ ಕೆಲಸಗಳನ್ನು ಬೇಗ ಕೈಗೊಳ್ಳಬೇಕೆಂದು ಜಿಲ್ಲಾಪರಿಷತ್ತಿನವರನ್ನು ಕೇಳಿಕೊಂಡರೆ, ಸರ್ಕಾರದಿಂದ ನಮಗೆ ಹಣ ಬಂದಿಲ್ಲವಾದ್ದರಿಂದ ಯಾವುದೇ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ತೊಂದರೆಯಾಗಿದೆಯೆಂದು ಹೇಳುತ್ತಾರೆ. ಸರ್ಕಾರದವರು ಕೊಡುವ ಅಲ್ಪ ಸ್ವಲ್ಪ ಹಣವನ್ನು ಜಿಲ್ಲಾಪರಿಷತ್ತಿನವರು ತಮ್ಮ ಸಂಬಳ ಹಾಗು ಮತ್ತಿತರ ಬಾಬುಗಳಿಗೆ ಉಪಯೋಗ ಮಾಡುತ್ತಾರೆಯೇ ಹೊರತು ಅಭಿವೃದ್ಧಿ ಕೆಲಸಗಳನ್ನು ಏನೂ ಮಾಡಲಿಕ್ಕೂ ಆಗುವುದಿಲ್ಲ. ಮಂಡಲ ಪಂಚಾಯಿತಿಗಳು ಸಹ ಇದೇ ರೀತಿ ಕೆಲಸಗಳನ್ನು ಮಾಡುತ್ತಿವೆ. ಸರ್ಕಾರದವರು ಕೊಡುತ್ತಿರುವ ಕಡಿಮೆ ಹಣದಲ್ಲಿ ಮಂಡಲ ಪಂಚಾಯಿತಿಗಳು ಯಾವ ಕೆಲಸವನ್ನು ಮಾಡಿಸುವುದಕ್ಕೂ ಆಗುವುದಿಲ್ಲ. ಒಂದೊಂದು ಮಂಡಲ ಪಂಚಾಯಿತಿಗೆ ೫ ಸಾವಿರ ರೂಪಾಯಿಗಳನ್ನು ಕಳುಹಿಸಿದರೆ ಆ ಹಣವು ಅಲ್ಲಿರುವ ಸಿಬ್ಬಂದಿಯವರಿಗೆ ಸಂಬಳ ಕೊಡುವುದಕ್ಕೆ ಮಾತ್ರ ಆಗುತ್ತದೆಯೇ ಹೊರತು ಬೇರೇನೂ ಆಗುವುದಿಲ್ಲವೆಂದು ದು:ಖದಿಂದ ಹೇಳಬೇಕಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಡಿಯುವ ನೀರಿನ ಬಗ್ಗೆ ಬರೀ ಬೋರ್‌ವೆಲ್‌ಗಳನ್ನು ತೋಡಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಮಿನಿ ವಾಟರ್ ಸಪ್ಲೈ ಸ್ಕೀಮುಗಳನ್ನು ತಯಾರು ಮಾಡಿ ಕೆಲಸ ಮಾಡಬೇಕು. ಜಿಲ್ಲೆಯಲ್ಲಿ ೧೦ ರಿಂದ ೨೦ ಅಥವಾ ೩೦ ಮಿನಿ ವಾಟರ್ ಸಪ್ಲೈ ಸ್ಕೀಮುಗಳನ್ನು ಮಾಡಿದರೆ ಸಮಸ್ಯೆಯು ಸ್ವಲ್ಪಮಟ್ಟಿಗೆ ಸುಧಾರಣೆಯಾಗಬಹುದು. ಈ ವ್ಯವಸ್ಥೆಯನ್ನು ಮಾಡಬೇಕಾದರೆ ಸರ್ಕಾರದವರು ಸಾಕಷ್ಟು ಹಣವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರ ಬಂದು ಜನರು ಬಹಳ ಕಷ್ಟಪಡುತ್ತಿದ್ದಾರೆ. ಪ್ರಥಮವಾಗಿ ಬಿತ್ತಿದಂಥ ಬೆಳೆಯು ಸಂಪೂರ್ಣ ಸುಟ್ಟುಹೋದಂಥ ವಿಷಯವನ್ನು ತಿಳಿದರೂ ಸಹ ಯಾರೂ ಬರಲಿಲ್ಲ, ಅಧಿಕಾರಿಗಳು ಅತ್ತ ಕಡೆ ಗಮನ ಕೊಟ್ಟಿರಲಿಲ್ಲ. ಯಾವ ಅಧಿಕಾರಿಯೂ ಈ ರೀತಿಯಾಗಿದೆಯೆಂದು ನಿಮಗೆ ತಿಳಿಸಲಿಲ್ಲ. ಸರಕಾರ ಈ ಬಗ್ಗೆ ಆಲೋಚನೆಯನ್ನೇ ಮಾಡಿಲ್ಲವೆಂದರೆ ನಮಗೆ ಆಶ್ಚರ್ಯವಾಗುತ್ತದೆ. ಇವತ್ತು ಕೇಂದ್ರ ಆರ್. ಎಲ್. ಇ. ಜಿ. ಪಿ., ಎನ್. ಆರ್. ಇ. ಪಿ., ಐ ಆರ್ ಡಿ. ಪಿ. ಯೋಜನೆಗಳಲ್ಲಿ ವಿಶೇಷವಾಗಿ ಹಣವನ್ನು ಕೊಡುತ್ತಿದೆ ಅದನ್ನೂ ಕೂಡ ನೀವು ಹೇಳುವುದಿಲ್ಲ. ಈ ರೀತಿಯಲ್ಲಿ ಹೋದರೆ ನಿಜವಾಗಿಯೂ ಕೂಡ ಈ ಕರ್ನಾಟಕ ರಾಜ್ಯದ ಜನತೆ ಇದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ. ಒಂದು ಕಡೆ ಕಾಡು ನಾಶವಾಗುತ್ತಿದೆ. ಕರ್ನಾಟಕದಂತಹ ಕಾಡು ಇಡೀ ಭಾರತದಲ್ಲಿ ಎಲ್ಲೂ ಇಲ್ಲವೆಂದು ಹೇಳತಕ್ಕಂತಹ ಮಾತನ್ನು, ಬೇರೆ ಬೇರೆಯವರು ಅನೇಕ ಪುಸ್ತಕಗಳಲ್ಲಿ ಬರೆದಿದ್ದನ್ನು ನಾನು ಓದಿದ್ದೇನೆ. ಕಾಡು ಸಂಪತ್ತನ್ನು ಕಾಡುಗಳ್ಳರು ದೋಚುತ್ತಿದ್ದಾರೆ ಇಷ್ಟೇ ಅಲ್ಲದೆ ಅರಣ್ಯ ಸಂಪತ್ತಿನ ನಾಶದಿಂದಾಗಿ ಬರಗಾಲ ಬರಲಿಕ್ಕೆ ಪ್ರಾರಂಭವಾಗಿ ರೈತರಿಗೆ, ಕೃಷಿಕರಿಗೆ ಬಹಳ ತೊಂದರೆ ಯಾಗುತ್ತಿದೆ. ಮಾನ್ಯ ಅರಣ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಇಲ್ಲದಿದ್ದರೆ ಪೂರ್ಣವಾಗಿ ಕಾಡಿನ ಸಂಹಾರವಾಗುತ್ತದೆ. ಈ ದುರಂತ ಹೆಚ್ಚುವನ್ನು ಕಡಿಮೆ ಮಾಡಬೇಕು. ಬರಗಾಲದ ಬಗ್ಗೆ ಕಳಕಳಿ ಇರಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಬೀಳದೆ ಒಂದನೆ ಬೆಳೆಗೆ ಹಾನಿಯಾಗಿದೆ. ೩೭,೦೦೦ ಹೆಕ್ಟೇರ್ ಭೂಮಿಗೆ ಇದರಿಂದಾಗಿ ಹಾನಿಯಾಗಿದೆ. ಮಾನ್ಯ ಅಮರನಾಥಶೆಟ್ಟಿಯವರು ಹೇಳಿಕೆಯನ್ನು ಕೊಟ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತಹ ಬರ ಇಲ್ಲ, ೩೭,೦೦೦ ಹೆಕ್ಟೇರ್ ಭೂಮಿಗೆ ಹಾನಿಯಾಗಿದೆ ಎಂದು ಹೇಳಿದ್ದಾರೆ. ಇದರ ಅರ್ಥ ಏನು ಒಂದು ಕಡೆ ಹಾನಿಯಾಗಿದೆಯೆಂದು ಹೇಳುತ್ತಾರೆ ಮತ್ತೊಂದು ಕಡೆ ಬರ ಇಲ್ಲವೆಂದು ಹೇಳುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಗೆ ಬಹಳ ಹಾನಿಯಾಗಿದೆ. ಇದನ್ನು ನಮ್ಮ ಸರಕಾರ ಮತ್ತು ನಮ್ಮ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮದು ಮೂರು ತಿಂಗಳು ರಾತ್ರಿ, ಹಗಲು ಮಳೆ ಬರುವಂತಹ ಪ್ರದೇಶ ಮಳೆ ನೀರು ನದಿಗಳಿಗೆ, ಸಮುದ್ರಕ್ಕೆ ಹೋಗುವುದರಿಂದ ನಮಗೆ ಅಷ್ಟು ಗೊತ್ತಾಗುವುದಿಲ್ಲ. ಇದೇ ಮಳೆ ಬೆಂಗಳೂರಿನಲ್ಲಿ ಬಿದ್ದಿದ್ದೇ ಆದರೆ

ಬೆಂಗಳೂರು ಮರುಳಾಗಿ ಹೋಗುತ್ತದೆ. ಏಕೆಂದರೆ ಇಲ್ಲಿ ನದಿ ಇಲ್ಲ. ಸಮುದ್ರ ಇಲ್ಲ. ಅಂತಹ ಪ್ರದೇಶವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವತ್ತು ಮಳೆ ಇಲ್ಲ. ಕೊನೆ ಪಕ್ಷ ಕೊಳವೆ ಭಾವಿ ತೋಡಲು ಎರಡು ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಬೇಕೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಬರಗಾಲ ಪೀಡಿತ ಜಿಲ್ಲೆಯೆಂದು ಪರಿಗಣಿಸಬೇಕು ಮತ್ತು ಎಲ್ಲಾ ಜಿಲ್ಲೆಗಳಿಗೂ ಕೊಟ್ಟ ಹಾಗೆ ಅಲ್ಲಿನ ರೈತರಿಗೆ ಉಪಕಾರವಾಗುವಂತಹ ರೀತಿಯಲ್ಲಿ ಸಹಾಯ ಮಾಡಬೇಕೆಂದು ಹೇಳಲು ಅಪೇಕ್ಷೆ ಪಡುತ್ತೇನೆ. ರೈತರು ತೆಗೆದುಕೊಂಡಂತಹ ಸಾಲವನ್ನು ಮನ್ನಾ ಮಾಡಬೇಕು ಏಕೆಂದರೆ ಬೇರೆ ಬೇರೆ ಕಡೆಗಳಲ್ಲಿ ರೈತರಿಗೆ ಹಾನಿಯಾದರೆ ಸಾಲ ಮನ್ನಾ ಮಾಡತಕ್ಕಂತಹ ವ್ಯವಸ್ಥೆ ಇದೆ. ರೈತರು ಈ ದೇಶದ ಬೆನ್ನೆಲುಬೆಂದು ಹೇಳುತ್ತೇವೆ. ಅವನಿಲ್ಲದಿದ್ದರೆ ಈ ದೇಶ ಉಳಿಯುವುದಿಲ್ಲವೆಂದು ಹೇಳುತ್ತೇವೆ. ಕೇವಲ ಮೊಸಳೆ ಕಣ್ಣೀರು ಹರಿಸಿದರೆ ಪ್ರಯೋಜನವಿಲ್ಲ. ಅವನಿಗೆ ತೊಂದರೆ ಬಂದಂತಹ ಕಾಲದಲ್ಲಿ ಅವನಿಗೆ ಅನ್ಯಾಯವಾದಂತಹ ಕಾಲದಲ್ಲಿ ಅವನಿಗೆ ಸಹಾಯವಾಗಿ ನಿಲ್ಲತಕ್ಕಂತಹ ಮತ್ತು ಅವನ ಬೆನ್ನೆಲುಬನ್ನು ಗಟ್ಟಿ ಮಾಡತಕ್ಕಂತಹ ವ್ಯವಸ್ಥೆಯನ್ನು ಸರಕಾರ ಮಾಡಿದರೆ ಮಾತ್ರ ರೈತರ ಬಗ್ಗೆ ಸರಕಾರಕ್ಕೆ ಕಳಕಳಿ ಇದೆಯೆಂದು ನಂಬಬಹುದಾಗಿದೆ. ಹಳ್ಳಿಗಳಿರತಕ್ಕಂತಹ ಪ್ರದೇಶದಲ್ಲಿ ರೈತರು ಇರತಕ್ಕಂತಹ ಪ್ರದೇಶಗಳಲ್ಲಿ ಅವರಿಗೆ ಸೂಕ್ತ ಅನುಕೂಲವನ್ನು ಕಲ್ಪಿಸಿಕೊಡದಿದ್ದರೆ ಈ ದೇಶ ಉಳಿಯುವುದಿಲ್ಲವೆಂದು ದೊಡ್ಡ ದೊಡ್ಡ ತಜ್ಞರು ಪುಸ್ತಕದಲ್ಲಿ ಬರೆದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರಿಗೆ ಬಹಳ ಹಾನಿಯಾಗಿದೆ. ೩೭,೦೦೦ ಹೆಕ್ಟೇರ್ ಭೂಮಿಗೆ ಹಾನಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಸಹಾಯ ಮಾಡಬೇಕೆಂದು ಹೇಳುತ್ತಾ ಇದರ ಬಗ್ಗೆ ಒಂದು ಕವನವನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

'.ನಾಲ್ಕು ವರ್ಷಗಳ ಸತತ ಬರಗಾಲ ಕರ್ನಾಟಕಕ್ಕೆ/ಅರಣ್ಯ ಸಂಪತ್ತಿನ ನಾಶವೇ ಕಾರಣ
ಈ ದುರಂತಕ್ಕೆ/ತಡೆಗಳಿಲ್ಲ ಅಧಿಕಾರಿಗಳ ಸ್ವೇಚ್ಛೆ, ನಿರ್ಲಕ್ಷ, ಅಹಂಕಾರಕ್ಕೆ/ಸಂಪತ್ ಭರಿತ
ಕರ್ನಾಟಕಕ್ಕೆ ಬೇಡ, ಬೇಕೆ ಭಿಕ್ಷೆ./ಇನ್ನಾದರೂ ಎಚ್ಚರಗೊಳ್ಳಿ, ಇದೇ ಬೇಡಿಕೆ-ಕೋರಿಕೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೩-೦೦ ಪಿ.ಎಂ.

† ಶ್ರೀ ಆರ್.ಎಂ. ಪಾಟೀಲ (ಅರಭಾವಿ).—ಸನ್ಮಾನ್ಯ ಅಧ್ಯಕ್ಷರೆ, ಈಗ ನಾನು ನಮ್ಮ ರಾಜ್ಯದಲ್ಲಿರುವಂತಹ ಬರಗಾಲದ ಪರಿಸ್ಥಿತಿಯ ಬಗ್ಗೆ ಮಾತನಾಡಲು ನಿಂತಿದ್ದೇನೆ ಈ ಬರಗಾಲದ ಬಗ್ಗೆ ಇರುವಂತಹ ಸ್ಪಷ್ಟ ಚಿತ್ರವನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಮನವಿ ರೂಪದಲ್ಲಿ ಅರ್ಪಣೆ ಮಾಡುತ್ತಿದ್ದಾರೆ. ಈ ಒಂದು ಮನವಿ ಪತ್ರವನ್ನು ಅರ್ಪಣೆ ಮಾಡುವುದರಲ್ಲಿ ಕೊಟ್ಟಿರತಕ್ಕಂತಹ ಅಂಕಿ ಸಂಖ್ಯೆಗಳನ್ನು ನೋಡಿದಾಗ ನನ್ನ ಮತದಾರರ ಕ್ಷೇತ್ರವಾದ ಗೋಕಾಕ್ ತಾಲ್ಲೂಕಿನಲ್ಲಿ ಕೇವಲ ೫೩ ಹಳ್ಳಿಗಳು ಸತತವಾಗಿ ಬರಗಾಲಕ್ಕೆ ತುತ್ತಾಗಿವೆ ಎಂಬುದಾಗಿ ಅಲ್ಲಿನ ಅಧಿಕಾರಿಗಳು ಮಾಡಿದ್ದಾರೂ ಕೂಡ ಇವರು ಕೇಂದ್ರಕ್ಕೆ ಕೊಟ್ಟಿರುವಂತಹ ಮಾಹಿತಿ ಪ್ರಕಾರ ಕೇವಲ ೬ ಹಳ್ಳಿಗಳು ಮಾತ್ರ ಸತತವಾಗಿ ಬರಗಾಲಕ್ಕೆ ತುತ್ತಾಗಿವೆ ಎಂಬುದಾಗಿ ಹೇಳಿದ್ದಾರೆ. ಈ ಒಂದು ವರದಿಯನ್ನು ನೋಡಿದರೆ ಘಟಪ್ರಭಾ ಎಡದಂಡೆ ಕಾಲುವೆ ನಮ್ಮ ತಾಲ್ಲೂಕಿನಲ್ಲಿ ಹರಿಯುತ್ತಿದ್ದು ಅದರಿಂದ ನೀರಾವರಿಯಾಗುತ್ತಿದೆ ಎನ್ನತಕ್ಕ ಮಾತನ್ನು ಎಲ್ಲರೂ ಹೇಳುತ್ತಿದ್ದಾರೆ. ಇರತಕ್ಕ ೧೦೮ ಹಳ್ಳಿಗಳಲ್ಲಿ ನೀರಾವರಿಯಾಗುತ್ತಿರುವುದು ಕೇವಲ ೪೦ ಹಳ್ಳಿಗಳು ಮಾತ್ರ. ಈ ೪೦ ಹಳ್ಳಿಗಳಲ್ಲಿ ಘಟಪ್ರಭಾ ಎಡದಂಡೆ ಕಾಲುವೆಯಿಂದ ನೀರಾವರಿಯಾಗುತ್ತಿದೆ ಎಂಬ ಉದ್ದೇಶದಿಂದ ಅಧಿಕಾರಿಗಳು ಈ ಒಂದು ತಪ್ಪು ಮಾಹಿತಿಯನ್ನು ಕೊಟ್ಟಿರುತ್ತಾರೆ. ಮೊನ್ನೆ ಈ ಬಗ್ಗೆ ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ಕೇವಲ ೨೬ ಹಳ್ಳಿಗಳಲ್ಲಿ ಮಾತ್ರ ಹಿಂಗಾರಿ ಪ್ರದೇಶದಲ್ಲಿ ಬರುತ್ತಿದ್ದು ೫೩ ಹಳ್ಳಿಗಳು ನಿಜವಾಗಿಯೂ ಬರಗಾಲಕ್ಕೆ ತುತ್ತಾಗಿವೆ ಎಂಬುದಾಗಿ ಹೇಳಿದಾಗ ಅವರೇ ಒಪ್ಪಿಕೊಂಡಿದ್ದಾರೆ. ಆದರೆ ಸರ್ಕಾರಕ್ಕೆ ಈ ರೀತಿಯ ತಪ್ಪು ಮಾಹಿತಿಯನ್ನು ಯಾರು ನೀಡಿದ್ದಾರೋ ತಿಳಿಯದು. ಬರಗಾಲದ ಬಗ್ಗೆ ನಾನು ಕಳೆದ ಸಾರಿ ಮಾತನಾಡಿದಾಗ ಕಳೆದ ೪ ವರ್ಷಗಳಿಂದಲೂ ನಮ್ಮ ರಾಜ್ಯದಲ್ಲಿ ಬರಗಾಲದ ಇದ್ದು, ಈ ಒಂದು ಬರಗಾಲ ಶಾಶ್ವತವಾಗಿ ಹೋಗಬೇಕಾದರೆ ಅದಕ್ಕಾಗಿಯೇ ಒಂದು ಸಮಿತಿಯನ್ನು ಮಾಡಬೇಕು. ಎಲ್ಲೆಲ್ಲಿ ನೀರಿನ ಅನುಕೂಲತೆ ಇದೆ ಅಲ್ಲೆಲ್ಲಾ ಸಣ್ಣ ಸಣ್ಣ ಪಿಕಪ್‌ಗಳನ್ನು ಮಾಡಿ ವ್ಯವಸಾಯಕ್ಕೆ ನೀರನ್ನು ಒದಗಿಸುವಂತಹ ಕೆಲಸವನ್ನು ಮಾಡಿದ್ದೇ ಆದರೆ ಬರಗಾಲ ಇಲ್ಲದಂತಾಗುತ್ತದೆ. ಗಂಗಾ ಕಲ್ಯಾಣ

ಯೋಜನೆಯನ್ನು ನಮ್ಮ ರಾಜ್ಯ ಸರ್ಕಾರ ಮಾಡಿದೆ. ನನ್ನ ತಾಲ್ಲೂಕಿನಲ್ಲೂ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಅನೇಕ ಕೆಲಸ ಕಾರ್ಯಗಳನ್ನು ನದಿ ಪಕ್ಕದಲ್ಲಿರತಕ್ಕ ಅನುಕೂಲ ಸ್ಥಳಗಳಲ್ಲಿ ತೆಗೆದುಕೊಂಡರೆ ಸ್ವಲ್ಪಮಟ್ಟಿಗೆ ೩-೪ ಹಳ್ಳಿಗಳಲ್ಲಾದರೂ ಬರಗಾಲವನ್ನು ನಿವಾರಣೆ ಮಾಡಬಹುದು. ಉದಾಹರಣೆಗೆ ಹೇಳುವುದಾದರೆ, ನಮ್ಮ ತಾಲ್ಲೂಕಿನಲ್ಲಿ ಬರತಕ್ಕ ಘಟಪ್ರಭಾ ಬಲದಂಡೆ ಕಾಲುವೆಯ ಕೆಲಸವನ್ನು ಕೇವಲ ಬರಗಾಲ ಬಂದಾಗ ಮಾತ್ರ ಮಾಡುತ್ತಿದ್ದು, ಇನ್ನು ಮುಂದೆ ಈ ಬರಗಾಲದಲ್ಲಿ ಮಾತ್ರ ಈ ಕಾಲುವೆಯ ಕೆಲಸವನ್ನೇ ಮಾಡುವುದು ಬೇಡ ಎಂಬುದಾಗಿ ಅಲ್ಲಿಯ ಮಂಡಲ್ ಪಂಚಾಯಿತಿ ಕಚೇರಿ ಎದುರು ಕಳೆದ ೨೫ ದಿವಸಗಳಿಂದ ಜನರು ಉಪವಾಸ ಸತ್ಯಾಗ್ರಹ ಪ್ರಾರಂಭ ಮಾಡಿದ್ದಾರೆ. ಪ್ರತಿ ವರ್ಷ ಬರಗಾಲ ಮಾತ್ರ ಕಾಲುವೆಯ ಕೆಲಸವನ್ನು ಮಾಡುವುದು ಬೇಡ. ಅದರ ಬದಲು ಆ ಕಾಲುವೆಯ ಕೆಲಸವನ್ನು ಪೂರ್ಣಗೊಳಿಸಲು ಟೆಂಡರನ್ನು ಕರೆಯಬೇಕೆಂದು ಅಲ್ಲಿಯ ಜನ ಒತ್ತಾಯ ಮಾಡುತ್ತಿದ್ದಾರೆ. ಈ ವಿಚಾರವನ್ನು ಮಾತನಾಡುವಾಗ ಕೆಲವು ಕಾಂಗ್ರೆಸಿಗರು ಏನೋ ಹೇಳಿದರು. ಆ ಮಾತುಗಳು ಅವರಿಗೆ ನಿಜವಾಗಿಯೂ ಶೋಭೆ ತರತಕ್ಕಂತಹದ್ದಲ್ಲ. ಕೇಂದ್ರದವರು ನಿಮಗೆ ಹಣವನ್ನು ಕಳುಹಿಸಿಕೊಡುತ್ತಾರೆ. ಅದನ್ನು ರಾಜ್ಯ ಸರ್ಕಾರದವರು ಖರ್ಚು ಮಾಡುತ್ತಿಲ್ಲವೆಂದು ನಮ್ಮ ಭಾಗದ ಪಾರ್ಲಿಮೆಂಟ್ ಸದಸ್ಯರೊಬ್ಬರು ಹೇಳಿದ್ದಾರೆ. ಬರಗಾಲದ ವಿಚಾರದಲ್ಲಿ ರಾಜಕೀಯ ವನ್ನು ಬೆರೆಸಿ ಮಾತನಾಡುವಂತಹದ್ದು ಸರಿಯಾದುದಲ್ಲ. ಅದರ ಬಗ್ಗೆ ಹೇಳುವುದಾದರೆ, ೧೯೭೨ರಲ್ಲಿ ಇದನ್ನು ಪ್ರಾರಂಭ ಮಾಡಿದಾಗ ಈ ಒಂದು ಬಲದಂಡೆ ಕಾಲುವೆಗಾಗಿ ೩೪,೦೦೦ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ನಂತರ ಪ್ರತಿ ವರ್ಷ ೧೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರು. ಆದರೆ ೧೯೮೩ ರಿಂದೀಚೆಗೆ ೨೫೦ ಲಕ್ಷದಿಂದ ಹಿಡಿದು ೫೬೦ ಲಕ್ಷ ರೂಪಾಯಿಗಳನ್ನು ಕಾಲುವೆಯ ಕೆಲಸಕ್ಕಾಗಿ ಖರ್ಚು ಮಾಡುತ್ತಿದೆ ನಮ್ಮ ರಾಜ್ಯ ಸರ್ಕಾರ. ಇದರಲ್ಲಿ ರಾಜಕೀಯವನ್ನು ಮಾಡದೆ ಬಲದಂಡೆ ಕಾಲುವೆಯ ಕೆಲಸಕ್ಕಾಗಿಯಾಗಲಿ, ನಾನಾ ಇತರೆ ಯೋಜನೆಗಳಿಗಾಗಲಿ, ಕೇಂದ್ರ ಸರ್ಕಾರ ದವರು ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಎನ್.ಆರ್.ಇ.ಪಿ., ಆರ್.ಎಲ್.ಇ.ಜಿ.ಪಿ. ಯೋಜನೆಯಡಿಯಲ್ಲಿ ಹೆಚ್ಚು ಹಣವನ್ನು ಕೊಡಬೇಕೆಂದು ನಾವೂ ಕೇಂದ್ರ ಸರ್ಕಾರವನ್ನು ಕೇಳ ಬೇಕಾಗುತ್ತದೆ. ತಾವೂ ಕೂಡ ಅದೇ ರೀತಿಯಲ್ಲಿ ಒತ್ತಾಯ ಮಾಡಬೇಕಾಗುತ್ತದೆ. ಇವತ್ತು ಬರಗಾಲವನ್ನು ಹೋಗಲಾಡಿಸಲು ಡಿ.ಪಿ.ಎ.ಪಿ. ಯೋಜನೆಗಳನ್ನು ಕೈಗೊಳ್ಳಲಾಗಿದೆ. ಇವತ್ತು ಬ್ಯಾರೇಜ್‌ಗಳನ್ನು ತೆಗೆದುಕೊಂಡು ಪ್ರತಿ ವರ್ಷ ೧೦ ಲಕ್ಷ ರೂ.ಗಳನ್ನು ಕೊಡುತ್ತಾ ಹೋದರೆ ಪ್ರತಿ ವರ್ಷ ರೇಟ್ ಜಾಸ್ತಿಯಾಗುತ್ತದೆ. ಒಂದೇ ಸಾರಿ ಬರಗಾಲ ಪೀಡಿತ ಪ್ರದೇಶದಲ್ಲಿ ಹೆಚ್ಚಿನ ಹಣವನ್ನು ಕೊಟ್ಟರೆ ಮಾತ್ರ ಬರಗಾಲವನ್ನು ಹೋಗಲಾಡಿಸಲು ಸಾಧ್ಯ. ಮೊನ್ನೆ ವಿರೋಧ ಪಕ್ಷದ ನಾಯಕರು ಯಾವರು ಬೆಳಗಾಂ ಜಿಲ್ಲೆಗೆ ಬಂದಿದ್ದರು. ಆದರೆ ನಮ್ಮ ಗೋಕಾಕ್ ತಾಲ್ಲೂಕು ನೀರಾವರಿ ತಾಲ್ಲೂಕು ಎಂದು ಅವರು ಅಲ್ಲಿಗೆ ಬರಲಿಲ್ಲ. ಆದರೆ ನಮ್ಮ ಗೋಕಾಕ್ ತಾಲ್ಲೂಕಿನಲ್ಲಿನ ೧೧೮ ಹಳ್ಳಿಗಳಲ್ಲಿ ೫೩ ಹಳ್ಳಿಗಳು ಬರಗಾಲಕ್ಕೆ ತುತ್ತಾಗಿರುತ್ತವೆ. ಆದ್ದರಿಂದ ಇಲ್ಲಿಗೆ ಶಾಶ್ವತವಾದ ಯೋಜನೆ ಮಾಡಿ ಬರಗಾಲ ಹೋಗುವಂತೆ ನೋಡಬೇಕು. ಇವತ್ತು ನಾವು ಪಿಕಪ್‌ಗಳನ್ನು ಮಾಡಬೇಕಾಗುತ್ತದೆ. ಘಟಪ್ರಭಾದಲ್ಲಿ ಹಿಂದೆ ೪೨ ಟಿ.ಎಂ.ಸಿ. ನೀರು ಇರುತ್ತಿದ್ದುದು ಈ ವರ್ಷ ಅದು ೨೧ ಟಿ.ಎಂ.ಸಿ.ಗೆ ಇಳಿದಿದೆ. ನೀರಾವರಿ ಪ್ರದೇಶದಲ್ಲಿ ಹಿಂಗಾರು ಬೆಳೆ ಬೆಳೆಯುವುದಕ್ಕೂ ಕೂಡಾ ನೀರು ಕೊಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಪಿಕಪ್‌ಗಳನ್ನು ಮಾಡುವುದರಿಂದ ಈ ತೊಂದರೆಗಳನ್ನು ಹೋಗಲಾಡಿಸ ಬಹುದು. ಆದ್ದರಿಂದ ತಕ್ಷಣ ಪಿಕಪ್‌ಗಳನ್ನು ಆದಷ್ಟು ಬೇಗ ನಿರ್ಮಾಣ ಮಾಡಿ ಅಲ್ಲಿನ ರೈತರಿಗೆ ಅನುಕೂಲ ಮಾಡಿ ಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು) —ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸತತವಾಗಿ ೪ ವರ್ಷಗಳಿಂದ ಬರಗಾಲ ಬರುತ್ತಾ ಇದೆಯೆಂಬುದನ್ನು ನೋಡಿದರೆ ಬಹುತೇಕ ಜನತಾ ಸರ್ಕಾರಕ್ಕೆ ಬಳುವಳಿಯಾಗಿ ಬರಗಾಲ ಬೆನ್ನುಹತ್ತಿದೆಯೆಂದು ಸಂಶಯ ಬರುತ್ತದೆ. ಆದರೆ ಈ ಬರಗಾಲವನ್ನು ನಾವು ಪಕ್ಷಾತೀತವಾಗಿ ನೋಡಿಕೊಂಡು ಹೋಗತಕ್ಕದ್ದು ನಮ್ಮೆಲ್ಲರ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಬರಗಾಲಕ್ಕೆ ತುತ್ತಾಗಿರತಕ್ಕವರು ಕೇವಲ ಒಂದೇ ಪಕ್ಷಕ್ಕೆ ಸೇರಿದ ಜನರಲ್ಲ. ಎಲ್ಲಾ ಪಕ್ಷದ ಜನರೂ, ಬಡಜನರು ಹಾಗೂ ರೈತರು ಇದರಲ್ಲಿ ತುತ್ತಾಗಿದ್ದಾರೆಂದು ವಿಶೇಷವಾಗಿ ನಾವು ಇಲ್ಲಿ ಹೇಳಬೇಕಾಗುತ್ತದೆ. ಇವತ್ತು ಬರಗಾಲ ಬಂತು ಎಂದರೆ ಕೆಲವು ವರ್ಗದ ಜನರು ಅದನ್ನು ಸ್ವಾಗತ ಮಾಡುತ್ತಾರೆಂದು ಹೇಳಿದರೆ ತಪ್ಪಾಗಲಾರದು. ಆ ವರ್ಗವೇ ಬೇರೆ.

ಲಾಭ ಪಡೆಯಬೇಕು ಎನ್ನುವ ವರ್ಗ ಬೇರೆ ಇದೆ. ಈ ವರ್ಗಕ್ಕೆ ಹೆಚ್ಚು ಆದ್ಯತೆ ಕೊಡದೇ ಇರತಕ್ಕದ್ದು ನಮ್ಮ ಶಾಸಕರ ಮೇಲೆ ಇದೆ, ನಮ್ಮ ಸರ್ಕಾರದ ಮೇಲೆ ಇದೆ ಎಂದು ಪ್ರಾಸಂಗಿಕವಾಗಿ ಹೇಳುತ್ತೇನೆ. ಬರಗಾಲ ಬಂದ ತಕ್ಷಣ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಮೊದಲನೆಯದಾಗಿ ಯಾರಿಗೆ ಕೆಲಸ ಅವಶ್ಯ ಇದೆ ಅವರಿಗೆ ಕೆಲಸ ಕೊಡುವುದು, ನಂತರ ಯಾವ ಯಾವ ಭಾಗಗಳಲ್ಲಿ ಏನೇನು ಕೆಲಸ ಮಾಡಬೇಕೆನ್ನುವುದು ಇದೆ. ಎರಡನೆಯದಾಗಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸುವುದು. ಮೂರನೆಯದಾಗಿ ಸಾಕಷ್ಟು ಆಹಾರ ಧಾನ್ಯಗಳನ್ನು ಜನರಿಗೆ ಒದಗಿಸುವುದು. ಜೊತೆಗೆ ಆರೋಗ್ಯವನ್ನು ಕಾಪಾಡುವುದು. ಈ ನಾಲ್ಕು ಮಾರ್ಗಗಳಲ್ಲಿ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಳ್ಳುತ್ತದೆ. ಈ ಒಂದು ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಿ ನಡೆಯುತ್ತಿವೆಯೋ ಇಲ್ಲವೋ ಎಂಬುದನ್ನು ನೋಡಬೇಕು. ಇವತ್ತು ಯಾರಿಗೆ ಕೆಲಸ ಬೇಕೋ ಅವರಿಗೆ ಸಂಪೂರ್ಣವಾಗಿ ತಕ್ಷಣ ಕೆಲಸ ಕೊಡುತ್ತೇವೆಂದು ಘೋಷಣೆಗಳನ್ನು ಮಾಡುತ್ತಿದ್ದೀರಿ. ಆದರೆ ಜಿಲ್ಲಾ ಪರಿಷತ್ತುಗಳ ಎದುರುಗಡೆ ಹಾಗೂ ತಾಲ್ಲೂಕು ಕಚೇರಿಗಳ ಎದುರುಗಡೆ ನೂರಾರು ಜನ ಕೆಲಸ ಕೊಡಿ ಎಂದು ಬಂದು ನಿಂತಿರುವುದನ್ನು ನೋಡುತ್ತಿದ್ದೇವೆ. ನಮ್ಮ ಜಿಲ್ಲೆಯ ಜಿಲ್ಲಾಪರಿಷತ್‌ಗೆ ನಾವು ಹೋದಾಗ ನವಲಗುಂದ ತಾಲ್ಲೂಕಿನ ಬಡಕೂಲಿಕಾರರು ಕೆಲಸ ಕೊಡಿ ಇಲ್ಲವೇ ಅನ್ನ ಕೊಡಿ ಎಂದು ನಿಂತು ಕೇಳುತ್ತಿದ್ದುದನ್ನು ನೋಡಿದ್ದೇವೆ ಇವತ್ತು ಘೋಷಣೆ ಮಾಡಿದ ಸರ್ಕಾರ ತಕ್ಷಣ ಕೆಲಸ ಕೊಡತಕ್ಕ ಕಾರ್ಯಕ್ರಮಕ್ಕೆ ಏಕೆ ವ್ಯವಸ್ಥೆ ಮಾಡಿಲ್ಲ ? ಏಕೆ ಅಸಮರ್ಥವಾಗಿದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಬರಗಾಲವನ್ನು ಪರಿಣಾಮಕಾರಿಯಾಗಿ ಎದುರಿಸತಕ್ಕ ಶಕ್ತಿಯನ್ನು ಈ ಸರ್ಕಾರ ಕಳೆದುಕೊಂಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಶಾಸಕ ಮಿತ್ರರಾದ ಮಾನ್ಯ ಇದಿನಬ್ಬ ಅವರು ಹೇಳಿದಹಾಗೆ ಅನಾವಶ್ಯಕ ಖರ್ಚು ಬಾಬ್ತನ್ನು ಹೆಚ್ಚು ಮಾಡಿಕೊಂಡು ಈ ಸರ್ಕಾರ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದೆ. ಈ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆಯೆಂದು ಹೇಳಿದರೆ ತಪ್ಪಾಗಲಾರದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇವತ್ತು ಬರಗಾಲ ಅವಧಿಯಲ್ಲಿ ಕೆಲಸಗಳನ್ನು ತೆಗೆದುಕೊಳ್ಳತಕ್ಕದ್ದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಈಗಾಗಲೇ ಜಿಲ್ಲಾಪರಿಷತ್‌ನವರು ಪ್ರತಿಯೊಂದು ತಾಲ್ಲೂಕುಗಳಲ್ಲಿ ಪ್ರತಿಯೊಂದು ಹಳ್ಳಿಗಳಿಗೆ ಎರಡು ಕೆಲಸಗಳನ್ನು ಆರಿಸಿದರು. ಅವು ಎಂತಹ ಕೆಲಸ ? ರಸ್ತೆಗಳನ್ನು ಕಡಿಯತಕ್ಕದ್ದು, ಕೆರೆಗಳ ಹೂಳು ತೆಗೆಯತಕ್ಕದು ಅಂದರೆ ಆ ಕಡೆ ಇರತಕ್ಕ ಮಣ್ಣನ್ನು ಈ ಕಡೆ ಹಾಕಿ ರೊಕ್ಕ ಖರ್ಚು ಮಾಡತಕ್ಕದ್ದು. ಇಂತಹ ಕೆಲಸಗಳಿಗೆ ಹೆಚ್ಚು ಮಹತ್ವವನ್ನು ಪದೇ ಪದೇ ಕೊಡುತ್ತಾ ಬಂದಿದೆ ಈ ಸರ್ಕಾರ. ಬರಗಾಲ ಬಂದಾಗ ನಾವು ಎಂತಹ ಕೆಲಸಗಳನ್ನು ಮಾಡಬೇಕು, ಯಾವರೀತಿ ಬರಗಾಲವನ್ನು ಎದುರಿಸಬೇಕೆನ್ನುವ ಬಗ್ಗೆ ನಾನು ಕಳೆದ ಸಾರಿ ಮಾತನಾಡುವಾಗ ಹೇಳಿದ್ದೇನೆ. ಬರಗಾಲ ಪ್ರತಿ ವರ್ಷ ಬರುತ್ತಿದೆ. ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಲಿಕ್ಕೆ ಒಂದು ಮಾಸ್ಟರ್‌ಪ್ಲಾನ್ ತಯಾರು ಮಾಡಿ. ಆ ಬಗ್ಗೆ ಒಂದು ಯೋಜನೆಯನ್ನು ಮಾಡಿಯೆಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ರಾಜ್ಯದ ಅನೇಕ ಜಿಲ್ಲೆಗಳ ಅನೇಕ ಭಾಗಗಳಲ್ಲಿ ಬರಗಾಲವನ್ನು ಎದುರಿಸತಕ್ಕ ಪ್ರಸಂಗ ಬಂದಿದೆ. ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿಕ್ಕೆ ಸರ್ಕಾರ ಆವತ್ತಿನಿಂದಲೂ ಪ್ರಯತ್ನ ಮಾಡಿಲ್ಲ. ನಮ್ಮ ರಾಣೇಬೆನ್ನೂರು ತಾಲ್ಲೂಕಿನಲ್ಲಿ ಎಂತಹ ಕೆಲಸಗಳನ್ನು ಮಾಡುತ್ತಿದ್ದಾರೆಂದರೆ ರಸ್ತೆಗಳಿಗೆ ಮಣ್ಣು ಹಾಕತಕ್ಕದ್ದು ಒಡ್ಡುಗಳನ್ನು ಮಾಡತಕ್ಕದ್ದು ಇಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಇಂತಹ ಕೆಲಸಗಳನ್ನು ಮಾಡುವುದಕ್ಕೆ ಬದಲಾಗಿ ಏತ ನೀರಾವರಿ ಕೆಲಸ, ಟ್ಯಾಂಕುಗಳ ಕೆಲಸ, ಅಪ್ಪರ್‌ತುಂಗ ಯೋಜನೆಯಿದೆ ಅದರ ಕಾಲುವೆ ಕೆಲಸ ಮಾಡಿದರೆ ಜನರಿಗೆ ಕೆಲಸ ಕೊಟ್ಟಹಾಗೆ ಆಗುತ್ತದೆ. ಕೆಲಸವೂ ಆದಹಾಗೆ ಆಗುತ್ತದೆ. ಇಂತಹ ಶಾಶ್ವತವಾದ ಕೆಲಸಗಳನ್ನು ಮಾಡುವ ಬಗ್ಗೆ ಯೋಜನೆಗಳನ್ನು ತಯಾರು ಮಾಡಿದರೆ ನೀರಾವರಿ ಕೆಲಸಗಳನ್ನು ಮಾಡುವಂತಹ ವ್ಯವಸ್ಥೆಯಾಗುತ್ತದೆ. ಈ ರೀತಿಯ ಶಾಶ್ವತಪರಿಹಾರವನ್ನು ಒದಗಿಸತಕ್ಕ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಬೇಕೇ ಹೊರತು ತಾವು ತಾತ್ಪೂರ್ತಿಕವಾಗಿ ಜನರ ಕಣ್ಣು ಒರೆಸುವುದಕ್ಕೆ ಕೆಲಸಗಳನ್ನು ಮಾಡಬೇಡಿ. ಕೆಲಸ ಮಾಡದೇ ಇದ್ದರೂ ಹುಸಿ ಜನರ ಹಾಜರಿಯನ್ನು ತೆಗೆದುಕೊಳ್ಳತಕ್ಕ ಅಧಿಕಾರಿಗಳು ಸಾಕಷ್ಟು ಇದ್ದಾರೆ. ಇಂತಹ ಅಧಿಕಾರಿಗಳ ಬಗ್ಗೆ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆಯೆಂದು ಹೇಳಿದರೆ ತಪ್ಪಾಗಲಾರದು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ ನಮ್ಮ ತಾಲ್ಲೂಕು ಮತ್ತು ಸುತ್ತಮುತ್ತ ಇರತಕ್ಕ ತಾಲ್ಲೂಕು ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಮಳೆ ಬಂದಾಗ ರೈತರು

ಬಹಳ ಕಷ್ಟಪಟ್ಟು ಸಹಕಾರ ಸಂಘಗಳ ಮುಖಾಂತರ, ಹಣವಂತರ ಹತ್ತಿರ ಹಣವನ್ನು ಸಾಲ ತೆಗೆದು ಕೊಂಡು ಬೀಜಗಳನ್ನು ಬಿತ್ತಿದರು. ಬೀಜ ಮೊಳೆತು ಪೀಕು ಬಾರದೆ ನಷ್ಟವಾಗುವ ಪರಿಸ್ಥಿತಿ ಬಂದಿದೆ. ಸಣ್ಣ ರೈತರಿಗೇ ಈ ಕಠಿಣವಾದ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಆಗದ ಸ್ಥಿತಿ ಒದಗಿಸಿದೆ. ಕೂಲಿಕಾರರ ಪರಿಸ್ಥಿತಿ ಬೇರೆಯೇ ಇದೆ. ಎಲ್ಲಿ ಕೆಲಸ ಸಿಗುತ್ತದೆ ಅಲ್ಲಿಗೆ ಅವರು ಹೋಗಿ ಕೂಲಿ ಮಾಡುತ್ತಾರೆ. ಕೂಲಿಕಾರರಿಗೆ ಎಲ್ಲಿಂದಲಾದರೂ ಆಹಾರಧಾನ್ಯಗಳನ್ನು ಒದಗಿಸಲಾಗುತ್ತದೆ. ಆದರೆ ಸಣ್ಣ ಸಣ್ಣ ರೈತರ ಪರಿಸ್ಥಿತಿ ಬಹಳ ಕಷ್ಟಕರವಾಗಿದೆ. ನಾಲ್ಕೈದು ಎತ್ತುಗಳನ್ನು ಇಟ್ಟುಕೊಂಡಿರುವವರು ಕೂಲಿಗೆ ಹೋಗುವ ಪರಿಸ್ಥಿತಿಯಲ್ಲಿಲ್ಲ. ಬಿತ್ತಿದ ಬೀಜಗಳು ಕೈಗೆ ಸಿಕ್ಕಿಲ್ಲ. ಬೆಳೆಗಳು ನಷ್ಟವಾಗಿವೆ. ಜೊತೆಗೆ ಸಾಲ ವಸೂಲಿ ಬೇರೆ ಆದುದರಿಂದ ಸಹಕಾರ ಸಂಘಗಳ ಮುಖಾಂತರ ಮತ್ತು ಡಿಪಾರ್ಟ್‌ಮೆಂಟ್‌ಗಳ ಮುಖಾಂತರ ಇವರಿಗೆ ಒದಗಿಸಿರತಕ್ಕ ಸಾಲಗಳನ್ನು ವಸೂಲಿ ಮಾಡಬಾರದೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಸಾಲ ವಸೂಲಿ ಮಾಡಿದರೆ ಸಣ್ಣ ಸಣ್ಣ ರೈತರಿಗೆ ಬಹಳ ಹಿಂಸೆಯಾಗುತ್ತದೆ. ರೈತನ ಪರಿಸ್ಥಿತಿ ಬಹಳ ಕಠಿಣವಾಗಿದೆ. ಕೂಲಿಕಾರರಿಗೆ ಕೆಲಸವನ್ನು ಸರ್ಕಾರ ಕೊಡಿಸಬಹುದು. ಅವರಿಗೆ ಆಹಾರಧಾನ್ಯಗಳನ್ನು ಎಲ್ಲಿಂದಲಾದರೂ ತಂದುಕೊಡಬಹುದು, ಆದರೆ, ರೈತರಿಗೆ ಸರ್ಕಾರ ಯಾವ ಸಹಾಯವನ್ನು ಮಾಡುತ್ತಾ ಇಲ್ಲ. ರೈತರ ಸಾಲವನ್ನು ತಾತ್ಪೂರ್ತಿಕವಾಗಿ ಮನ್ನಾ ಮಾಡಿ, ರೈತರ ಪರಿಸ್ಥಿತಿ ಬಹಳ ಗಂಭೀರತೆಯಿಂದ ಕೂಡಿದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವ ಜಿಲ್ಲೆಗಳಲ್ಲಿ ಬರಗಾಲ ಕಾಮಗಾರಿಗಳು ಪ್ರಾರಂಭವಾಗಿರುತ್ತವೆ ಎಂದು ಸರಿಯಾಗಿ ಗೊತ್ತಾಗುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಯಾವ ತಾಲ್ಲೂಕುಗಳಲ್ಲಿ ಕೆಲಸ ಪ್ರಾರಂಭವಾಗಿದೆ ಎಂಬುದು ಗೊತ್ತಿಲ್ಲ. ಬರಗಾಲದ ಉಸ್ತುವಾರಿಯನ್ನು ನೋಡಿಕೊಳ್ಳುವವರು ನಮ್ಮ ಜಿಲ್ಲೆಯ ಮಂತ್ರಿಗಳು. ಪ್ಲಾನ್ ಸ್ಕೀಮ್‌ಗಳಲ್ಲಿ ಕೆಲಸ ಪ್ರಾರಂಭ ಮಾಡಿರಿ ಎಂದು ಕಾಗದಗಳ ಮೂಲಕ ಆದೇಶ ಬಂದಿದೆಯೇ ಹೊರತು, ಬೇರೇನು ಕೆಲಸಕಾರ್ಯಗಳು ಆಗಿಲ್ಲ. ಆಹಾರಧಾನ್ಯಗಳನ್ನು ಕೊಡುತ್ತೇವೆಂದು ಕಾಗದಗಳಲ್ಲಿ ಆದೇಶ ಬಂದಿದೆ. ನಮ್ಮ ತಾಲ್ಲೂಕಿನಲ್ಲಿ ಎಲ್ಲೂ ಬರಗಾಲ ಕೆಲಸ ಪ್ರಾರಂಭವಾಗಿಲ್ಲ, ಆದುದರಿಂದ ಕೇವಲ ಘೋಷಣೆ ಮಾಡದೆ ನಿಜವಾದ ಪರಿಸ್ಥಿತಿಯನ್ನು ಅರಿತುಕೊಂಡು ಕೆಲಸವನ್ನು ಪ್ರಾರಂಭ ಮಾಡತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮಾನ್ಯ ಅಧ್ಯಕ್ಷರೇ ಈ ಕುಡಿಯುವ ನೀರಿನ ಬವಣೆ ಬಗ್ಗೆ ನಾನು ಹೊಸದಾಗಿ ಏನೂ ಹೇಳಬೇಕಾಗಿಲ್ಲ. ಉದಾಹರಣೆಗೆ ಹೇಳುವುದಾದರೆ ಕುಡಿಯುವ ನೀರಿನ ಬಗ್ಗೆ ನಮ್ಮ ತಾಲೂಕಿನಲ್ಲಿ ಶಾಶ್ವತ ಪರಿಹಾರ ಮಾಡಿ ಎಂದು ನಾನು ಹೇಳುತ್ತಲೇ ಬಂದಿದ್ದೇನೆ. ಸತತವಾಗಿ ನಾಲ್ಕು ವರ್ಷಗಳಿಂದ ನಮ್ಮ ತಾಲ್ಲೂಕಿನಲ್ಲಿ ಎರಡು ಗ್ರಾಮಗಳಿಗೆ ನೀರನ್ನು ಸಾಗಿಸುತ್ತಿದ್ದಾರೆ. ಒಂದು ಜೋಯಿಸರಹಳ್ಳಿ, ಅಲ್ಲಿ ಸತತವಾಗಿ ನಾಲ್ಕು ವರ್ಷಗಳಿಂದ ಟ್ಯಾಂಕರ್ ಮೂಲಕ ನೀರು ಸಪ್ಲೈ ಆಗುತ್ತಿದೆ. ಹೀಗೆ ನೀರು ಸಾಗಣೆ ಮಾಡುವುದಕ್ಕೆ ಹತ್ತು ಲಕ್ಷ ರೂಪಾಯಿ ಖರ್ಚಾಗಿರಬಹುದು. ಇದಕ್ಕೆ ಶಾಶ್ವತ ಪರಿಹಾರ ಹುಡುಕಿರಿ ಎಂದು ಸತತವಾಗಿ ಹೇಳುತ್ತಲೇ ಬಂದರೂ ಸಹಿತ ಸರ್ಕಾರ ಏನೂ ಮಾಡುತ್ತಿಲ್ಲ, ರಿಗ್ ಏನೋ ಹಾಕುತ್ತಾರೆ. ೨೫೦–೩೦೦ ಅಡಿಗಳವರೆಗೆ ರಿಗ್ ಹಾಕಿದರೂ ನೀರು ಮಾತ್ರ ಇಲ್ಲ. ತುಂಗಭದ್ರಾ, ನದಿಯಿಂದ ನೀರು ತರುವುದಕ್ಕೆ ಪ್ರಯತ್ನಿಸಿ ಶಾಶ್ವತ ಪರಿಹಾರ ಹುಡುಕಿರಿ ಎಂದು ಹೇಳಿದರೂ ಸಹಿತ ಸರ್ಕಾರ ಕಿವಿಮುಚ್ಚಿಕೊಂಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಬೋರ್‌ವೆಲ್‌ಗಳನ್ನು ತೆಗೆಯುತ್ತಿದ್ದಾರೆ. ಆದರೆ ಮೊದಲೇ ಇವುಗಳ ಸ್ಥಿತಿ ಹೀನಾಮಾನವಾಗಿದೆ. ಒಂದು ತಿಂಗಳಿಗೆ ಎಷ್ಟು ಬೋರ್ ವೆಲ್ ಕೆಟ್ಟರೂ ಸಹಿತ, ಪೈಲಟ್ ಸ್ಕೀಮ್‌ನಲ್ಲಿ ಅಂದರೆ, ತಿಂಗಳಿಗೊಮ್ಮೆ ಅಡ್ಡಾಡುವುದರ ಮೂಲಕ ಒಂದು ಗ್ರಾಮಕ್ಕೆ ಹೋಗಿ ಕೆಟ್ಟಿರುವ ಬೋರ್‌ವೆಲ್ ರಿಪೇರಿ ಮಾಡಿದರೆ ಮತ್ತೆ ಒಂದು ತಿಂಗಳು ಬಿಟ್ಟು ಅಲ್ಲಿಗೆ ಬರಬೇಕು. ಅವರು ರಿಪೇರಿ ಮಾಡಿಹೋದ ಮಾರನೇ ದಿವಸವೇ ಬೋರ್‌ವೆಲ್ ಕೆಟ್ಟು ಹೋಗುತ್ತದೆ. ಒಂದು ತಿಂಗಳಾದ ಮೇಲೆಯೇ ಪುನಃ ಇವರು ರಿಪೇರಿಗೆ ಅಲ್ಲಿಗೆ ಬರಬೇಕು. ಇಲ್ಲದಿದ್ದರೆ ಇಲ್ಲ. ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಸಾಮಾನುಗಳು ಇಲ್ಲ, ದುಡ್ಡೂ ಇಲ್ಲ. ಅಲ್ಲಿ ರಿಪೇರಿ ಮಾಡತಕ್ಕಂಥ ವ್ಯವಸ್ಥೆ ಇಲ್ಲ. ಹೀಗಾಗಿ ಬಹಳ ತೊಂದರೆಯನ್ನು ಎದುರಿಸಬೇಕಾಗಿದೆ. ಕುಡಿಯುವ ನೀರಿನ ವ್ಯವಸ್ಥೆಯು ಒಂದು ಆತಂಕದಾಯಕ ಪರಿಸ್ಥಿತಿ ಇದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಬೋರ್‌ವೆಲ್ ತೋಡಿದರೂ ಕೆಲವು ಕಡೆಗಳಲ್ಲಿ ಅದು ಯಶಸ್ವಿಯಾಗಿಲ್ಲ.

೨೦೦–೩೦೦ ಫೂಟು ಹೊಡೆದರೆ ಪ್ರಯೋಜನ ಇಲ್ಲ. ೮೦೦–೯೦೦ ಫೂಟು ಹೊಡೆಯಬಲ್ಲ ರಿಗ್‌ಗಳು ಇವೆ. ಆದ್ದರಿಂದ ಇಂತಹ ವ್ಯವಸ್ಥೆ ಆಗಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಆಹಾರ ವಿತರಣೆ ಬಗ್ಗೆ ನಾನು ಒಂದು ಮಾತನ್ನು ಹೇಳದೇ ಹೋದರೆ ತಪ್ಪಾಗುತ್ತದೆ. ಇವತ್ತು ನಮ್ಮ ವಿರೋಧ ಪಕ್ಷದ ನಾಯಕಿಯವರಾದ ಶ್ರೀಮತಿ ನಾಗರತ್ನಮ್ಮನವರು ಹೇಳಿದ ಹಾಗೆ ಈ ಜಿಲ್ಲಾ ಪರಿಷತ್ತುಗಳು, ಮಂಡಲ್ ಪಂಚಾಯತ್‌ಗಳು ಅಸ್ತಿತ್ವಕ್ಕೆ ಬಂದಮೇಲೆ ಆಹಾರಧಾನ್ಯ ಗಳನ್ನು ಹಂಚತಕ್ಕ ವ್ಯವಸ್ಥೆ ಪ್ರೆಸ್ಟೀಜ್ ವಿಷಯವಾಗಿ ಪರಿವರ್ತನೆಗೊಂಡಿದೆ. ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಪಕ್ಷದ ಕಾರ್ಯಕರ್ತರ ಒಂದು ಪೀಡನೆಗೆ ಒಳಪಟ್ಟು, ಸಹಕಾರ ಸಂಘಗಳು ಈ ಮುಂಚೆ ಸರಿಯಾಗಿ ಆಹಾರಧಾನ್ಯಗಳನ್ನು ಹಂಚುತ್ತಿದ್ದಾಗ್ಯೂ ಸಹಿತ, ಈಗ ವೈಯಕ್ತಿಕವಾಗಿ ಕೊಡತಕ್ಕದ್ದು, ಶಿಫಾರಸ್ಸು ತಂದವರಿಗೆ ಕೊಡತಕ್ಕದ್ದು ನಡೆದು, ಆಹಾರಧಾನ್ಯಗಳ ವಿತರಣೆ ಬಹಳ ವಿಪರೀತಕ್ಕೆ ಹೋಗಿದೆ. ಸರಿಯಾಗಿ ಹಂಚಿಕೆಯಾಗುತ್ತಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳದೇ ಹೋದರೆ ತಪ್ಪಾಗುತ್ತದೆ.

ಚೇರ್ಮನ್.— ತಾವು ಬೇಗ ಮುಗಿಸಿರಿ.

ಶ್ರೀ ಕೆ. ಬಿ. ಕೋಳಿವಾಡ್.— ಇಲ್ಲಿಯವರೆಗೆ ನನಗೆ ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).— ಮಾನ್ಯ ಅಧ್ಯಕ್ಷರೇ, ಬರ ಕಳೆದ ಐದಾರು ವರ್ಷಗಳಿಂದ ಕರ್ನಾಟಕದಲ್ಲಿ ಮನೆ ಮಾಡಿಕೊಂಡಿದೆ. ಇದು ನಮ್ಮ ದುರ್ದೈವ ಹಾಗೂ ದುರಂತ ಎಂದು ಹೇಳಬಹುದು. ಮಳೆ ಬರ, ಆಹಾರ ಬರ, ನೀರಿನ ಬರ. ಇದರ ಜೊತೆಗೆ ಪರಸ್ಪರ ಸಹಕಾರದ ಬರ ಕೂಡ ಇದೆ. ಇದು ನಮ್ಮ ದುರ್ದೈವ. ಈ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕಿಯವರಾದ ಶ್ರೀಮತಿ ನಾಗರತ್ನಮ್ಮನವರು ಹೇಳಿದಂಥ ಒಂದು ಮಾತನ್ನು ನಾನು ಪೂರ್ಣವಾಗಿ ಸಮರ್ಥನೆ ಮಾಡುತ್ತೇನೆ. ಈ ಬರವನ್ನು ರಾಜಕೀಯವಾಗಿ ಎದುರಿಸುವುದನ್ನು ಬಿಟ್ಟು, ರಚನಾತ್ಮಕವಾಗಿ ರಾಜಕೀಯವಾಗಿ ಪರಸ್ಪರ ಸಮನ್ವಯದಿಂದ ಯಾವತ್ತು ಕೆಲಸ ಮಾಡುತ್ತೇವೆಯೋ ಆವತ್ತು ನಮ್ಮಲ್ಲಿ ಯಾವ ಸಮಸ್ಯೆಯೂ ಬರುವುದಿಲ್ಲ. ಇವತ್ತು ನಾವು ಏನೇ ಕೆಲಸ ಮಾಡಲಿ, ಈ ಬರಗಾಲದ ಸಂದರ್ಭದಲ್ಲಿ, ಎಲ್ಲಾ ಪಕ್ಷಗಳ ಸಹಕಾರವನ್ನು ತೆಗೆದು ಕೊಳ್ಳಬೇಕು. ಶ್ರೀಮಾನ್ ಬೊಮ್ಮಾಯಿಯವರು ಬರಗಾಲದ ಬಗ್ಗೆ ತಮ್ಮ ವರದಿಯನ್ನು ಸಲ್ಲಿಸಿದಾಗ, ನಮ್ಮ ಕಾಂಗ್ರೆಸ್ ಸ್ನೇಹಿತರು ತಾವು ಏನು ಬರಗಾಲದ ವರದಿಯನ್ನು ಇಡು ತ್ತಿದ್ದೀರಿ ಅದರ ಬಗ್ಗೆ ನಮ್ಮನ್ನು ಕೇಳಲಿಲ್ಲವೆಂದು ಹೇಳಿದರು. ಮತ್ತೆ ಈ ಸಂದರ್ಭ ಬರಬಾರದು. ಈ ಸದನದಲ್ಲಿ ಸಾಕಷ್ಟು ಅನುಭವಿ ರಾಜಕಾರಣಿಗಳು ಆ ಕಡೆಯಲ್ಲೂ, ಈ ಕಡೆಯಲ್ಲೂ ಇದ್ದಾರೆ. ಆರ್ಥಿಕವಾಗಿ ತಿಳಿದುಕೊಂಡಿರುವ ಅರ್ಥತಜ್ಞರೂ ಇದ್ದಾರೆ. ಈ ಬರಗಾಲ ಬಂದಾಗಲೇ ಹೀಗೆ ಹಣ ಹುಡುಕಿಕೊಳ್ಳುವ ಬದಲು, ಮತ್ತೊಬ್ಬರ ಕಾಲನ್ನು ಹಿಡಿಯುವ ಬದಲು ಶಾಶ್ವತವಾದ ನಿಧಿಯನ್ನು, ಅದು ಐನೂರು ಕೋಟಿ ಇರಬಹುದು ಅಥವಾ ಒಂದು ಸಾವಿರ ಕೋಟಿ ಇರಬಹುದು, ಈ ಹಣವನ್ನು ಸಂಗ್ರಹಿಸತಕ್ಕಂಥ ಒಂದು ನೀತಿ ನಿರೂಪಣೆಯನ್ನು ಮಾಡಿ ಸರ್ವಪಕ್ಷಗಳನ್ನು ಒಳಗೊಂಡ ಒಂದು ಸಮಿತಿಯನ್ನು ಈ ಸದನದಲ್ಲಿ ಮಾಡಿರಿ, ಬರಗಾಲ ಬಂದಂಥ ಸಂದರ್ಭದಲ್ಲಿ ನಾವೆಲ್ಲಾ ಕುಳಿತುಕೊಂಡು, ಈ ಹಣವನ್ನು ಯಾವರೀತಿ ವಿತರಣೆ ಮಾಡಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಬೇಕು. ಇದರಿಂದ ನಾವು ಇವತ್ತು ಬರಗಾಲ ವನ್ನು ರಚನಾತ್ಮಕವಾಗಿ ರಾಜಕೀಯವನ್ನು ಮರೆತು ಎದುರಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಬರಗಾಲದ ಕೆಲಸಗಳ ಬಗ್ಗೆ ನಮ್ಮ ವಿರೋಧಪಕ್ಷದ ಮಿತ್ರರು, ಇದರಲ್ಲಿ ಸಾಕಷ್ಟು ದುರುಪಯೋಗ ವಾಗುತ್ತಿದೆ ಎಂದು ಹೇಳಿದರು. ನನಗನಿಸುತ್ತದೆ, ಈ ಬರಗಾಲದಲ್ಲಿ ಬಡವರನ್ನು ಶೋಷಣೆ ಮಾಡುವವರು ಯಾರೇ ಇರಬಹುದು, ಅವರು ಸಮಾಜದ ಶತ್ರುಗಳು. ಇಂತಹ ಒಂದು ಶೋಷಣೆಯನ್ನು ನಿವಾರಣೆ ಮಾಡದ ಹೊರತು ನಾವು ಈ ಬರಗಾಲವನ್ನು ಎದುರಿಸುವುದಕ್ಕೆ ಸಾಧ್ಯ ವಾಗುವುದಿಲ್ಲವೆಂದು ಹೇಳುತ್ತೇನೆ. ಬಡವ ಬಡವನೇ. ಅವನು ಜನತಾ ಬಡವನೇ, ಕಾಂಗ್ರೆಸ್ ಬಡವನೇ, ಬಿ. ಜೆ. ಪಿ. ಬಡವನೇ, ಅಥವಾ ಕಮ್ಯುನಿಸ್ಟ್ ಬಡವನೇ, ಯಾರೇ ಆಗಿರಲಿ ಬಡವ ಬಡವನೇ, ಆದುದರಿಂದ ಈ ಬಗ್ಗೆ ರಾಜಕೀಯವನ್ನು ಮರೆತು ಸಮಾಜದಲ್ಲಿರತಕ್ಕ ಸಮಸ್ಯೆ

ಯನ್ನು ನೀಗಿಸುವುದಕ್ಕೆ ಒಂದು ಪ್ರಯೋಗವನ್ನು' ಒಂದು ಯೋಜನೆಯನ್ನು ಅಥವಾ ಸರಿಯಾದ ನೀತಿ ನಿಯಮಗಳನ್ನು ರೂಪಿಸತಕ್ಕಂಥ ವ್ಯವಸ್ಥೆ ಮಾಡುವುದಕ್ಕೆ ನಾವೆಲ್ಲಾ ಹೋಗಬೇಕು. ಎಲ್ಲಿಯ ತನಕ ನಾವು ಈ ಪ್ರಯತ್ನವನ್ನು ಮಾಡುವುದಿಲ್ಲ, ಅಲ್ಲಿಯವರೆಗೆ ನಾವು ರಾಜಕೀಯವಾಗಿ, ಸಾಮಾಜಿಕವಾಗಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಇದು ದೊಡ್ಡ ಸಮಸ್ಯೆಯಾಗಿ ಬೆಳೆಯುವುದಕ್ಕೆ ಬಿಡಕೂಡದು. ಅದಕ್ಕೋಸ್ಕರ ನಾನು ಒಂದು ಸಲಹೆ ಮಾಡುತ್ತಿದ್ದೇನೆ. ಇವತ್ತು ನಮ್ಮ ಶಾಸಕರು ಇದ್ದಾರೆ, ಇವತ್ತು ನಾಳೆ ಬರುವುದಿಲ್ಲ ಯಾವ ಯಾವ ಕ್ಷೇತ್ರದಲ್ಲಿ ಯಾವ ಶಾಸಕರು ಇದ್ದಾರೆ, ಅವರು ಕಾಂಗ್ರೆಸ್‌ನವರೇ ಇರಲಿ ಜನತಾ ಪಕ್ಷದವರೇ ಇರಲಿ, ಆಯಾ ಕ್ಷೇತ್ರದಲ್ಲಿ ಶಾಸಕರ ಮೂಲಕವಾಗಿ, ಸಂಬಂಧಪಟ್ಟ ತಹಶೀಲ್ದಾರ್ ಅವರ ಮೂಲಕವಾಗಿ ಆಯಾ ತಾಲ್ಲೂಕಿನ ಪರಿಶೀಲನೆ ಮಾಡಲಿ, ಆಯಾ ತಾಲ್ಲೂಕಿನ ತಪಾಸಣೆ ಮಾಡಲಿ ಆಯಾ ತಾಲ್ಲೂಕಿನಲ್ಲಿ ಏನೇನು ಆಗಬೇಕು. ಎನ್ನುವುದನ್ನು ಯಾವ ಪಕ್ಷದವರೇ ಆಗಿರಲಿ ತಪಾಸಣೆ ಮಾಡಬೇಕು. ಈ ರೀತಿ ತಪಾಸಣೆ ಮಾಡಿದ ವರದಿಯನ್ನು ಜಿಲ್ಲಾ ಸಮಿತಿಯ ಮುಂದೆ ಕಳುಹಿಸಿಕೊಡಬೇಕು, ಅನಂತರ ಜಿಲ್ಲಾ ಸಮಿತಿಯವರು ಕುಳಿತುಕೊಂಡು, ಎಲ್ಲಾ ಶಾಸಕರನ್ನೂ ಕರೆದು ಪ್ರತಿಯೊಂದು ತಾಲ್ಲೂಕಿನ ರಿಪೋರ್ಟ್‌ನ್ನೂ ಪರಿಶೀಲನೆ ಮಾಡಿ. ಯಾವ ಯಾವ ತಾಲ್ಲೂಕಿಗೆ ಏನೇನು ಆಗಬೇಕಾಗಿದೆ, ಯಾವ ಯಾವ ಕೆಲಸಗಳು ಆಗಬೇಕು, ಎಂಬ ಬಗ್ಗೆ ವಿವರವಾದ ಮತ್ತು ಅಂತಿಮವಾದ ರಿಪೋರ್ಟ್ ತಯಾರು ಮಾಡಿ ಕೇಂದ್ರದಲ್ಲಿ ಇರತಕ್ಕ ಸರ್ವಪಕ್ಷಗಳ ಸಮಿತಿಯ ಮುಂದೆ ಕಳುಹಿಸಿಕೊಡಬೇಕು. ಅಲ್ಲಿ, ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಬಂದಿರತಕ್ಕ ರಿಪೋರ್ಟ್‌ಗಳನ್ನೂ ಇಡಬೇಕು. ಕೇಂದ್ರ ಸಮಿತಿ ಎಲ್ಲಾ ರಿಪೋರ್ಟ್‌ಗಳನ್ನೂ ಅವರೇ ಖುದ್ದಾಗಿ ಪರಿಶೀಲನೆ ಮಾಡಿ, ಯಾವ ಯಾವ ರಾಜ್ಯಕ್ಕೆ ಎಷ್ಟೆಷ್ಟು ಹಣಬೇಕಾಗಿದೆ ಯಾವ ಭಾಗಕ್ಕೆ ಬರ ಜಾಸ್ತಿ ಇದೆ ಯಾವರೀತಿ ವಿನಿಯೋಗ ಮಾಡಬೇಕು ಎಂಬ ಬಗ್ಗೆ ವಿವರವಾಗಿ ಚರ್ಚಿಸಿ, ನಂತರ, ಹಣ ಬಿಡುಗಡೆ ಮಾಡಿದರೆ. ನಿಜವಾಗಿಯೂ ಬರ ಪರಿಹಾರವಾಗುತ್ತದೆ. ಆದುದರಿಂದ. ಬರ ಪರಿಹಾರದ ಕೆಲಸವನ್ನು ವಿಮರ್ಶೆ ಮಾಡಲು ಆಯಾ ಕ್ಷೇತ್ರದ ಶಾಸಕರು ಮತ್ತು ತಹಶೀಲ್ದಾರರನ್ನು ಒಳಗೊಂಡಂತೆ ತಾಲ್ಲೂಕು ಸಮಿತಿ ಮಾಡಬೇಕು. ಈ ಸಮಿತಿಯವರು ಮಾಡಿದ ಕೆಲಸವನ್ನು ಸೂಪರ್‌ವಿಷನ್ ಮಾಡುವ ವ್ಯವಸ್ಥೆ ಮಾಡಬೇಕು. ಇದರಿಂದ, ಆಯಾ ಕ್ಷೇತ್ರಗಳಲ್ಲಿರುವ ಶಾಸಕರು, ಮತದಾರರು ಯಾರಿದ್ದಾರೆ. ಅವರನ್ನು ಮತ್ತೆ ಭೇಟಿ ಮಾಡಿದಂತಾಗುತ್ತದೆ. ಅವರ ಸಮಸ್ಯೆಯನ್ನು ಅರ್ಥಮಾಡಿಕೊಂಡಹಾಗೆ ಆಗುತ್ತದೆ. ಸರ್ಕಾರ ಬಿಡುಗಡೆ ಮಾಡತಕ್ಕ ಹಣ ದುರುಪಯೋಗವಾಗುವುದಕ್ಕೆ ಅವಕಾಶವಾಗುವುದಿಲ್ಲ, ಪ್ರಾಮಾಣಿಕವಾದ ಪ್ರಯತ್ನ ನಡೆಯುತ್ತಿದೆ. ಆದುದರಿಂದ ಈ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆಯೇ ಕೇಂದ್ರ ಸಮಿತಿಯವರೂ ಕೂಡ ಈ ತಾಲ್ಲೂಕು ಸಮಿತಿ ಮತ್ತು ಜಿಲ್ಲಾ ಸಮಿತಿಗಳ ವರದಿಗಳನ್ನು ತಪಾಸಣೆ ಮಾಡಬೇಕು. ಇಡೀ ರಾಜ್ಯದಲ್ಲಿ ಯಾವರೀತಿ ಕೆಲಸ ನಡೆಯುತ್ತಿದೆ ಎಂಬುದನ್ನು ಕೇಂದ್ರ ಸಮಿತಿ ತಪಾಸಣೆ ಮಾಡಬೇಕು. ಈ ರೀತಿ ಪಕ್ಷ ಭೇದ ಭಾವ ಬಿಟ್ಟು ರಚನಾತ್ಮಕ ರೀತಿಯಲ್ಲಿ ನಾವೆಲ್ಲಾ ಒಂದೇ ಎಂದು ತಿಳಿದುಕೊಂಡು ಬಡವರಿಗೆ ರಾಜಕೀಯ ಬಣ್ಣ ಕಟ್ಟದೆ, ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳುತ್ತೇನೆ. ಇಲ್ಲದೇ ಹೋದರೆ ಬರ ಉಳಿದುಕೊಂಡೇ ಬರುತ್ತದೆ. ಸಹಕಾರದ ಬರ ಸಮನ್ವಯದ ಬರ ಇವು ಈ ವಿಚಾರದಲ್ಲಿ ಬರಬಾರದು. ಈ ರೀತಿಯಾಗಿ ಆದರೆ ರೈತ ಸಮಸ್ಯೆಯ ಸುಳಿಗೆಸಿಲುಕುತ್ತಾನೆ, ಅವನ ಕಷ್ಟ ಪರಿಹಾರ ಆಗುವುದಿಲ್ಲ. ಕೊನೆಯಲ್ಲಿ ಒಂದು ಮಾತನ್ನು ಹೇಳಿ ನನ್ನ ಎರಡು ಮಾತನ್ನು ಮುಕ್ತಾಯ ಮಾಡುತ್ತೇನೆ. ಕೊಡಗಿನ ಕನ್ನಡ ತಾಯಿ ನಮಗೆಲ್ಲಾ ಅನ್ನದಾತೆ. ಅವಳು ಇಂದು ಮುನಿಸಿಕೊಂಡಿದ್ದಾಳೆ. ಅವಳ ಬಗ್ಗೆ ಒಂದು ಕಿರು ಕವನವನ್ನು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಕನ್ನಡದ ಜನಕೆಲ್ಲ ಅನ್ನವನು ನೀಡುತಿಹ
ಅನ್ನದಾತೆಯು ನೀನು ಕಾವೇರಿ ತಾಯಿ
ನೇಗಿಲನು ಹಿಡಿದವಗೆ ಕಾಯುವಾಕೆಯು ನೀನು
ನೀನು ಮುನಿದೊಡೆ ಅವಗೆ ಆರು ಇಲ್ಲವು ಗತಿಯು
ಅಡ್ಡ ಅಣೆಕಟ್ಟುಗಳು ಶೃಂಖಲೆಯು ನಿನಗಲ್ಲ
ನಿನ್ನ ಪ್ರತಿಭೆಯ ತೋರುವ ಆಭರಣಗಳು ಅವು ಎಲ್ಲ

ಆಷಾಡ ಜೇಷ್ಠದೊಳು ತುಂಬಿ ಹರಿಯುವೆ ತಾಯೆ
ಕೆಂದನೆಯ ಹೊದಿಕೆಯೊಳು ರಾಜಿಸುವೆ ನೀನು
ನೀ ತುಂಬಿ ಹರಿಯುವುದು ಆಷಾಡ ಜೇಷ್ಠ
ನೀ ತುಂಬ ಹರಿಯುತಿರೆ ನಾಡೆಲ್ಲ ಶ್ರೇಷ್ಠ
ಹರಿಯಮ್ಮ ಹರಿಯಮ್ಮ ಮತ್ತೆ ತುಂಬಿ ಹರಿಯಮ್ಮ

ಈ ಕವನವನ್ನು ಮುಗಿಸಿ ಎರಡು ಮಾತನ್ನು ಆಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು (ಕೂಡ್ಲಿಗಿ) —ಮಾನ್ಯ ಸಭಾಧ್ಯಕ್ಷರೇ, ಬರಗಾಲ ಪರಿಸ್ಥಿತಿಯನ್ನು ಬಳ್ಳಾರಿ ಜಿಲ್ಲೆಯಲ್ಲಿ ಪ್ರತಿ ವರ್ಷ ನಾವು ಕಾಣುತ್ತಿದ್ದೇವೆ. ಅದರಲ್ಲಿ ಅತೀ ಹೆಚ್ಚಿನ ಬರಗಾಲವನ್ನು ನಾವು ಕೂಡಲಗಿ ಹಾಗೂ ಹರಪನಹಳ್ಳಿ ತಾಲ್ಲೂಕುಗಳಲ್ಲಿ ಕಾಣುತ್ತೇವೆ. ಇಲ್ಲಿ ಹೆಚ್ಚು ತೊಂದರೆ ಇದೆ. ಇದು ಕೇವಲ ನಾಲ್ಕೈದು ವರ್ಷದಿಂದ ಮಾತ್ರವಲ್ಲ ಸುಮಾರು ಬಹಳ ವರ್ಷಗಳಿಂದ ಪ್ರತಿ ವರ್ಷ ನಾವು ಇದನ್ನು ಅನುಭವಿಸುತ್ತಿದ್ದೇವೆ. ಏಂದರೆ ತಪ್ಪಾಗಲಾರದು ಬೋರ್‌ವೆಲ್ ಹಾಗೂ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳು ನಮ್ಮ ಕೂಡಲಗಿ ಹಾಗೂ ಹರಪನಹಳ್ಳಿ ತಾಲ್ಲೂಕುಗಳಿಗೆ ಆಗಬೇಕೆಂದು ನಾವು ಪ್ರತಿವರ್ಷ ಕೋರಿಕೆ ಸಲ್ಲಿಸುತ್ತಿದ್ದೇವೆ. ನೂರು ಬಾವಿ ಯೋಜನೆ ಹಾಗೂ ಗಂಗಾಕಲ್ಯಾಣ ಯೋಜನೆಗಳಲ್ಲಿ ಸುಮಾರು ಬೋರ್‌ವೆಲ್‌ಗಳನ್ನು ಹಾಕಿಕೊಂಡಿದ್ದೇವೆ. ಆದರೆ ಈ ಬೋರ್‌ವೆಲ್‌ಗಳಿಗೆ ಪವರ್ ಕನೆಕ್ಷನ್‌ಗೆ ನಾವು ಕಳೆದ ಎರಡು ವರ್ಷಗಳಿಂದ ಕಾಯುತ್ತಾ ಕುಳಿತಿದ್ದೇವೆ. ಯಾವುದೋ ಒಂದು ನೆವ ಹೇಳುತ್ತಾರೆ. ಮೆಟೀರಿಯಲ್ಸ್ ಇಲ್ಲ ಎನ್ನುತ್ತಾರೆ, ಪೋಲ್ಸ್ ಇಲ್ಲ ಎನ್ನುತ್ತಾರೆ, ಟ್ರಾನ್ಸ್‌ಫಾರ್ಮರ್ಸ್ ಇಲ್ಲ ಎಂದು ಹೇಳುತ್ತಾರೆ, ಈಗ ಕರೆಂಟೇ ಇಲ್ಲ ಎಂದು ಹೇಳುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಅವರು ಪಂಪ್‌ಸೆಟ್ಟುಗಳಿಗೆ ಬ್ಯಾಂಕುಗಳಲ್ಲಿ ಸಾಲ ಪಡೆದು ಪವರ್ ಕನೆಕ್ಷನ್ ಇಲ್ಲದೆ, ವರ್ಷಾನುಗಟ್ಟಲೆಯಿಂದ ಬಾವಿಯಲ್ಲಿ ನೀರನ್ನು ನೋಡಿಕೊಂಡು ಒಣಗಿದ ಭೂಮಿಯನ್ನು ನೋಡಿಕೊಂಡು, ಕಣ್ಣಲ್ಲಿ ನೀರನ್ನು ತಂದುಕೊಂಡು, ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಹಾಕಿಕೊಂಡು ಮಲಗಿಕೊಳ್ಳುವ ಪರಿಸ್ಥಿತಿ ಬಂದಿದೆ. 20 ಅಂಶಗಳ ಕಾರ್ಯಕ್ರಮದ ಮೀಟಿಂಗ್ ಆಗಲಿ ಬೇರೇ ಮೀಟಿಂಗ್‌ನಲ್ಲಾಗಲೀ ಇದರ ಬಗ್ಗೆ ಸಾಕಷ್ಟು ಸಲ ಹೇಳಿದರೂ ಕೂಡಾ ಅರ್ಜಿಗಳನ್ನು ಕಳುಹಿಸಿದರೂ ಕೂಡಾ ನೀರಾವರಿಗಾಗಿ ಬೋರ್‌ವೆಲ್‌ಗೆ ಪವರ್‌ಕನೆಕ್ಷನ್ ಕೊಡುತ್ತಿಲ್ಲ. ಪವರ್ ಕನೆಕ್ಷನ್‌ಬಗ್ಗೆ, ಈ ಬರಗಾಲದ ಬಗ್ಗೆ ಇದು ನಾಲ್ಕನೇ ಸಲ ನಾನು ಮಾತನಾಡುತ್ತಿರುವುದು ಎಷ್ಟು ಸಲ ರಿಪಿಟೇಷನ್ ಮಾಡಿದರೂ ಸಹ ಏನೂ ಆಗಿಲ್ಲ. ಇದು ಏಕೆ ಎಂದು ಅರ್ಥವಾಗುತ್ತಿಲ್ಲ. ರೈತರು ಬಹಳ ಕಷ್ಟ ಪಡುತ್ತಿದ್ದಾರೆ. ಇದನ್ನು ಬಿಟ್ಟರೆ ನಮ್ಮ ಕಡೆ ಬೇರೆ ಯಾವುದೇ ತರಹದ ನೀರಾವರಿ ಸೌಲಭ್ಯಗಳೂ ಇಲ್ಲ.

೩–೩೦ ಪಿ.ಎಂ.

ಮುಖ್ಯವಾಗಿ ನಮಗೆ ಅಲ್ಲಿ ಬೇರೆ ಯಾವ ತರಹದ ನೀರಾವರಿ ಸೌಲಭ್ಯಗಳೂ ಇಲ್ಲ. ಕೆನಾಲ್‌ಗಳು ಇಲ್ಲ. ಟ್ಯಾಂಕುಗಳು ಇಲ್ಲ. ಇವುಗಳು ಇಲ್ಲದಿರುವುದರಿಂದ ಬರಗಾಲ ಪರಿಸ್ಥಿತಿಯಲ್ಲಿ ಏನು ಕನ್‌ಸ್ಟ್ರಕ್ಟೀವ್ ವರ್ಕ್ಸ್ ಅಂದರೆ ಡ್ರಿಂಕಿಂಗ್ ವಾಟರ್, ಲಿಫ್ಟ್ ಇರಿಗೇಷನ್ ಇತ್ಯಾದಿಗಳನ್ನು ಮಾಡಿಸಿ ಕೊಡತಕ್ಕ ವ್ಯವಸ್ಥೆ ಮಾಡಿದರೆ, ರೈತರಿಗೆ, ಬಡವರಿಗೆ ಬಹಳ ಅನುಕೂಲವಾಗುತ್ತದೆ. ಇದರ ಬಗ್ಗೆ ಎಷ್ಟು ಹೇಳಿದರೂ ಮಾಡದೆ ಯಾವುದೋ ನೆಪ ಹೇಳಿಕೊಂಡು ಪ್ರೊಲಾಂಗ್ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಏನೆಂಬುದನ್ನು ಮುಂದೆ ತಿಳಿಸುತ್ತೇನೆ. ರೂರಲ್ ಎಲೆಕ್ಟ್ರಿಫಿಕೇಷನ್ ಮಾಡುತ್ತೇವೆ. ಹಳ್ಳಿ ಹಳ್ಳಿಗೂ ಲೈಟ್ಸ್, ಸ್ಟ್ರೀಟ್ ಲೈಟ್ಸ್ ಹಾಕಿಕೊಡುತ್ತೇವೆಂದು ಪತ್ರಿಕೆಗಳಲ್ಲಿ ಪ್ರಕಟಿಸುತ್ತಾರೆ. ಪತ್ರಿಕೆಗಳಲ್ಲಿ ಬಂದಿದೆ ಅಂದ ಕೂಡಲೇ ರೈತರು, ಬಡವರು ಸರ್ಕಾರದವರು ಕೊಟ್ಟರೂ ನೀವು ಮಾಡಿಸಿಕೊಡುತ್ತಿಲ್ಲವೆಂದು ನಮ್ಮನ್ನು ದಬಾಯಿಸುತ್ತಾರೆ. ಈಗ್ಗೆ ಎರಡು ವರ್ಷಗಳ ಹಿಂದೆ ಬರಗಾಲ ಪರಿಸ್ಥಿತಿಯಲ್ಲಿ ಮುಖ್ಯ ಮಂತ್ರಿಗಳು ಬಳ್ಳಾರಿಗೆ ಬಂದಿದ್ದಾಗ ಡಿ.ಸಿ. ಆಫೀಸ್‌ನಲ್ಲಿ ಮೀಟಿಂಗ್ ಮಾಡಿದರು. ಆ ಸಂದರ್ಭದಲ್ಲಿ. ಎಸ್ ಸಿ ಎಸ್ ಟಿ.ಯವರು ಇರತಕ್ಕ ಗ್ರಾಮಗಳು ಎಲ್ಲೆಲ್ಲಿವೆ ಅಲ್ಲೆಲ್ಲ ಮೊದಲು ಪವರ್ ಕನೆಕ್ಷನ್ ಮಾಡಿಕೊಡುತ್ತೇವೆ, ಬೀದಿ ದೀಪಗಳನ್ನು ಹಾಕಿಸುತ್ತೇವೆಂದು ಭರವಸೆ ಕೊಟ್ಟಿದ್ದರು. ಆ ಬಗ್ಗೆ ಎರಡನೇ ಸಾರಿ ಕೇಳುವುದಕ್ಕೆ ಹೋದಾಗ ಸರ್ಕಾರೀ ಆಜ್ಞೆ

ಮಾಡಿದ್ದೇವೆಂದರು. ಅಧಿಕಾರಿಗಳು ಏನು ಹೇಳುತ್ತಾರೆಂದರೆ, ವರ್ಷಕ್ಕೆ ಒಂದು ಹಳ್ಳಿಗೆ ತಾಲ್ಲೂಕು ಮಟ್ಟದಲ್ಲಿ ಎಲೆಕ್ಟ್ರಿಫಿಕೇಶನ್ ಮಾಡುತ್ತೇವೆಂದು ಹೇಳುತ್ತಾರೆ. ನಮ್ಮ ಕೂಡ್ಲಿಗಿ ತಾಲ್ಲೂಕಿನಲ್ಲಿ ಈ ರೀತಿಯ 20 ಹಳ್ಳಿಗಳು ಇವೆ. ಅಂದರೆ 20 ವರ್ಷಬೇಕು ಎಲೆಕ್ಟ್ರಿಫಿಕೇಷನ್ ಆಗುವುದಕ್ಕೆ. ಇದನ್ನು ಸರಿ ಮಾಡಿ, ಇದರಿಂದ ಬಹಳ ತೊಂದರೆ ಆಗುತ್ತದೆಂದು ಅನೇಕರನ್ನು ಕೇಳಿದರೂ ಇದು ವರೆಗೆ ಏನೂ ಆಗಿಲ್ಲ. ಮೂರನೆಯದಾಗಿ, ನಾವು ಶಾಸಕರು. ಯಾವುದೇ ಪಕ್ಷದಲ್ಲಿ ಇರಬಹುದು. ನಾವು ಮೊದಲು ಹಳ್ಳಿಗಳಿಗೆ ಹೋಗಿ ರೈತರನ್ನು, ಬಡವರನ್ನು ಕಂಡು ಆಗಬೇಕಾದ ಕೆಲಸ ಏನು ಎಂದು ಕೇಳಿ ಅಧಿಕಾರಿಗಳಿಗೆ ಕಾಗದ ಬರೆದು ಮೀಟಿಂಗ್‌ನಲ್ಲಿ ಈ ಪಾಯಿಂಟ್‌ಗಳನ್ನು ಡಿಸ್‌ಕಸ್ ಮಾಡಿದರೆ ತಕ್ಷಣ ಅಟೆಂಡ್ ಮಾಡಿ ಅಧಿಕಾರಿಗಳು ಜಾರಿಗೆ ತರುತ್ತಿದ್ದರು. ಈಗ ಶಾಸಕರು ಒಂದು ಗ್ರಾಮಕ್ಕೆ ಹೋಗಿ ವಿಷಯ ಕೇಳಿ ಇಂಥದ್ದು ಆಗಬೇಕಾಗಿದೆ ಎಂದು ಅಧಿಕಾರಿಗಳಿಗೆ ಪತ್ರವನ್ನು ಬರೆದರೆ ನಮಗೆ ಉತ್ತರ ಏನು ಬರುತ್ತದೆಂದರೆ ನಿಮ್ಮ ಪತ್ರ ತಲುಪಿದೆ. ಅದನ್ನು ಜಿಲ್ಲಾ ಪರಿಷತ್ತಿಗೆ ಕಳುಹಿಸಿದ್ದೇವೆ ಎಂದು. ಮತ್ತೆ ಗ್ರಾಮ ಮಟ್ಟದಿಂದ ಜಿಲ್ಲಾ ಪರಿಷತ್ತಿನವರೆಗೆ ಫೈಟ್-ಔಟ್ ಮಾಡಬೇಕಾಗುತ್ತದೆ. ಮೊದಲು ವಿಧಾನ ಸಭೆಯಲ್ಲಿ ಪ್ರಸ್ತಾಪಿಸಿ, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೆಲಸ ಮಾಡಿಸಿಕೊಳ್ಳುತ್ತಿದ್ದೆವು. ಈಗ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಯಲ್ಲಿ ಫೈಟ್ ಮಾಡಬೇಕಾಗಿದೆ. ಅಲ್ಲಿ ರಾಜಕೀಯ ಪ್ರೆಸ್ಟೀಜ್ ಪ್ರಶ್ನೆ ಬರುತ್ತದೆ ನಮ್ಮ ಲೀಡರ್‌ರವರು ಹೇಳಿದ ಹಾಗೆ, ಪ್ರೆಸ್ಟೀಜ್ ಪ್ರಶ್ನೆ ಬೆಂಗಳೂರಿನಲ್ಲಿ ಮಾತ್ರ ಇರಬಾರದು, ಅಲ್ಲಿಯೂ ಹಂಚಿಕೊಳ್ಳಬೇಕಾಗುತ್ತದೆಂದು ಅಲ್ಲಿಗೂ ಕೊಟ್ಟಿದ್ದೇವೆ ಎಂಬಂತಾಗಿದೆ. ಈ ರೀತಿ ಮಾಡಿರುವುದರಿಂದ ನಮಗೆ ಯಾರನ್ನು ಕೇಳಬೇಕೆಂದರೂ ಯಾವ ಒಂದು ಪವರ್ಸ್ ಇಲ್ಲದಿರುವುದರಿಂದ ನಮ್ಮ ಕೈಯಲ್ಲಿ ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಪತ್ರಿಕೆಯಲ್ಲಿ ಇಷ್ಟು ಕೋಟಿ ರೂಪಾಯಿಗಳನ್ನು ಬಳ್ಳಾರಿ ಜಿಲ್ಲಾ ಪರಿಷತ್ತಿಗೆ ಬಿಡುಗಡೆ ಮಾಡಿದ್ದೇವೆಂದು ಹಾಕುತ್ತಾರೆ. ಅದನ್ನು ನೋಡಿ ಸಂತೋಷ ಪಟ್ಟು, ಜಿಲ್ಲಾ ಪರಿಷತ್ತಿನ ಮೀಟಿಂಗ್‌ನಲ್ಲಿ ಕೇಳಿದರೆ ಹಣ ಬಂದಿಲ್ಲ ಅನ್ನುತ್ತಾರೆ. ಅಲಾಟ್‌ಮೆಂಟ್ ಮಾತ್ರ ಬಂದಿರುತ್ತದೆ. ರೊಕ್ಕ ಬಂದಿರುವುದಿಲ್ಲ. ಯಾವಾಗ ಬರುತ್ತದೆಂದರೆ ಬಂದಾಗ ನೋಡೋಣ, ಮಾಡಿಸೋಣ ಅನ್ನುತ್ತಾರೆ ಅದು ಬರುವುದೂ ಇಲ್ಲ. ನಮಗೆ ಹಣ ಕೊಡುವುದೂ ಇಲ್ಲ. ಈ ರೀತಿಯಾಗಿ ಕೇವಲ ಟ್ರಾನ್ಸ್‌ಫರ್ಸ್ ಹಾಗೂ ಅದು ಇದರಲ್ಲಿ ಜಿಲ್ಲಾ ಪರಿಷತ್ತು ನಡೆಯುತ್ತಿದೆ. ಯಾವುದೇ ಕನ್‌ಸ್ಟ್ರಕ್ಟಿವ್ ವರ್ಕ್ಸ್‌ನ್ನು ತೆಗೆದುಕೊಂಡಿಲ್ಲ. ಹೀಗಾಗಿ ಮೀಟಿಂಗ್‌ಗಳಿಗೆ ಅಟೆಂಡ್ ಮಾಡಬೇಕೆಂದರೆ ಬೇಜಾರಾಗುತ್ತದೆ. ಅಲ್ಲಿ ನಾವು ಜನಗಳ ಹತ್ತಿರ ಅನ್ನಿಸಿಕೊಳ್ಳುವುದು ಆಗಿದೆ. ಜಿಲ್ಲಾ ಪರಿಷತ್ತಿನ ಮೀಟಿಂಗ್‌ನಲ್ಲಿ ಕೇಳಿದರೆ ಅಲ್ಲಿನ ಅಧಿಕಾರಿಗಳು ನೀವು ಕೇಳಿದ್ದನ್ನು ಮಾಡಲಿಕ್ಕೆ ರೊಕ್ಕ ಬಂದಿಲ್ಲ ಅನ್ನುತ್ತಾರೆ. ಹೀಗಾಗಿ ಜನಗಳು ರೊಕ್ಕ ಬಂದಿಲ್ಲವೆಂದರೂ ನಂಬುವುದಿಲ್ಲ. ಪತ್ರಿಕೆಯಲ್ಲಿ ಬಂದಿದೆ, ಆದರೆ ಪರಿಷತ್ತಿಗೆ ರೊಕ್ಕ ಬಂದಿಲ್ಲವೆಂದರೂ ನಂಬುವುದಿಲ್ಲ. ಈ ಒಂದು ಇಕ್ಕಟ್ಟಿಗೆ ನಮ್ಮನ್ನು ಸಿಕ್ಕಿಸಿದ್ದಾರೆ. ಕೊನೇಪಕ್ಷ ಕೊಟ್ಟಿರುವ ಅಂಕಿ ಅಂಶಗಳನ್ನಾದರೂ ಕೊಟ್ಟರೆ ಇಷ್ಟಿಷ್ಟು ಅಲಾಟ್‌ಮೆಂಟ್ ಬಂದಿದೆ ಎಂದು ಜಿಲ್ಲಾ ಪರಿಷತ್ತಿನಲ್ಲಿ ಕುಳಿತು ಡಿವೈಡ್ ಮಾಡಿಕೊಂಡು ಹೋಗುತ್ತೇವೆ. ಕೊಡುವಾಗ ಬೇಕಾದರೆ ಸ್ವಲ್ಪ ಕಡಿಮೇ ಕೊಡಲಿ, ಆದರೆ ಏನೇನು ಕೊಡದಿದ್ದರೆ, ಬಡಜನರಿಗೆ ರೈತರಿಗೆ ನಾವು ಸುಳ್ಳು ಹೇಳುತ್ತಿದ್ದೇವೆ ಎನ್ನುವ ಭಾವನೆ ಬರುತ್ತದೆ.

ಈ ರೀತಿಯಾಗಿ ನಡೆಯುತ್ತಾ ಹೋದರೆ, ಶಾಸಕರು, ಅವರು ಯಾವ ಪಕ್ಷದಲ್ಲಾದರೂ ಇರಬಹುದು, ಅವರು ಯಾವ ಕೆಲಸವನ್ನು ಕೂಡ ಮಾಡುವುದಕ್ಕಾಗುವುದಿಲ್ಲ, ಗ್ರಾಮ ಸಭೆಗಳಿಗೆ ಅವರು ಹೋದರೆ ಯಾವ ಕೆಲಸವನ್ನು ಕೂಡ ಮಾಡಲು ಸಾಧ್ಯವಾಗದೇ ಓಡಾಡಿಕೊಂಡು ಬರುವ ಪರಿಸ್ಥಿತಿ ಬಂದಿದೆ. ಪೇಪರ್‌ಗಳಲ್ಲಿ ಹಣವನ್ನು ಕೊಟ್ಟಿದೆ ಎಂಬ ಫಾಲ್ಸ್ ಸ್ಟೇಟ್‌ಮೆಂಟ್ ಬರುತ್ತದೆ. ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ಸಭೆಗಳಲ್ಲಿ ನಮ್ಮನ್ನು ಕೇಳುತ್ತಾರೆ. ನಮಗೆ ಸಂದಿಗ್ಧ ಪರಿಸ್ಥಿತಿಯು ಉಂಟಾಗುತ್ತದೆ. ಇಂತಹ ಸಂದರ್ಭಗಳಲ್ಲಿ ನಾವು ಬೆಂಗಳೂರು ಬಿಟ್ಟು ಹೋಗದಿರುವ ಪರಿಸ್ಥಿತಿ ಉಂಟಾಗಿದೆ. ಈ ರೀತಿಯಲ್ಲಿ ನಡೆಯದ ಹಾಗೆ ದಯಮಾಡಿ ಸರಿಪಡಿಸಿಕೊಳ್ಳಬೇಕು,

ಇನ್ನು ನಮ್ಮ ಕೂಡ್ಲಗಿ ಮತ್ತು ಹರಪನಹಳ್ಳಿ ತಾಲ್ಲೂಕಿನಲ್ಲಿ ಯಾವುದೇ ಒಂದು ನೀರಾವರಿ ಸೌಲಭ್ಯವೂ ಇರುವುದಿಲ್ಲ ಅಲ್ಲಿಗೆ ಒಂದು ನೀರಾವರಿ ವ್ಯವಸ್ಥೆಯನ್ನು ಮಾಡಿಕೊಟ್ಟು ನಾನು ಈಗಾಗಲೇ ಹೇಳಿದ ಪ್ರಕಾರ ಅದಕ್ಕೆ ಒಂದು ಖಾಯಂ ಪರಿಹಾರವನ್ನು ಕಲ್ಪಿಸುವ ದಿಸೆಯಲ್ಲಿ ಒಂದು ನೀರಾವರಿ ಯೋಜನೆಯನ್ನು ಅಲ್ಲಿ ಕಾರ್ಯಗತ ಮಾಡಿಕೊಡಬೇಕು. ಯಾಕೆಂದರೆ ಯಾವುದೇ ಒಂದು ಸೌಲಭ್ಯ

ಇಲ್ಲದೇ ತಮ್ಮ ಹೊಟ್ಟೆಪಾಡಿಗಾಗಿ ಈಗಾಗಲೇ ಸಾವಿರಾರು ಸಂಖ್ಯೆಯಲ್ಲಿ ಜನರು ಬೇರೆ ಊರುಗಳಿಗೆ ವಲಸೆ ಹೋಗುತ್ತಿದ್ದಾರೆ. ಈ ನಮ್ಮ ತಾಲ್ಲೂಕುಗಳಿಗೆ ಒಂದು ನೀರಾವರಿ ವ್ಯವಸ್ಥೆ ಆದಲ್ಲಿ ಜನಗಳು ತಮ್ಮ ಭೂಮಿಯಲ್ಲಿ ಕಷ್ಟಪಟ್ಟು ಉತ್ತು ಬೆಳೆದುಕೊಳ್ಳುತ್ತಾರೆ. ತುಂಗಭದ್ರಾ ನದಿಯು ನಮ್ಮ ಪ್ರದೇಶದಲ್ಲಿ ಹತ್ತಿರದಲ್ಲಿ ಹರಿಯುತ್ತದೆ. ಜಗಳೂರು ಹತ್ತಿರಕ್ಕೆ ನಮ್ಮ ಪ್ರದೇಶಗಳು ಬರುತ್ತವೆ. ಅಲ್ಲಿಂದ ಯಾವುದಾದರೂ ಒಂದು ದೊಡ್ಡ ಕೆರೆಗೆ ಚಾನಲ್ ಮಾಡಿಸಿ, ಕೊಟ್ಟರೆ ಅದರ ಮೂಲಕ ನಮ್ಮ ಜನರಿಗೆ ನೀರಾವರಿಯ ಸೌಲಭ್ಯ ಸ್ವಲ್ಪ ಮಟ್ಟಿಗಾದರೂ ಒದಗಿದಂತಾಗಿ ಅನುಕೂಲ ಪಡೆಯುತ್ತಾರೆ. ಆದುದರಿಂದ ಅದಕ್ಕೆ ಒಂದು ಸರ್ವೆ ಮಾಡಿಸಿ, ಒಂದು ಯೋಜನೆಯನ್ನು ರೂಪಿಸಿ. ಅದನ್ನು ಕಾರ್ಯಗತ ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ನಾನು ಈಗಾಗಲೇ ಮಾನ್ಯ ರೆವಿನ್ಯೂ ಮಂತ್ರಿಯವರಿಗೆ ಮನವಿ ಮಾಡಿಕೊಂಡಿದ್ದೇನೆ. ಈಗಲೂ ಮಾಡಿಕೊಳ್ಳುತ್ತೇನೆ. ಅವರು ನಮ್ಮ ಭಾಗದಲ್ಲಿನ ಬರಗಾಲದ ಪರಿಸ್ಥಿತಿಯನ್ನು ನೋಡಿದವರಾಗಿದ್ದಾರೆ. ನಮ್ಮಲ್ಲಿ ಯಾವುದೇ ನೀರಾವರಿ ಸೌಲಭ್ಯ ಇಲ್ಲದಿರುವುದನ್ನು ಅವರು ಅರಿತುಕೊಂಡಿದ್ದಾರೆ. ಆದುದರಿಂದ ಯಾವುದಾದರೂ ಒಂದು ನೀರಾವರಿ ಯೋಜನೆಯನ್ನು ನಮಗೆ ಕೊಡಬೇಕು. ತುಂಗಭದ್ರಾ ನದಿಯು ದಾವಣಗೆರೆ, ಜಗಳೂರು, ಹೀಗೆ ಹರಿಯುತ್ತದೆ. ಅದರ ಮೂಲಕ ನಮ್ಮ ತಾಲ್ಲೂಕಿಗೆ ಲಿಂಕ್ ಮಾಡುವುದಕ್ಕೆ ಅವಕಾಶ ಇದ್ದರೆ ಅದರಿಂದ ನೀರಾವರಿ ಮಾಡಿದರೆ, ಅರ್ಧ ತಾಲ್ಲೂಕಿಗೆ ಅದರ ಲಾಭ ಸಿಗುತ್ತದೆ. ಅದರಿಂದ ಅಲ್ಲಿಯ ಜನರ ಸಂಕಷ್ಟಗಳು ನಿವಾರಣೆ ಆಗುತ್ತದೆ, ಬಡರೈತರಿಗೆ ಅನುಕೂಲವಾಗುತ್ತದೆ. ಇಷ್ಟನ್ನು ತಮ್ಮಲ್ಲಿ ನಿವೇದಿಸಿಕೊಂಡು, ನನಗೆ ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಚಂದ್ರಶೇಖರ ಮಾಮನಿ (ಪರಸಗಡ). – ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ ಬರಗಾಲದ ಪರಿಸ್ಥಿತಿ ಇದ್ದು, ಕಳೆದ ಎರಡು ವರ್ಷಗಳಲ್ಲಿ ನಮ್ಮ ಅನುಭವದ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಬರಗಾಲದ ಸಂದರ್ಭದಲ್ಲಿ ಸಾಕಷ್ಟು ಪರಿಹಾರ ಕಾಮಗಾರಿ ಕೆಲಸಗಳನ್ನು ಸರಕಾರದವರು ಮಾಡಿದ್ದಾರೆ. ಅನೇಕ ಯೋಜನೆಗಳನ್ನು ಮೈನರ್ ಇರಿಗೇಶನ್ ಟ್ಯಾಂಕ್ಸ್‌ಗಳನ್ನು ಕೂಡ ಈ ಬರಗಾಲ ಕಾಮಗಾರಿಗಳಲ್ಲಿ ಮಾಡಿದ್ದಾರೆ. ನಮ್ಮ ತಾಲ್ಲೂಕಿಗೆ ಮುಗಳಿ ಟ್ಯಾಂಕ್ ಕಟ್ಟುವುದಕ್ಕೆ ಸುಮಾರು ೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ, ಸುಮಾರು ೫೭೦ ಎಕರೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಸಿಗುವಂತೆ ಮಾಡಿದ್ದಾರೆ ಮತ್ತು ಇದೇ ಕಾಮಗಾರಿಯಲ್ಲಿಯಲ್ಲಿ ಅನೇಕ ರಸ್ತೆಗಳನ್ನು ಮತ್ತಿತರ ಕೆಲಸಗಳನ್ನು ಮಾಡಿದ್ದಾರೆ. ಹಾಗೆಯೇ ಈ ವರ್ಷ ಕೂಡ ನಮ್ಮ ಬೆಳಗಾವಿ ಜಿಲ್ಲೆಯ ವಿಚಾರದಲ್ಲಿ ಹೇಳಬೇಕಾದರೆ ನಮ್ಮ ಜಿಲ್ಲೆಯಲ್ಲಿ ಬರಗಾಲ ಪೀಡಿತ ಪ್ರದೇಶದಲ್ಲಿ ೧೩೧ ಹಳ್ಳಿಗಳು ಸೇರಿವೆ ಎಂದು ಅಧಿಕಾರಿಗಳು ಮಾಹಿತಿ ಕೊಟ್ಟಿದ್ದಾರೆ ಆದರೆ ಅದು ಸುಳ್ಳು. ನನಗನಿಸಿದ ಪ್ರಕಾರ ನಮ್ಮ ಜಿಲ್ಲೆಯಲ್ಲಿ ೧೧೮೦ ಮೇಲ್ಪಟ್ಟು ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆ. ನನ್ನ ಕ್ಷೇತ್ರವಾದ ಸೌಂದತ್ತಿ ತಾಲ್ಲೂಕಿನಲ್ಲಿ ಮುಂಗಾರು ಬೆಳೆ ಮಾಡುವ ಹಳ್ಳಿಗಳು ಸುಮಾರು ೫೨ ಇದ್ದು, ಅವುಗಳು ಸಂಪೂರ್ಣವಾಗಿ ಬರಗಾಲಕ್ಕೆ ಸಿಕ್ಕಿವೆ. ಆದರೆ ಅಧಿಕಾರಿಗಳು ಕೊಟ್ಟ ಮಾಹಿತಿಯಲ್ಲಿ ಕೇವಲ ೩೦ ಹಳ್ಳಿಗಳು ಮಾತ್ರ ಬಂದಿವೆ. ಗೋಕಾಕ್ ತಾಲ್ಲೂಕಿನ ೬, ಚಿಕ್ಕೋಡಿ ತಾಲ್ಲೂಕಿನ ೧೨, ಅಥಣಿ ತಾಲ್ಲೂಕಿನ ೨೬, ಬೈಲಹೊಂಗಲ ತಾಲ್ಲೂಕಿನ ೩೨, ಹಳ್ಳಿಗಳು ಬರಗಾಲ ಪೀಡಿತವಾಗಿವೆ. ಮತ್ತು ಬೆಳಗಾಂ ಹಾಗೂ ಖಾನಾಪುರ ತಾಲ್ಲೂಕಿನಲ್ಲಿ ವಿಶೇಷವಾಗಿ ಭತ್ತದ ಬೆಳೆ ಬೆಳೆಯುವ ಪ್ರದೇಶಗಳಲ್ಲಿ ಕೂಡ ಎಕರೆಗೆ ಒಂದು ಚೀಲ ಭತ್ತವನ್ನೂ ಕೂಡ ಪಡೆಯದೇ ಇರತಕ್ಕಂಥ ಪರಿಸ್ಥಿತಿ ಒದಗಿ ಬಂದಿದೆ. ಆ ಪ್ರದೇಶಗಳಲ್ಲಿ ಮಳೆಯು ೧೦೦ಕ್ಕೆ ೧೦೦ರಷ್ಟು ಹೋಗಿದೆ. ಬೆಳಗಾಂ ಮತ್ತು ಖಾನಾಪುರ ತಾಲೂಕುಗಳಲ್ಲಿ ಬರಗಾಲ ಜನರನ್ನು ತತ್ತರಿಸುವಂತೆ ಮಾಡಿದೆ. ನೀರಾವರಿ ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯ ಮಲಪ್ರಭಾ ಮತ್ತು ಘಟಪ್ರಭಾ ರಿಸರ್ವಾಯರ್‌ಗಳಲ್ಲಿ ನೀರಿನ ಮಟ್ಟ ವರ್ಷೇವರ್ಷೆ ಕುಗ್ಗತೊಡಗಿದೆ. ಮಲಪ್ರಭಾದ ವಿವರ ಹೇಳಬೇಕೆಂದರೆ ಅದರ ಲೆವೆಲ್ ತುಂಬಬೇಕಾದರೆ ಸಮುದ್ರ ಸಮಪಾತಳಿಯಿಂದ ೨೦೮೦ ಅಡಿ ಇರಬೇಕು ಇವತ್ತು ೨೦೪೫ ಮಾತ್ರ ನೀರಿದೆ. ಅಂದರೆ ಕೇವಲ ೨೦ ಪರ್ಸೆಂಟ್ ಮಾತ್ರ ನೀರಿದೆ ಹೋದ ವರ್ಷ ಇದಕ್ಕಿಂತಲೂ ಕಡಿಮೆ ಇತ್ತು. ಈ ಡ್ಯಾಮಿಗಾಗಿ ನೂರಾರು ಕೋಟಿ ಖರ್ಚು ಮಾಡಿ ಕಟ್ಟಿದರೂ ಸಹ ನೀರಿನ ಸಂಗ್ರಹಣೆ ಕಡಿಮೆಯಾಗಿ ರೈತರಿಗೆ ತೊಂದರೆಯಾಗಿದೆ, ಇದು ಸರಿಹೋಗಬೇಕಾದರೆ ಮಾದಾಯಿ ಎಂಬಲ್ಲಿ ಹರಿಯುವ ನೀರಿನ ಒಟ್ಟು ಪ್ರಮಾಣವಾದ ೨೦ ಟಿಎಂಸಿ ಪೈಕಿ ನಮ್ಮ ಪಾಲಾದ ೧೦ ಟಿಎಂಸಿ ನೀರನ್ನು ಮಲಪ್ರಭಾ ಕಡೆಗೆ ಸೇರಿಸಿಕೊಟ್ಟರೆ ನಮ್ಮ ಬೆಳಗಾಂಗೆ ಸದುಪಯೋಗವಾಗುತ್ತದೆ ಮಲಪ್ರಭಾ ಯೋಜನೆಯಲ್ಲಿ ನವಲಗುಂದ, ರೋಣ ಗದಗ ತನಕ ಬರೀ ಕಾಲುವೆ ತೆಗೆದುಕೊಂಡು

ಹೋದರೆ ಉಪಯೋಗ ಇಲ್ಲ. ಆದ್ದರಿಂದ ಮಾದಾಯಿ ನೀರನ್ನು ಬಿಟ್ಟರೆ ಉಪಯೋಗವಾಗುತ್ತದೆ. ಇದೇ ಪ್ರಕಾರ ಘಟಪ್ರಭಾ ಯೋಜನೆಯಲ್ಲೂ ಸೇರಿದಂತೆ ಕಾಲುವೆಗಳನ್ನು ತೆರೆದರೆ ನಮ್ಮ ಜಿಲ್ಲೆಯ ಗೋಕಾಕ್, ಸವದತ್ತಿ ತಾಲೂಕುಗಳಿಗೆ ನೀರಾವರಿ ಉಪಯೋಗ ಮಾಡಿಕೊಟ್ಟಂತಾಗುತ್ತದೆ. ಘಟಪ್ರಭಾ ಕಾಲುವೆಯನ್ನು ತೆರೆಯಿರಿ ಎಂದು ಆಂದೋಲನವನ್ನೂ ಚಾಲೂ ಮಾಡಿ ಸುಮಾರು ಒಂದು ತಿಂಗಳಿನಿಂದ ಅಲ್ಲಿನ ಜನ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ನನ್ನ ಕ್ಷೇತ್ರದ ಕೆಲವು ಭಾಗ ಅಲ್ಲಿ ಬರುವುದರಿಂದ ನಾನೂ ಹೋಗಿ ಅವರೊಡನೆ ಮಾತನಾಡಿ ಅವರು ಕೊಟ್ಟ ಮನವಿಯನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ. ಕಂದಾಯ ಮಂತ್ರಿಗಳಿಗೂ ಪತ್ರದ ಮೂಲಕ ಕಳಿಸಿಕೊಟ್ಟಿದ್ದೇನೆ. ತಾವುಗಳು ದಯಮಾಡಿ ಘಟಪ್ರಭಾ ಮತ್ತು ಮಲಪ್ರಭಾ ಕಾಲುವೆಗಳನ್ನು ಬೇಗನೆ ಶುರು ಮಾಡಿದರೆ ಜಿಲ್ಲೆಯ ಶಾಶ್ವತ ಬರಗಾಲ ಏನಿದೆ ಅದಕ್ಕೆ ಶಾಶ್ವತ ಪರಿಹಾರವಾದಂತಾಗುತ್ತದೆ. ಇಷ್ಟನ್ನು ಹೇಳುತ್ತಾ ಬರಗಾಲದಲ್ಲಿ ಖರ್ಚು ಮಾಡುವ ಹಣ ದುರುಪಯೋಗವಾಗದ ಹಾಗೆ ನೋಡಿಕೊಳ್ಳಬೇಕು. ಜೊತೆಗೆ ಸಾಯಿಲ್ ಕನ್‌ಸರ್ವೇಷನ್‌ಗೂ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ನಮ್ಮ ತಾಲೂಕಿನ ಮುದಲೂರು ಗ್ರಾಮದಲ್ಲಿ ೧೨೫ ಬೋರ್‌ವೆಲ್‌ಗಳನ್ನು ತೆಗೆದಿದ್ದು ಒಂದೊಂದು ಬೋರ್‌ವೆಲ್‌ನಲ್ಲೂ ನಾಲ್ಕೈದು ಇಂಚು ನೀರು ಬರುತ್ತಾ ಇದೆ ಇವಕ್ಕೆ ವಿದ್ಯುತ್ ಕನೆಕ್ಷನ್ ಇಲ್ಲದೇ ತೊಂದರೆಯಾಗಿದೆ. ಅದಕ್ಕೇ ನಾನು ವಿದ್ಯುತ್ ಮಂತ್ರಿಗಳಾದ ಶ್ರೀ ಲಕ್ಷ್ಮೀನರಸಿಂಹಯ್ಯನವರಿಗೆ ಪತ್ರದ ಮೂಲಕ ತಿಳಿಸಿದ್ದೇನೆ. ನಮ್ಮ ತಾಲೂಕಿನಲ್ಲಿ ತೆರೆದಿರುವ ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕ ಕೊಟ್ಟರೆ ಉಪಯೋಗವಾಗುತ್ತದೆ. ಅದಕ್ಕೆ ಬೇಕಾದ ಕಂಡಕ್ಟರ್‌ಗಳು ವೈರ್‌ಗಳು ಇತರೆ ಸಾಮಗ್ರಿಗಳನ್ನು ಕೂಡಲೇ ಸರ್ಕಾರ ಒದಗಿಸಿಕೊಟ್ಟು ಬರ ಪರಿಹಾರದ ಬಗ್ಗೆ ಪ್ರಾಶಸ್ತ್ಯ ಕೊಡಬೇಕೆಂದು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಧರ್ಮಸಿಂಗ್ (ಜೇವರ್ಗಿ).—ಸನ್ಮಾನ್ಯ ಅಧ್ಯಕ್ಷರೆ, ಈ ಬರಗಾಲದ ಬಗ್ಗೆ ೧೯೮೫ರಿಂದ ಸಾಕಷ್ಟು ಚರ್ಚೆ ಕೂಡ ಈ ಸಭೆಯಲ್ಲಿ ಆಗಿವೆ. ಮತ್ತು ಸದಸ್ಯರು ಕೂಡ ನಮ್ಮ ಸಲಹೆ ಸೂಚನೆಗಳನ್ನು ಕೊಟ್ಟಿದ್ದೇವೆ ಆದರೆ ಇವತ್ತು ಸರ್ಕಾರ ಬರಗಾಲದ ಬಗ್ಗೆ ಏನೂ ಚಿಂತನೆ ಮಾಡುತ್ತಿಲ್ಲ ಎಂಬ ಭಾವನೆ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆ ಇದೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ೧೯೮೩–೮೪ರಿಂದ ೧೯೮೭–೮೮ರ ವರೆಗೆ ಸತತವಾಗಿ ಕೇಂದ್ರದಿಂದ ೧೫೫ ಕೋಟಿ ರೂಪಾಯಿ ಬಿಡುಗಡೆಯಾಗಿದೆ. ೧೯೮೩ರಿಂದ ೧೯೮೭ರವರೆಗೆ ೧೧೯ ಕೋಟಿ ರೂಪಾಯಿ ಕೇಂದ್ರದಿಂದ ಬಿಡುಗಡೆ ಆದಮೇಲೆ, ರಾಜ್ಯ ಸರ್ಕಾರದವರು ೧೪೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು. ಆದರೆ ಮೇಲಿಂದ ಮೇಲೆ ತಾವು ಏನು ಹೇಳುತ್ತಿದ್ದೀರಿ ಎಂದರೆ, ನೂರಾರು ಕೋಟಿ ರೂಪಾಯಿಗಳನ್ನು ನಾವು ಬರಗಾಲದ ಬಗ್ಗೆ ಖರ್ಚು ಮಾಡುತ್ತಿದ್ದೇವೆ ಎಂಬ ಮಾತನ್ನು ಪದೇ ಪದೇ ಹೇಳುತ್ತಿದ್ದೀರಿ. ೧೯೮೭–೮೮ರಲ್ಲಿ ಕೂಡ ಕೇಂದ್ರದಿಂದ ೫೦ ಕೋಟಿ ರೂಪಾಯಿ ಬಿಡುಗಡೆ ಆದರೂ ಕೂಡ ಇದುವರೆಗೆ ಪರಿಣಾಮಕಾರಿಯಾಗಿ ಏನು ಕೆಲಸ ಕಾರ್ಯಗಳು ಸರ್ಕಾರದಿಂದ ಆಗಬೇಕಾಗಿತ್ತೋ ಅದು ಆಗುತ್ತಿಲ್ಲ. ಪ್ರಧಾನಮಂತ್ರಿಯವರು ಎಲ್ಲೆಲ್ಲಿ ಬರ ಬಿದ್ದಿದೆ ಆ ಪ್ರದೇಶಗಳಿಗೆ ಹೆಚ್ಚಿನ ರೀತಿಯಲ್ಲಿ ಹಣ ಕೊಡಬೇಕು ಎಂಬ ಮನಸ್ಸು ಮಾಡಿ ಹಣವನ್ನು ಬಿಡುಗಡೆ ಮಾಡಿದ ನಂತರ ಕರ್ನಾಟಕ ಸರ್ಕಾರ ಎಚ್ಚೆತ್ತು ೦೦ ಕೋಟಿ ರೂಪಾಯಿ ನಮಗೆ ಬೇಕು ಎಂಬ ಮನವಿಯನ್ನು ಸಲ್ಲಿಸಿದೆ. ನಿಮಗೆ ಗೊತ್ತಾಗಿರಬಹುದು, ಹೋದ ಸಲ ಈ ಸದನದಲ್ಲಿ ಎಲ್ಲ ಸದಸ್ಯರೂ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೇವಿಲ್ಲ ಎಂದು ಹೇಳಿದ್ದಾರೆ. ಎಲ್ಲಾ ಕಡೆ ಕೆಲಸ ಪ್ರಾರಂಭ ಮಾಡಬೇಕು ಎಂದು ಫೆಬ್ರುವರಿ ತಿಂಗಳಿಂದ ನಾವೆಲ್ಲ ಪದೇ ಪದೇ ಕೇಳಿಕೊಳ್ಳುತ್ತಿದ್ದೇವೆ. ಆದರೆ ನಜೀರ್‌ಸಾಹೇಬರು ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಅಧಿಕಾರ ವಹಿಸಿಕೊಟ್ಟಿದ್ದಾರೆ. ಸ್ಥಾನಿಕವಾಗಿ ಅವರೇ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಏನು ನಿಲುವಳಿ ಸೂಚನೆ ತಂದಿದ್ದರು ಅದರ ಬಗ್ಗೆ ಸ್ಟೇಟ್‌ಮೆಂಟ್ ಮಾಡುವುದಕ್ಕಿಂತ ಮುಂಚೆ ನಾಲ್ಕು ತಿಂಗಳ ಅವಧಿಯಲ್ಲಿ ಹೋದ ಸದನದಲ್ಲಿ ಏನು ಆಶ್ವಾಸನೆ ಕೊಟ್ಟಿದ್ದೀರಿ ಅದರ ಮೇಲೆ ತಾವು ಏನೇನು ಕೆಲಸ ಕಾರ್ಯಗಳನ್ನು ಮಾಡಿದ್ದೀರಿ, ಅದರ ಬಗ್ಗೆ ನಿಮ್ಮ ಅನಿಸಿಕೆ ಏನು ಎಂಬ ಮಾತನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡಬೇಕು, ಸರ್ಕಾರ ಬರಗಾಲದ ಬಗ್ಗೆ ಚಿಂತನೆ ಮಾಡಿಲ್ಲ ಎಂಬ ಆರೋಪ ಮಾಡಬೇಕಾಗಿದೆ ಎಂಬ ರೀತಿಯಲ್ಲಿ ನಿನ್ನೆ ಕೇಳಿಕೊಂಡೆವು. ೨೧೯ ಕೋಟಿ ರೂಪಾಯಿ ನಾವು ಕೇಳುತ್ತಿದ್ದೇವೆ ೧೫–೨೦ ಲಕ್ಷ ಜನರಿಗೆ ಕೆಲಸ ಕೊಡುತ್ತೇವೆ ಎಂಬ ಮಾತನ್ನು ತಾವು ಹೇಳಿದ್ದೀರಿ. ಅಧ್ಯಕ್ಷರೇ, ತಾವು ಇದನ್ನು ಸರ್ಕಾರದಿಂದ ರೆಕಾರ್ಡ್ ತರಿಸಿಕೊಂಡು ನೋಡಬೇಕು. ಯಾವ ೧೫೫ ಕೋಟಿ ರೂಪಾಯಿಗಳನ್ನು ೧೯೮೩ರಿಂದ ಇಲ್ಲಿಯವರೆಗೆ ಸರ್ಕಾರ ಬಿಡುಗಡೆ ಮಾಡಿದೆ ಅದರ ಪೈಕಿ ೪ ಲಕ್ಷದಿಂದ

೬ ಲಕ್ಷ ಜನರಿಗಿಂತ ಹೆಚ್ಚು ಕೆಲಸ ಕೊಟ್ಟಿಲ್ಲ. ಸೆಂಟ್ರಲ್ ಟೀಮ್ ಕೂಡ ಬರುತ್ತಿದೆ, ನಾಡಿದ್ದು ಪ್ರಧಾನಮಂತ್ರಿಗಳ ಜೊತೆ ಸಮಾಲೋಚನೆ ಮಾಡಲು ಮಾನ್ಯ ಮುಖ್ಯಮಂತ್ರಿಗಳು ಹೋಗುತ್ತಿದ್ದಾರೆ. ರೆವಿನ್ಯೂ ಮಂತ್ರಿಗಳು ಹೋಗುತ್ತಿದ್ದಾರೆ. ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಹಳ್ಳಿಯಲ್ಲಿ ಈ ರೀತಿಯಾಗಿ ಜನರಿಗೆ ತೊಂದರೆಯಾಗಿದೆ ಎಂಬುದನ್ನು ನೋಡಿದರೆ ವಿಷಾದ ಎನಿಸುತ್ತಿದೆ. ಆರ್.ಎಲ್.ಇ.ಜಿ.ಪಿ ಯಲ್ಲಿ ಎಷ್ಟು ಕೆಲಸ ಕೊಟ್ಟಿದ್ದಾರೆ, ಎನ್.ಆರ್.ಇ.ಪಿ. ಅಡಿಷನಲ್ ಪ್ಲಾನ್‌ನಲ್ಲಿ ಏನಾಗಿದೆ, ಡಿ.ಪಿ.ಎ.ಪಿ. ಯಲ್ಲಿ ಕೆಲಸ ಏನಾಗಿದೆ ಜಿಲ್ಲಾ ಪರಿಷತ್ತಿಗೆ ಎಷ್ಟು ಹಣ ಕೊಟ್ಟಿದ್ದೀರಿ, ಯಾವ ಯಾವ ಜಿಲ್ಲಾ ಪರಿಷತ್ತುಗಳು ತಮಗೆ ಎಷ್ಟೆಷ್ಟು ಹಣ ಬೇಕು ಎಂದು ಹೇಳಿದ್ದಾರೆ, ಮಂಡಲ ಪಂಚಾಯಿತಿಯಲ್ಲಿ ಏನು ಪ್ಲಾನ್ ಮಾಡಿದ್ದಾರೆ ಇದನ್ನು ತರಿಸಿಕೊಂಡಿಲ್ಲ, ರೆವಿನ್ಯೂ ಮಂತ್ರಿಗಳಾಗಲೀ ಜಿಲ್ಲಾ ಮಂತ್ರಿಗಳಾಗಲೀ ಜಿಲ್ಲೆಗಳಿಗೆ ಹೋಗಿ ಆ ಜಿಲ್ಲೆಯ ಶಾಸಕರೊಡನೆ ಜಿಲ್ಲಾ ಪರಿಷತ್ ಸದಸ್ಯರೊಡನೆ ಸಮಾಲೋಚನೆ ಮಾಡಿ ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ಹಳ್ಳಿಗಳಲ್ಲಿ ಏನೇನು ಕೊರತೆ ಇದೆ ಎಂಬುದನ್ನು ಅಧ್ಯಯನ ಮಾಡಿಲ್ಲ. ರಾಜಾಸ್ಥಾನಕ್ಕೆ ಮತ್ತು ಬೇರೆ ಕಡೆಗೆ ದುಡ್ಡು ಕೊಟ್ಟ ಮೇಲೆ ಇಡೀ ದೇಶದಲ್ಲಿ ಪ್ರಧಾನಮಂತ್ರಿಗಳು ಡ್ರೈವ್ ಪ್ರಾರಂಭ ಮಾಡಿದ ಮೇಲೆ ಕರ್ನಾಟಕದಲ್ಲಿ ಕೂಡ ಮಾಡಬೇಕಾಗುತ್ತದೆ, ಸುಮ್ಮನೆ ಕೂತರೆ ಜನ ಬಿಡುವುದಿಲ್ಲ ಎಂದು ತಾವು ೨೯೯ ಕೋಟಿ ರೂಪಾಯಿಗಳನ್ನು ಕೇಳಿದ್ದೀರಿ ೧೫–೨೦ ಲಕ್ಷ ಜನರಿಗೆ ಕೂಲಿ ಕೊಡುತ್ತೇವೆ ಎಂದು ಹೇಳಿದ್ದೀರಿ. ಸೆಂಟ್ರಲ್ ಟೀಂ ವಿಸಿಟ್ ಕೊಟ್ಟ ಮೇಲೆ ಕೆಲಸ ಪ್ರಾರಂಭ ಆಗಬೇಕಾಗುತ್ತದೆ. ಕರ್ನಾಟಕ ಸರ್ಕಾರ ಈಗ ಕೆಲಸ ಪ್ರಾರಂಭ ಮಾಡಿದೆ. ಈಗ ಮಂಡಲ ಪಂಚಾಯಿತಿಯಲ್ಲಿ ಮತ್ತು ರೆವಿನ್ಯೂ ಸರ್ಕಲ್‌ನಲ್ಲಿ ಕೆಲಸ ಕೊಡತಕ್ಕ ಪ್ರಯತ್ನ ಮಾಡಿದ್ದೀರಿ. ಈ ದಿಸೆಯಲ್ಲಿ ದುಡ್ಡು ಕೊಡತಕ್ಕಂಥದ್ದನ್ನು ಯಾವಾಗ ರೆಕಮೆಂಡ್ ಮಾಡುತ್ತಾರೆ. ಇವತ್ತು ತಾವು ಕೆಲಸವನ್ನ ಸರಿಯಾಗಿ ಪ್ರಾರಂಭ ಮಾಡಿಲ್ಲ. ಈ ರೀತಿಯಾಗಿ ಕರ್ನಾಟಕ ಸರ್ಕಾರ ಇವತ್ತಿನ ದಿವಸ ಜನರಿಗೆ ವಂಚನೆಯನ್ನು ಮಾಡುತ್ತಿದ್ದಾರೆ. ತಮ್ಮ ಮೇಲೆ ಏನೊಂದು ಭರವಸೆ ಇತ್ತೋ ಇವತ್ತು ಅದು ಇಲ್ಲವಾಗಿದೆ. ಜನರು ನಾಲ್ಕು ವರ್ಷದಿಂದ ಸತತವಾಗಿ ಬರಗಾಲದ ಬೇಗೆಗೆ ಸಿಕ್ಕಿ ತೊಂದರೆಗೆ ಈಡಾಗುತ್ತಿದ್ದಾರೆ. ಅಲ್ಲಿ ಏನೂ ಕೆಲಸ ಮಾಡಿಲ್ಲ ಎನ್ನುವ ಆರೋಪವನ್ನು ಇವತ್ತಿನ ದಿವಸ ನಾವು ಹೇಳಬೇಕಾಗುತ್ತದೆ ದುಡ್ಡು ಇಲ್ಲ ಎಂದು ಸತತವಾಗಿ ಹೇಳುತ್ತಿದ್ದಾರೆ. ಇವತ್ತು ಡೆಪ್ಯುಟಿ ಕಮಿಷನರ್ ಹೇಳುತ್ತಿದ್ದಾರೆ ಜಿಲ್ಲಾ ಪರಿಷತ್ತು ಬಂದ ಮೇಲೆ ೨೮೯ ಸ್ಕೇರ್‌ಸಿಟಿ ಫಂಡ್ಸ್‌ನಲ್ಲಿ ಕೆಲಸ ಮಾಡತಕ್ಕಂಥ ಪ್ರಾವಿಷನ್ ಇಲ್ಲ, ಹಣವನ್ನು ಕೊಟ್ಟಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಈ ರೀತಿಯಲ್ಲಿ ಇವತ್ತು ಪರಿಸ್ಥಿತಿ ಇದೆ. ನಾನು ಮಾನ್ಯ ಬೊಮ್ಮಾಯಿಯವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಯಾವ ರೀತಿಯಾಗಿ ಎಲ್ಲಾ ಕಡೆಗೂ ಕೆಲಸ ಹೇಗೆ ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಈ ಬಾಬತ್ತಿನಲ್ಲಿ ಇಷ್ಟು ಹಣ ಖರ್ಚು ಮಾಡುತ್ತೇವೆ, ಇಷ್ಟಿಷ್ಟು ಹಣವನ್ನು ನಾವು ಅಲ್ಲಿಗೆ ಕೊಟ್ಟು ಕೆಲಸ ಪ್ರಾರಂಭ ಮಾಡುವುದಕ್ಕೆ ಜಿಲ್ಲಾ ಪರಿಷತ್ತುಗಳಿಗೆ ಕೊಟ್ಟಿದ್ದೇವೆ ಎಂದು ಹೇಳುತ್ತೀರಾ ? ಇದರ ಬಗ್ಗೆ ಮೊದಲು ಸರ್ಕಾರದವರು ಸಮಾಲೋಚನೆ ಮಾಡಿದ್ದಾರೆಯೇ ? ಎಲ್ಲಾ ಶಾಸಕರು ಕೂಡಾ ಜಿಲ್ಲಾ ಪರಿಷತ್ತು ಸಭೆಯಲ್ಲಿ ಹೇಳಿದ್ದಾರೆ. ಮುಂದೆ ಯಾವುದಾದರೂ ಕೆಲಸವನ್ನು ಯಾವ ರೀತಿ ತೆಗೆದುಕೊಳ್ಳಲಿಕ್ಕೆ ಯೋಚನೆ ಮಾಡಿದ್ದೀರಿ ? ನಮ್ಮ ಜಿಲ್ಲೆಯವರು ಬರಗಾಲಕ್ಕೆ ಒಳಗಾಗಿದ್ದಾರೆ. ಅದರ ಬಗ್ಗೆ ನಿಮಗೆ ಎಷ್ಟು ಹಣ ಬೇಕಾಗುತ್ತದೆ, ಆ ರೀತಿಯಲ್ಲಿ ಮಾಡುವುದಕ್ಕೆ ಯಾವ ಯೋಜನೆಗಳನ್ನು ಹಾಕಿಕೊಂಡಿದ್ದೀರಿ ? ಯಾವುದನ್ನೂ ತಾವು ಮಾಡಿಲ್ಲ. ಇದುವರೆಗೆ ಒಂದು ಸಭೆಯನ್ನೂ ಕೂಡಾ ಕರೆಯಲಿಲ್ಲ. ಮಾನ್ಯ ನಜೀರ್‌ಸಾಬ್‌ರವರು ಹೇಳುತ್ತಿದ್ದಾರೆ, ೬೦೦ ಕೋಟಿ ರೂಪಾಯಿಗಳನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟಿದ್ದೇವೆ ಎಂದು. ೬೦೦ ಕೋಟಿ ರೂಪಾಯಿಯಲ್ಲಿ ೫೪೫ ಕೋಟಿ ರೂಪಾಯಿ ಎಸ್ಟಾಬ್ಲಿಷ್‌ಮೆಂಟ್‌ಗೆ ಹೋಗುತ್ತದೆ. ಇವತ್ತು ಪ್ರತಿ ಮಂಡಲ ಪಂಚಾಯಿತಿಗೆ ೧೫–೧೬ ಸಾವಿರ ರೂಪಾಯಿ ಕೂಡಾ ಬರುತ್ತಿಲ್ಲ ಅಲ್ಲಿ ಇವತ್ತು ಏನಾಗಿದೆ ಎಂದರೆ ಸ್ಯಾಲರಿ ಕೊಡತಕ್ಕಂಥದ್ದಕ್ಕೂ ಕೂಡಾ ಮಂಡಲ ಪಂಚಾಯಿತಿಯಲ್ಲಿ ದುಡ್ಡು ಇಲ್ಲ. ಈ ರೀತಿ ಆದರೆ ಪರಿಸ್ಥಿತಿಯನ್ನು ಹೇಗೆ ನಿಬಾಯಿಸುವುದು ? ಮೋಡಿನ ತೊಂದರೆ ಏನೂ ಆಗಿಲ್ಲ ಎಂದು ರೆವಿನ್ಯೂ ಮಿನಿಸ್ಟರ್ ಆಶ್ವಾಸನೆಯನ್ನೂ ಕೂಡಾ ಕೊಟ್ಟಿದ್ದಾರೆ. ಫಾಡರ್ ಬ್ಯಾಂಕನ್ನು ತೆಗೆಯುತ್ತೇವೆ ಎಂದು ಹೇಳಿದ್ದರು. ಎಷ್ಟು ಫಾಡರ್ ಬ್ಯಾಂಕನ್ನು ತಾವು ತೆಗೆಯುತ್ತೀರಿ ? ಎಷ್ಟೋ ಕಡೆ ದನಗಳಿಗೆ ಮೇವು ಸಿಗದ ಹಾಗೆ ಆಗಿದೆ. ಇದರ ಬಗ್ಗೆ ಒಟ್ಟಾರೆ ತಾವು ಹೇಳತಕ್ಕಂಥದ್ದು ಏನು ಇದೆ ? ನಾರ್ಮಲ್ ಆಗಿ ಆಗಬೇಕಾದ ರೆಗ್ಯುಲರ್ ವರ್ಕ್ಸ್ ಆಗುತ್ತಿದೆಯೋ ? ಇದರಲ್ಲಿ ಕೂಡಾ ತಾವು ಎಷ್ಟೆಷ್ಟು ಜನರಿಗೆ ಕೆಲಸ ಕೊಡಬೇಕಾಗಿದೆ ಅದನ್ನು ಕೊಟ್ಟಿ

ದ್ದೀರಾ ? ಇವತ್ತು ಗುಲ್ಬರ್ಗ ಜಿಲ್ಲೆಯಲ್ಲಿ ೨೫ ಸಾವಿರ ಜನರು ಭೀಕರ ಪರಿಸ್ಥಿತಿಯಲ್ಲಿದ್ದರೂ ಅವರಿಗೆ ಕೆಲಸ ಸಿಗುತ್ತಿಲ್ಲ. ಇವತ್ತು ಕೆಲಸ ಸಿಗತಕ್ಕಂಥ ಪ್ರಯತ್ನವನ್ನು ಮಾಡಬೇಕಾದರೆ ಗುಲ್ಬರ್ಗ ಜಿಲ್ಲೆಯಲ್ಲಿ ಏನು ಜನಸಂಖ್ಯೆ ಇದೆ ಅದಕ್ಕನುಗುಣವಾಗಿ ಕೆಲಸಗಳನ್ನು ತೆಗೆದುಕೊಳ್ಳಬೇಕು. ಇವತ್ತು ನನ್ನ ಜೇವರ್ಗಿ ಕ್ಷೇತ್ರದಲ್ಲಿ ೧೨೨ ಹಳ್ಳಿಗಳಲ್ಲಿ ಬಿತ್ತನೆ ಕೆಲಸ ಕೂಡಾ ಆಗಿಲ್ಲ. ನನ್ನ ತಾಲ್ಲೂಕಿನಲ್ಲಿ ಯಾವ ಸರ್ಕಲ್‌ನಲ್ಲೂ ಕೂಡಾ ಕೆಲಸ ಆಗಿಲ್ಲ. ಅಫ್‌ಜಲಪುರದಲ್ಲಿ ಒಂಭತ್ತು ಹಳ್ಳಿಗಳು ಬರಕ್ಕೆ ಈಡಾಗಿದೆ. ಚಿಂಚೋಳಿಯಲ್ಲಿ ೧೨೬ ಹಳ್ಳಿಗಳು ಇವತ್ತು ಕಷ್ಟಕ್ಕೆ ಈಡಾಗಿದೆ. ಇಲ್ಲಿ ಇವತ್ತಿನ ದಿವಸ ಕೆಲಸ ಪ್ರಾರಂಭ ಮಾಡಬೇಕಾಗಿದೆ. ಜಿಲ್ಲಾ ಪರಿಷತ್ತುಗಳಲ್ಲಿ ಯಾವ ಕೆಲಸವನ್ನೂ ತೆಗೆದುಕೊಂಡಿಲ್ಲ. ಇಲ್ಲಿಯ ವರೆಗೆ ಮತ್ತು ತಾವು ಮೂರನೇ ತಾರೀಖಿನ ದಿವಸ ಆಗತಕ್ಕಂಥ ದೆಹಲಿ ಸಭೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ, ಎಷ್ಟು ಜನರಿಗೆ ಕೆಲಸ ಕೊಡುವುದಕ್ಕೆ ಆಗುತ್ತದೆ ಎಂದು ಕೇಳಿದರೆ ಯಾವ ರೀತಿಯಲ್ಲಿ ಉತ್ತರ ಹೇಳುತ್ತೀರೋ ನನಗಂತೂ ಅರ್ಥವಾಗುತ್ತಿಲ್ಲ. ಇನ್ನು ಬಹಳವಾಗಿ, ವಾರ್‌ಫುಟಿಂಗ್ ರೀತಿಯಲ್ಲಿ ಕೆಲಸ ಮಾಡಬೇಕು. ೭೩-೭೪ರಲ್ಲಿ ದೇವರಾಜ ಅರಸುರವರು ಮುಖ್ಯಮಂತ್ರಿ ಆದಾಗ ಆಗ ಬರಗಾಲ ಪರಿಸ್ಥಿತಿ ಇದ್ದಾಗ ಸೈಕಲಾಜಿಕಲ್ ಆಗಿ ಒಂದು ವಾರ್‌ಫುಟಿಂಗ್ ರೀತಿಯ ಅಟ್‌ಮಾಸ್‌ಫಿಯರ್ ಕ್ರಿಯೇಟ್ ಮಾಡಿದ್ದರು. ಆ ರೀತಿಯಾಗಿ ನೀವು ಕೂಡಾ ಮಾಡ ಬೇಕಾಗುತ್ತದೆ, ಮತ್ತು ಅಂತಹ ವಾತಾವರಣವನ್ನು ನಿರ್ಮಾಣ ಮಾಡಬೇಕಾಗುತ್ತದೆ ಜನರು ದುಃಖದಲ್ಲಿ ಇದ್ದಾರೆ. ಬರಗಾಲದ ಪರಿಸ್ಥಿತಿಗೆ ಒಳಗಾಗಿದ್ದಾರೆ. ಇಲ್ಲಿ ಸರ್ಕಾರ ಕೆಲಸ ಕೊಡುತ್ತದೆ ಎಂದು ಜನರು ಕಾದುಕೊಂಡಿದ್ದಾರೆ. ಸರ್ಕಾರ ನಮಗೆ ಇದೆ ಎನ್ನತಕ್ಕಂಥದ್ದರ ಕಡೆಗೆ ಜನರು ನಿರೀಕ್ಷಣೆ ಮಾಡುತ್ತಿದ್ದಾರೆ. ಆ ನಿರೀಕ್ಷೆಯ ಮೇರೆಗೆ ಕೆಲಸ ಕಾರ್ಯಗಳನ್ನು ನೀವು ಹಾಕಿಕೊಳ್ಳಬೇಕಾಗುತ್ತದೆ. ಆಗ ಮಾತ್ರ ಜನರ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಸಾಧ್ಯ ಆಗಬಹುದು. ಇವತ್ತು ಗುಲ್ಬರ್ಗದ ಜನತೆ ಬರಗಾಲದ ಕೆಲಸ ಕಾರ್ಯಗಳನ್ನು ಸರ್ಕಾರ ಕೈಗೊಳ್ಳಬಹುದು ಎಂದು ಇವತ್ತಿಗೂ ಕೂಡಾ ಅಲ್ಲಿ ನೆನೆಸುತ್ತಿದ್ದಾರೆ.

ಅಲ್ಲಿ ಈ ರೀತಿ ಬರಗಾಲ ಪರಿಸ್ಥಿತಿ ಪದೇ ಪದೇ ಬರುತ್ತಿದೆ ಎಂದು ಹೇಳುತ್ತೇನೆ. ನೀರಿನ ಕೊರತೆ ತೀವ್ರ ವಾಗಿ ಇದೆ ಎಂದು ಹೇಳುತ್ತಿದ್ದೇನೆ. ಎಲ್ಲಾ ಕಡೆ ನೀರನ್ನು ಒದಗಿಸಿಕೊಡಬೇಕಾಗುತ್ತದೆ. ಇವೊತ್ತು ಯಾವುದಾದರೂ ಒಂದು ಹೊಸ ಬೋರ್ ಹಾಕಬೇಕಾದರೆ ಜಿಲ್ಲಾ ಪರಿಷತ್‌ನವರು ಪ್ಲಾನ್ ಮಾಡಿ, ಅದನ್ನು ಸರ್ಕಾರಕ್ಕೆ ಕಳಿಸಿ ಅವರಿಂದ ಪರವಾನಗಿಯನ್ನು ಪಡೆಯಬೇಕಾಗಿದೆ. ಜಿಲ್ಲಾ ಪರಿಷತ್ ಅಧ್ಯಕ್ಷ ರಿಗೆ ಅವರು ಕೆಲಸ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಹಣ ಕೊಡಬೇಕು. ಮತ್ತು ಅಲ್ಲಿ ಅವರಿಗೆ ಅಧಿಕಾರ ಕೊಡಬೇಕು ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ನೀರಿನ ಕೊರತೆ ಇದೆಯೆಂದು ಹೇಳುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ ಪತ್ರಿಕೆ ಮೂಲಕ ರಾಜ್ಯದಲ್ಲಿ, ದೇಶದಲ್ಲಿರತಕ್ಕ ಜನರಿಗೆ ಹೇಳುವುದಕ್ಕೆ ಅವಕಾಶ ಇರಬೇಕು. ಸರ್ಕಾರ ಇಲ್ಲಿಯವರೆಗೆ ಮಾಡದೇ ಇರುವ ಅನೇಕ ಅಂಶಗಳ ಬಗ್ಗೆ ವಿಚಾರ ಮಾಡಲು ಏರ್ಪಾಡು ಮಾಡಬೇಕಾಗುತ್ತದೆ. ಕೇಂದ್ರ ಈ ರೀತಿಯಲ್ಲಿ ಕೆಲಸ ಕಾರ್ಯ ಗಳನ್ನು ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದಿಂದ ಹಣ ಬರಬೇಕಾಗಿದೆ ಅದು ಬರುತ್ತದೆ. ಶ್ರೀ ಭೂಪತಿಯವರು ಹೇಳಿದರು, ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಹಣ ಕಳಿಸಿಲ್ಲ ಎಂದು. ಈಗಾಗಲೇ ಕೇಂದ್ರ ಸರ್ಕಾರದವರು ಈ ಒಂದು ಜನತಾ ಸರ್ಕಾರ ಬಂದ ಮೇಲೆ ೧೫೦ ಕೋಟಿ ರೂಪಾಯಿಗಳನ್ನು ಬರ ನಿವಾರಣೆಗೆ ಕೊಟ್ಟಿದ್ದಾರೆ. ಆದರೆ ಇವೊತ್ತು ವಿಶೇಷವಾಗಿ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಅಧಿಕಾರ ಕೊಟ್ಟಿಲ್ಲ, ಸರ್ಕಾರದ ಕಾರ್ಯಕ್ರಮಗಳು ಜನರನ್ನು ಮುಟ್ಟಲು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗುತ್ತದೆ. ಇವೊತ್ತು ಬರಗಾಲದ ಬಗ್ಗೆ ಕೋಲಾಹಲ, ಹಾಹಾಕಾರ ಎದ್ದಿದೆ ಪ್ರಜಾಪ್ರಭುತ್ವದಲ್ಲಿ ಜನರಿಗೆ ಸೂಕ್ತ ಪರಿಹಾರ ಕೊಡತಕ್ಕಂಥಹ ವ್ಯವಸ್ಥೆ ಇರಬೇಕು. ಎಲ್ಲಾ ಜಿಲ್ಲಾ ಪರಿಷತ್ ಸದಸ್ಯರು ಅವರು ಕಾಂಗ್ರೆಸ್ ಇರಬಹುದು, ಜನತಾ ಇರಬಹುದು, ಈ ವಿಚಾರದಲ್ಲಿ ಒಂದು ನಿಷ್ಪಕ್ಷಪಾತವಾದ ರೀತಿಯಿಂದ ಕೆಲಸ ಮಾಡಬೇಕು ನನ್ನ ತಾಲ್ಲೂಕಿನ ನೆಲೋಗಿ ಯಿಂದ ೯ ಜನ ಆರಿಸಿ ಹೋಗಿದ್ದಾರೆ. ಅಲ್ಲಿ ಆಹಾರದ ವಿತರಣೆ ಸರಿಯಾಗಿ ಮಾಡಿಲ್ಲ. ಇದನ್ನು ಮಾಡ ಬೇಕಾಗಿದೆ. ಜಿಲ್ಲಾ ಪರಿಷತ್‌ನಲ್ಲಿ ಪ್ರತಿಯೊಬ್ಬರೂ ಇಂಡಿವಿಜುಯಲ್ ಆಗಿ ಬರಗಾಲದ ಬಗ್ಗೆ ಹೇಳಿ ಕೊಟ್ಟಿದ್ದಾರೆ. ಈ ಬಗ್ಗೆ ನಮ್ಮ ಪಕ್ಷದವರೂ, ನಿಮ್ಮ ಪಕ್ಷದವರೂ ಅಲ್ಲಿ ಸಾಕಷ್ಟು ಗಲಾಟೆ ಮಾಡಿ ದ್ದಾರೆ. ಇವೊತ್ತಿನ ದಿವಸ ಜಿಲ್ಲಾ ಪರಿಷತ್‌ನ ಅಧ್ಯಕ್ಷರು ಸಹ ಈ ಬಗ್ಗೆ ಮಾತನಾಡಿದ್ದಾರೆ. ಯಾರು

ಜನರಿಂದ ಆರಿಸಲ್ಪಟ್ಟಿದ್ದಾರೆ, ಅವರು ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು. ಆಹಾರದ ವಿತರಣೆ ಪ್ರಾಮಾಣಿಕವಾಗಿ ಆಗಬೇಕಾಗಿದೆ. ಎಲ್ಲಾ ಜನರಿಗೆಸರಿಯಾಗಿಸಿಕ್ಕಬೇಕು. ಇದರಬಗ್ಗೆ ಏನಾದರೂಸರಿಯಾಗಿ ನಡೆಯದಿದ್ದಲ್ಲಿ ಸರ್ಕಾರ ನಿಷ್ಪಕ್ಷಪಾತವಾಗಿ ತನಿಖೆ ಮಾಡಬೇಕು. ಇದರ ಬಗ್ಗೆ ಕ್ರಮಂತೆಗೆದುಕೊಳ್ಳಬೇಕು ಎಂಬ ಮಾತನ್ನು ಹೇಳುತ್ತಿದ್ದೇನೆ. ಇವೊತ್ತು ನೀರಿನ ಕೊರತೆ, ಆಹಾರ ಧಾನ್ಯದ ಕೊರತೆ, ಮೇವಿನ ಕೊರತೆ ಎದುರಿಸಲು ವಿಶೇಷವಾಗಿ ಕೆಲಸ ಮಾಡಬೇಕಾಗಿದೆ. ಸರ್ಕಾರ ೨೧೯ ಕೋಟಿ ರೂಪಾಯಿ ಕೇಂದ್ರದಿಂದ ಕೇಳಿದ್ದೀರಿ. ತಾವು ದೆಹಲಿಗೆ ಇದರ ವಿಷಯ ಚರ್ಚೆ ಮಾಡಲು ಹೋಗುತ್ತಿದ್ದೀರಿ. ಅಲ್ಲಿಂದ ಬಂದ ಮೇಲೆ ತಾವು ಬರ ಪರಿಹಾರ ಮಾಡುವ ಬಗ್ಗೆ ಜನರಿಗೆ ಏನು ಆಶ್ವಾಸನೆ ಕೊಟ್ಟಿದ್ದೀರಿ ಅದನ್ನು ಮಾಡಬೇಕು. ಆಹಾರ ಧಾನ್ಯಗಳನ್ನು ಬರಗಾಲ ಪ್ರದೇಶದ ಜನರಿಗೆ ನಿಜವಾಗಿ ಹಂಚುವ ವ್ಯವಸ್ಥೆಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ದೆಹಲಿಗೆ ಇವರು ಹೋದಾಗ ಬರಗಾಲದ ಬಗ್ಗೆ ಮಾತ ನಾಡುತ್ತಾರೋ ಅಥವಾ ಬೇರೆ ಮಾತು ಆಡುತ್ತಾರೋ. ಇವರು ದೆಹಲಿಗೆ ಹೋದರೆ ಬರಗಾಲದ ಬಗ್ಗೆ ಮಾತನಾಡುವುದು ಕಡಿಮೆ. ವಿರೋಧ ಪಕ್ಷದ ಬಗ್ಗೆ ಮಾತನಾಡುತ್ತಾರೆ ಹಾಗೂ ಅದರ ಬಗ್ಗೆ ಸ್ಟೇಟ್ ಮೆಂಟ್ ಕೊಟ್ಟು ಬರುತ್ತಾರೆ.

೪-೦೦ಪಿ. ಎಂ.

† ಶ್ರೀ ಬಾಬುರೆಡ್ಡಿ ವೆಂಕಪ್ಪ ತುಂಗಳ್ (ಬೀಳಗಿ).— ಸನ್ಮಾನ್ಯ ಅಧ್ಯಕ್ಷರೇ, ಪ್ರಸಕ್ತ ಅಭಾವ ಪರಿಸ್ಥಿತಿ ಕುರಿತು ಮಾನ್ಯ ಕಂದಾಯ ಮಂತ್ರಿಗಳು ಮುಂದನೆ ಮಾಡಿದಂಥ ಸೂಕ್ಷ್ಮವಾದ ವರದಿ ಈಗ ನಮ್ಮ ಮುಂದಿದೆ ಇದು ಕೇವಲ ಅಧಿಕಾರಿಗಳನ್ನೇ ನಂಬಿಕೊಂಡು ತಯಾರಿಸಿದಂಥ ವರದಿ ಎಂದು ನಾನು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಏಕೆಂದರೆ, ಯಾವಾಗಲೂ ಅಧಿಕಾರಿಗಳು ಕೊಡುವಂತಹ ವರದಿಗೂ ಮತ್ತು ಇರುವಂತಹ ವಾಸ್ತವಿಕತೆಗೂ ಬಹಳ ಅಜಗಜಾಂತರ ವ್ಯತ್ಯಾಸವಿರುತ್ತದೆ. ಈಗ ನಮ್ಮ ಮುಂದಿರುವ ವರದಿಯಲ್ಲಿ ನಮ್ಮ ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಂತೆ ಕೆಲವೊಂದು ವಿವರ ಗಳನ್ನು ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಒಟ್ಟು ೧೧ ತಾಲ್ಲೂಕ್‌ಗಳು ಇವೆ. ಈ ೧೧ ತಾಲ್ಲೂಕುಗಳ ಪೈಕಿ ಜಮಖಂಡಿ, ಬಾಗಲಕೋಟೆ, ಬೀಳಗಿ ಮತ್ತು ಮುಧೋಳ ತಾಲ್ಲೂಕ್‌ಗಳನ್ನು ಇಲ್ಲಿ ಕೈಬಿಟ್ಟಿ ದ್ದಾರೆ. ಈ ಮೂರು ತಾಲ್ಲೂಕ್‌ಗಳ ಕೆಲವು ಭಾಗಗಳಲ್ಲಿ ಯಾವುದೇ ನೀರಾವರಿ ಯೋಜನೆಗಳು ಇಲ್ಲ. ನಮ್ಮ ಭಾಗದ ಲೋಕಾಪುರ ಪಾಕೆಟ್‌ನಲ್ಲಿ ಸುಮಾರು ೩೫ ಹಳ್ಳಿಗಳು ಬರುತ್ತವೆ. ಅದೇ ರೀತಿ ಜಮಖಂಡಿ ತಾಲ್ಲೂಕ್‌ನಲ್ಲಿ ೩೩ ಹಳ್ಳಿಗಳು ಬರುತ್ತವೆ. ನನ್ನ ಕ್ಷೇತ್ರವಾದ ಬೀಳಗಿಯಲ್ಲಿ ೩೨ ಹಳ್ಳಿಗಳು ಬರುತ್ತವೆ. ನಮ್ಮ ಭಾಗದಲ್ಲಿರುವ ಭೂಮಿ ಹೆಚ್ಚಾಗಿ ಕಪ್ಪು ಬಣ್ಣದಿಂದ ಕೂಡಿದೆ. ನಮ್ಮ ಭಾಗದ ಅನೇಕ ಹಳ್ಳಿಗಳ ಜನರು ಕುಡಿಯುವ ನೀರಿಗಾಗಿ ಅಲೆದಾಡುತ್ತಿದ್ದಾರೆ, ಇಂತಹ ಒಂದು ಪರಿಸ್ಥಿತಿ ಇದ್ದರೂ ಸಹ ಅಲ್ಲಿನ ಅಧಿಕಾರಿಗಳು ಸರ್ಕಾರಕ್ಕೆ ಸರಿಯಾದ ಮಾಹಿತಿಯನ್ನು ಒದಗಿಸಿಲ್ಲ. ಸತ್ಯಸಂಗತಿ ಯನ್ನು ಮರೆಮಾಚಿರುವ ತಹ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಮಾನ್ಯ ಮಂತ್ರಿ ಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈ ಮೂರು ತಾಲ್ಲೂಕ್‌ಗಳಲ್ಲಿ ಬರುವಂತಹ ಹಳ್ಳಿಗಳ ಜನರಿಗೆ ಕುಡಿಯುವ ನೀರನ್ನು ಒದಗಿಸದಿದ್ದರೆ ಆ ಜನರು ನನ್ನ ಬಗ್ಗೆ ಶ್ರೀ ಜಿ.ಎಸ್. ಬಾಗಲಕೋಟೆ ಮತ್ತು ಶ್ರೀ ಜಮಖಂಡಿ ಅವರ ಬಗ್ಗೆ ಹಾಗೂ ಶ್ರೀ ಮಂಟೂರ್ ಅವರ ಬಗ್ಗೆ ಬೇರೆ ರೀತಿಯಿಂದ ಅರ್ಥ ಮಾಡಿಕೊಳ್ಳುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಅಧಿಕಾರಿಗಳ ವರದಿಯನ್ನು ಯಾವಾ ಗಲೂ ನಂಬಬಾರದು. ಈ ಮೂರು ತಾಲ್ಲೂಕ್‌ಗಳನ್ನು ಈ ವರದಿಯಲ್ಲಿ ಕೈಬಿಟ್ಟಿರುವುದನ್ನು ನೋಡಿ ದಾಗ ಅಧಿಕಾರಿಗಳು ಎಷ್ಟು ಬೇಜವಾಬ್ದಾರಿಯಿಂದ ಬರಗಾಲದ ಬಗ್ಗೆ ಅಧ್ಯಯನ ಮಾಡಿದ್ದಾರೆಂಬುದು ತಿಳಿದುಬರುತ್ತದೆ. ಇರತಕ್ಕಂಥ ವಾಸ್ತವಾಂಶವನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ವೆಂಬುದು ಇದರಿಂದಲೇ ಅರ್ಥವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಜುಲೈ ತಿಂಗಳ ಮೂರು ವಾರಗಳಲ್ಲಿ ಸಾಕಷ್ಟು ಮಳೆ ಆಯಿತು. ಆದರೆ ಈ ಮಳೆಯಿಂದ ಬಾವಿಗಳಿಗೆ ನೀರು ಬಂದಿಲ್ಲ ಹಿಂಗಾರು ಮಳೆ ಬಂದರೆ ಮಾತ್ರ ಬಾವಿಗಳಿಗೆ ನೀರು ಬರುತ್ತದೆ. ಈಗ ಅಲ್ಲಿ ಮತ್ತೆ ಬಿಸಿಲು ಬೀಳುತ್ತಿದೆ ಈ ಕಾರಣ ದಿಂದ ನಾನು ತಮ್ಮ ಮೂಲಕ ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಭಾಗದಲ್ಲಿ ಇನ್ನು ಮುಂದೆ ರಸ್ತೆಗಳ ಕೆಲಸವನ್ನು ಮಾಡಿಸುವುದನ್ನು ಬಿಟ್ಟು ಹಾಗೂ ಬೇರೆ ಇನ್ನಿತರ ಕೆಲಸಗಳನ್ನು ಮಾಡಿಸುವುದನ್ನು ಬಿಟ್ಟು ಅಲ್ಲಿರುವಂತಹ ಹಳ್ಳಿಗಳಿಗೆ ಭಂಡಾರಗಳನ್ನು

ಕೊಟ್ಟಿಸಿಕೊಡಬೇಕು. ಜುಲೈ ತಿಂಗಳಲ್ಲಿ ಬಂದ ಮಳೆ ನೀರೆಲ್ಲಾ ಹರಿದು ಹೋಯಿತು. ಅಲ್ಲಿ ಭಂಡಾರಗಳನ್ನು ಕಟ್ಟಿಸದಿರುವ ಕಾರಣ ಜಲಸಂಪತ್ತೆಲ್ಲ ಹಾಳಾಯಿತು ಅಮೂಲ್ಯವಾದಂಥ ಜಲಸಂಪತ್ತನ್ನು ಉಪಯೋಗಿಸಿಕೊಳ್ಳುವಂತಹ ಕೆಲಸವನ್ನು ಇಲ್ಲಿಯವರೆಗೆ ಮಾಡಲಿಲ್ಲ. ಇದರ ಕಡೆಗೆ ಈಗಲಾದರೂ ನಮ್ಮ ಅಧಿಕಾರಿಗಳು ಮತ್ತು ಸರ್ಕಾರ ಗಮನ ಕೊಡಬೇಕು ನಾನು ನನ್ನ ಕ್ಷೇತ್ರದಲ್ಲಿ ನೀರಾವರಿ ಕಾಮಗಾರಿಗಳನ್ನು ಕೈಕೊಳ್ಳಬೇಕೆಂದು ಮಾನ್ಯ ಕಂದಾಯ ಮಂತ್ರಿಗಳ ಹತ್ತಿರ ಹಾಗೂ ಮಾನ್ಯ ನೀರಾವರಿ ಮಂತ್ರಿಗಳ ಹತ್ತಿರ ಕೇಳಿಕೊಂಡಾಗ ಶ್ರೀಮಾನ್ ಜತ್ತಿ ಅವರ ಊರಾದ ಸಾವಳಗಿ ಹತ್ತಿರ ೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ನಾಲ್ಕು ಭಂಡಾರಗಳನ್ನು ಕಟ್ಟಿಸಿಕೊಟ್ಟರು. ಈಗ ಪ್ರತಿ ಭಂಡಾರದ ಹತ್ತಿರವೂ ಒಂದೊಂದು ಕಿಲೋ ಮೀಟರ್‌ವರೆಗೆ ಮಳೆಯ ನೀರು ನಿಂತಿದೆ. ಕೇವಲ ಒಂದು ಲಕ್ಷ ರೂಪಾಯಿ ವೆಚ್ಚದಲ್ಲಿ ೩ ತಿಂಗಳ ಅವಧಿಯಲ್ಲಿ ಈ ಭಂಡಾರಗಳನ್ನು ಕಟ್ಟಬಹುದು. ಇದರಿಂದ ನೂರಾರು ನೀರಾವರಿ ಬಾವಿಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಇಂತಹ ಕಾಮಗಾರಿ ಕೆಲಸವನ್ನು ಏತಕ್ಕೆ ಕೈಗೊಳ್ಳಬಾರದು? ನಮ್ಮ ಜಿಲ್ಲೆಯಲ್ಲಿ ಒಟ್ಟು ೫ ನದಿಗಳಿವೆ. ಆದರೂ ನಮ್ಮ ಬಿಜಾಪುರ ಜಿಲ್ಲೆ ಬರಪೀಡಿತ ಜಿಲ್ಲೆ ಎಂದು ಹೆಸರು ಪಡೆದಿದೆ. ನಮಗೆ ಸ್ವಾತಂತ್ರ್ಯ ಬಂದು ೪೦ ವರ್ಷಗಳಾದ ಮೇಲೂ ಸಹ ನಮ್ಮಲ್ಲಿ ಬರಗಾಲ ಬರುವುದು ತಪ್ಪಲಿಲ್ಲ. ಕೋಲಾರ ಜಿಲ್ಲೆಯ ಮಾತು ಬೇರೆ ಚಿತ್ರದುರ್ಗ ಜಿಲ್ಲೆಯ ಮಾತು ಬೇರೆ ಹಾಗೂ ಬೇರೆ ಬೇರೆ ಜಿಲೆಗಳ ಮಾತು ಬೇರೆಬೇರೆ. ಇದ್ದಂಥ ಅಮೂಲ್ಯವಾದ ಜಲಸಂಪತ್ತನ್ನು ಉಪಯೋಗಿಸಿಕೊಂಡು ರೈತರ ಹೊಲಗಳಿಗೆ ನೀರನ್ನು ಒದಗಿಸುವಂತಹ ಕೆಲಸವನ್ನು ಮಾಡಲಿಲ್ಲ. ಆದುದರಿಂದ ನಾನು ನನ್ನ ಕ್ಷೇತ್ರದಲ್ಲಿ ಒಂದು ಪ್ರಯತ್ನ ಮಾಡಿದೆ. ಸರ್ಕಾರದ ದಾರಿ ನೋಡಿ ನೋಡಿ ಸಾಕಾಗಿ ಒಂದು ನಿರ್ಣಯಕ್ಕೆ ಬಂದಿದ್ದೇವೆ. ಅಲ್ಲಿನ ರೈತರೇ ಸೇರಿ ಕೃಷ್ಣ ರೈತಾಪಿ ಸಂಘ ಎಂದು ಮಾಡಿಕೊಂಡು ಒಂದು ವರ್ಷದ ಅವಧಿಯಲ್ಲಿ ಒಂದು ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡಿ ಕೃಷ್ಣ ನದಿಗೆ ಅಡ್ಡವಾಗಿ ಒಂದು ಬ್ಯಾರೇಜ್ ಕಟ್ಟಬೇಕು ಎಂದು ಇಡೀ ಭಾರತ ದೇಶದಲ್ಲೇ ಮೊದಲನೇ ಪ್ರಯೋಗವಾಗಿ ಮಾಡಿದ್ದೇವೆ ನಿಮ್ಮ ದುಡ್ಡು ಬೇಡ, ಏನೂ ಬೇಡ, ನಿಮ್ಮಿಂದ ಒಂದು ನಯಾ ಪೈಸೆ ಬೇಡ, ತಾಂತ್ರಿಕ ಮಾರ್ಗದರ್ಶನವಾದರೂ ಮಾಡಿ ಅಂದರೆ ಅಧಿಕಾರಿಗಳು ತಾಂತ್ರಿಕ ಮಾರ್ಗದರ್ಶನ ಮಾಡಲಿಕ್ಕೆ ತಯಾರಿಲ್ಲ ಅಂದರೆ. ಅಧಿಕಾರಶಾಹಿಗಳು ಬೇಜವಾಬ್ದಾರಿತನದಿಂದ ವರ್ತನೆ ಮಾಡುತ್ತಾರೆ ಎಂದು ಬಹಳ ವಿಷಾದದಿಂದ ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಬೊಮ್ಮಾಯಿಯವರು ಎರಡು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಒಂದು ಕಡೆ ಬರಗಾಲ ಕಾಮಗಾರಿಗೆ ೭ ಕೋಟಿ ಬಿಡುಗಡೆ ಮಾಡಿದೆ ಎಂದು ಹೇಳಿದ್ದಾರೆ, ಈ ಹಿಂದೆ ೮ ಕೋಟಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿಕೆ ಕೊಟ್ಟಿದ್ದಾರೆ ನಮ್ಮ ಊರಿನ ಜಿಲ್ಲ ಪರಿಷತ್ತಿನಲ್ಲಿ, ಮಂಡಲ ಪಂಚಾಯಿತಿಯಲ್ಲಿ ಕೇಳಿದರೆ ಬಚ್ಚಲುಕುಂಟೆ ತೋಡುವಂಥ ಕೆಲಸವೂ ಆಗಿಲ್ಲ ಜಿಲ್ಲಾ ಪರಿಷತ್ತಿನಲ್ಲಿ ಸ್ಟಾಫ್ ಇಲ್ಲ ಮಾನ್ಯ ಬೊಮ್ಮಾಯಿಯವರು ಸ್ಟೇಟ್‌ಮೆಂಟ್ ತೆಗೆದುಕೊಂಡು ಜಿಲ್ಲಾ ಪರಿಷತ್ತಿಗೆ ಹೋದರೆ ಬರಗಾಲದ ಬಿಸಿ ತಿಳಿಯಲಾರದಂಥ ಮುಖ್ಯ ಕಾರ್ಯದರ್ಶಿಗಳು ಇದ್ದಾರೆ, ಬರಗಾಲದ ಜನರ ಬವಣೆ ಅವರಿಗೆ ತಿಳಿಯುವುದಿಲ್ಲ. ಅವರು ಉತ್ತರ ಪ್ರದೇಶದಿಂದ ಬಂದವರು. ಬರಗಾಲದ ಕಾಮಗಾರಿ ಬಗ್ಗೆ ಅವರನ್ನು ಕೇಳಿದರೆ ಬರಗಾಲ ಕ್ಯಾ ಹೈ, ಕಾಮಗಾರಿ ಕ್ಯಾ ಹೈ ಎಂದು ಕೇಳುತ್ತಾರೆ. ಅಂತಹ ಮುಖ್ಯಾಧಿಕಾರಿಗಳು ನಮ್ಮಲ್ಲಿದ್ದಾರೆ. ಸರ್ಕಾರದಿಂದ ಬಿಡುಗಡೆಯಾದಂಥ ದುಡ್ಡು, ಬೆಂಗಳೂರಿನ ವಿಧಾನಸೌಧದಿಂದ ಹೊರಬಿದ್ದಂಥ ದುಡ್ಡು ಮಂಡಲ ಪಂಚಾಯಿತಿಗೆ ಬಂದು ನಿಂತಿಲ್ಲ. ಹೀಗಾಗಿ ನಾವು ಜನರ ಪ್ರತಿಭಟನೆಗೆ ಹೆದರಿ ಬೆಂಗಳೂರಿನಲ್ಲಿ ಕೂರುವಂಥ ಪ್ರಸಂಗ ಬಂದಿದೆ, ನಾವು ಹಳ್ಳಿಯೊಳಗೆ ಹೋಗುವಂಥ ಪ್ರಸಂಗ ಇಲ್ಲ ಜಿಲ್ಲಾ ಪರಿಷತ್ತಿನಲ್ಲಿ ಕೇಳಿದರೆ ನೀವು ರೊಕ್ಕ ಕೊಟ್ಟಿರಬಹುದು. ರೊಕ್ಕ ಬಂದಿರಬಹುದು, ಬೊಮ್ಮಾಯಿಯವರು ಹೇಳಿಕೆಯಿಂದ ರೊಕ್ಕ ಬಂದಿರಬಹುದು, ಆದರೆ ನಮ್ಮಲ್ಲಿ ಸ್ಟಾಫ್ ಇಲ್ಲ ಎಂದು ಹೇಳುತ್ತಾರೆ ಯಾವ ಮಂಡಲ ಪಂಚಾಯಿತಿಯಲ್ಲೂ ಸನಿಕೆ ಇಲ್ಲ, ಗುದ್ದಲಿ ಇಲ್ಲ, ಇಂಜಿನಿಯರ್ಸ್ ಇಲ್ಲ ಬೋರ್‌ವೆಲ್ ಇದ್ದರೆ ಪಂಪ್ ಇಲ್ಲ. ಪಂಪ್ ಇದ್ದರೆ ವಿದ್ಯುಚ್ಛಕ್ತಿ ಇಲ್ಲ. ಹಲವಾರು ಕಡೆಗಳಲ್ಲಿ ಈ ಪರಿಸ್ಥಿತಿ ಇದೆ. ಅಧಿಕಾರಿಗಳು ಇಷ್ಟು ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆ ಎಂದು ವರದಿ ಕೊಡುತ್ತಾರೆ. ಬಿಜಾಪುರದಲ್ಲಿ ೧೨ ಹಳ್ಳಿಗಳು ಮಾತ್ರ ಬರಗಾಲಕ್ಕೆ ತುತ್ತಾಗಿವೆ ಎಂದು ವರದಿ ಕೊಟ್ಟರೆ ಅದು ಸರಿಯೇ ಅಲ್ಲಿ ೪೫೦ ಹಳ್ಳಿಗಳು ಬರಗಾಲಕ್ಕೆ ತುತ್ತಾಗಿದೆ. ಅಧಿಕಾರಿಗಳು ವಾಸ್ತವಿಕತೆಯನ್ನು ದೂರ ಮಾಡಿ, ಜನರನ್ನು ವಂಚನೆ ಮಾಡುವಂಥ ಮತ್ತು ಜನರ ಪ್ರತಿನಿಧಿಗಳಾದ ನಮ್ಮನ್ನು ವಂಚನೆ ಮಾಡುವಂಥ ವರದಿಗಳನ್ನು ಕೊಡುತ್ತಾರೆ

ಇಂತಹ ಅಧಿಕಾರಿಗಳ ಮೇಲೆ ಅತ್ಯಂತ ಉಗ್ರವಾದಂಥ ಕ್ರಮ ತೆಗೆದುಕೊಳ್ಳಬೇಕು. ಕೆಲವರು ಅಧಿಕಾರಿಗಳು ಇರುತ್ತಾರೆ, ಅವರ ಬಗ್ಗೆ ನಾವು ಹೊಸದಾಗಿ ಹೇಳಬೇಕಾಗಿಲ್ಲ. ಕೆಲವು ಅಧಿಕಾರಿಗಳಿಗೆ ಬರಗಾಲ ಬಂತು ಅಂದರೆ ಒಂದು ತರಹ ಸುಗ್ಗಿ, ಅವರು ಅಭಿಮಾನದಿಂದ ಹೇಳುತ್ತಾರೆ. ಈ ಸಲ ನನ್ನ ಹೆಂಡತಿ ಕೊರಳಿಗೆ ೧೦ ತೊಲ ಬಂಗಾರ ಹಾಕಿದೆ, ಎಂದು. ಬರಗಾಲ ಕಾಮಗಾರಿ ಬಂದರೆ ಅವರಿಗೆ ಛಾನ್ಸ್. ೧೦ ತೊಲ ಬಂಗಾರ ಕೊಂಡು ಹೆಂಡತಿ ಕೊರಳಿಗೆ ಹಾಕಿದೆ ಎಂದು ಹೆಗ್ಗಳಿಕೆಯಿಂದ ಹೇಳುವಂಥ ಅಧಿಕಾರಿಗಳಿದ್ದಾರೆ. ಸರ್ಕಾರ ದುಡ್ಡು ಖರ್ಚು ಮಾಡುತ್ತದೆ. ಎಷ್ಟು ಹಣ ಖರ್ಚು ಮಾಡಿದರೂ ಕೂಡ ಪ್ರಯೋಜನ ಆಗುತ್ತಾ ಇಲ್ಲ. ಬರಗಾಲದಲ್ಲಿ ಪ್ರಯೋಜನಕ್ಕೆ ಬರುವಂಥ ಸಣ್ಣ ಸಣ್ಣ ಭಂಡಾರಗಳನ್ನು ಕಟ್ಟಲಿ, ಕೆರೆಗಳ ಹೂಳನ್ನು ತೆಗೆಯಲಿ, ಅಲ್ಲಲ್ಲಿ ಬ್ಯಾರೇಜುಗಳನ್ನು ಕಟ್ಟುವಂಥ ಕೆಲಸ ಮಾಡಿದರೆ ಮುಂದಿನ ಬರಗಾಲವನ್ನು ಎದುರಿಸಲಿಕ್ಕೆ ಸಾಧ್ಯವಾಗುತ್ತದೆ. ಈ ವರ್ಷ ಬರಗಾಲ ಕಾಮಗಾರಿಗಳನ್ನು ಮಾಡುತ್ತೇವೆ, ಅಷ್ಟೋ ಇಷ್ಟೋ ಆಗುತ್ತದೆ. ಆದರೆ ನಮ್ಮ ರೈತರಿಗೆ ಉಪಯೋಗವಾಗುವಂಥ ಕೆಲಸಗಳು ಆಗುವುದಿಲ್ಲ. ಆದ್ದರಿಂದ ಈ ಒಂದು ವಾಸ್ತವಿಕತೆಯನ್ನು ಮುಂದಿಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಯವರು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಬರಗಾಲ ಕಾಮಗಾರಿಗಳಲ್ಲಿ ಅಧಿಕಾರಿಗಳು ಏನಾದರೂ ಮಾಡಲಿಕ್ಕೆ ಹೋದರೆ, ತಾವು ಮುಲಾಜು ನೋಡದೆ ಬರಗಾಲ ಕಾಮಗಾರಿಗಳಲ್ಲಿ ಯಾರು ಭ್ರಷ್ಟಾಚಾರ ಮಾಡುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಯಾರಾದರೂ ಕೊಲೆ ಮಾಡಿದರೆ ಬಿಟ್ಟುಬಿಡಿ, ಆದರೆ, ಬರಗಾಲ ಕಾಮಗಾರಿಗಳಲ್ಲಿ ಯಾವ ಅಧಿಕಾರಿ ಭ್ರಷ್ಟಾಚಾರ ಮಾಡುತ್ತಾನೆ, ಮೋಸ ಮಾಡುತ್ತಾರೆ ಅಂಥ ಅಧಿಕಾರಿಗಳನ್ನು ನಿರ್ದಾಕ್ಷಿಣ್ಯವಾಗಿ ಅವರಿಗೆ ಎಷ್ಟೇ ಪ್ರಭಾವ ಇರಲಿ, ಅಂಥವರಿಗೆ ಕೊಲೆಗಡುಕರಿಗೆ ಕೊಡತಕ್ಕಂಥ ಕಠಿಣ ಶಿಕ್ಷೆಯನ್ನು ಕೊಡಬೇಕು ಇವತ್ತು ಬರಗಾಲ ಕಾಮಗಾರಿಗಳ ವಿಚಾರದಲ್ಲಿ ಎರಡೂ ಕಡೆಯ ಸದಸ್ಯರುಗಳು ಪಕ್ಷ ಭೇದ ಮರೆತು ಅದನ್ನು ಎದುರಿಸುವುದಕ್ಕೆ ಸನ್ನದ್ಧರಾಗಬೇಕು ಮಾನವೀಯ ದೃಷ್ಟಿಯಿಂದ ಬರಗಾಲವನ್ನು ಎದುರಿಸುವುದಕ್ಕೆ ನಿಶ್ಚಿತವಾದಂಥ ಹಾಗೂ ನಿಗದಿತವಾದ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿಕೊಳ್ಳಬೇಕೆಂದು ಕೇಳಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೆ, ಬಹಳಷ್ಟು ಜನ ಮಾನ್ಯ ಸದಸ್ಯರುಗಳು ಬರಗಾಲದ ಬವಣೆಯನ್ನು ತಮ್ಮದೇ ಆದಂಥ ಭಾಷೆಯಲ್ಲಿ, ದಾಟಿಯಲ್ಲಿ ಹಾಗೂ ಶೈಲಿಯಲ್ಲಿ ಸರ್ಕಾರದ ಮುಂದಿಟ್ಟಿದ್ದಾರೆ. ಅವರ ಭಾವನೆಗಳ ತೀಕ್ಷ್ಣತೆಯನ್ನು, ವಾಸ್ತವಾಂಶಗಳನ್ನು ಸರ್ಕಾರದ ಮಂತ್ರಿಗಳಾಗಲೀ, ಜವಾಬ್ದಾರಿ ಹೊತ್ತತಂಥ ಅಧಿಕಾರಿಗಳಾಗಲೀ, ಅಥವಾ ಇತರೆ ಜವಾಬ್ದಾರಿ ಇರತಕ್ಕ ವ್ಯಕ್ತಿಗಳಾಗಲೀ ಅಷ್ಟೊಂದು ಗಂಭೀರವಾಗಿ ಪರಿಗಣಿಸಿದ್ದಾರೆಯೇ ಎನ್ನುವುದರ ಬಗ್ಗೆ ನನಗೆ ಅನುಮಾನ ಇದೆ. ಈ ಸರ್ಕಾರಕ್ಕೆ ಬರಗಾಲ ಎಂದರೆ ಒಂದು ರೀತಿಯ ರೂಢಿಯಾಗಿದೆ. ನಾವು ಅಧಿಕಾರಕ್ಕೆ ಬರುವಾಗ ನಮ್ಮ ಜೊತೆಯಲ್ಲಿ ಬರಗಾಲ ಬಂದಿದೆ ಇದೊಂದು ರೀತಿಯ ಶಾಪ ಎನ್ನುವ ಭಾವನೆ ಅವರ ಮನಸ್ಸಿನಲ್ಲಿ ಬೇರೂರಿದೆ. ಇದರ ಒಂದು ತೀಕ್ಷ್ಣತೆಯಿಂದ ಗ್ರಾಮಾಂತರ ಪ್ರದೇಶದ ಜನರು ಎಂಥ ಕಷ್ಟಕ್ಕೆ ಒಳಗಾಗಿದ್ದಾರೆ ದೊಡ್ಡ ರೈತರ ಕಷ್ಟ ಯಾವ ರೂಪದ್ದು, ಸಣ್ಣ ರೈತರ ಕಷ್ಟ ಯಾವ ಸ್ವರೂಪದ್ದು ದಿನನಿತ್ಯ ಕೂಲಿ ಮಾಡತಕ್ಕ ಜನರ ಕಷ್ಟ ಯಾವ ಸ್ವರೂಪದ್ದು, ಇವೆಲ್ಲವನ್ನೂ ಒಟ್ಟು ಸೇರಿಸಿ ಸಾಮೂಹಿಕವಾಗಿ ಸೈದ್ಧಾಂತಿಕವಾಗಿ, ವೈಜ್ಞಾನಿಕ ದೃಷ್ಟಿಕೋನದಿಂದ ಈ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಬೇಕು ಎನ್ನುವ ವ್ಯವಧಾನ, ಸಮಾಧಾನ ಯಾವ ಮಂತ್ರಿಗಳಿಗೂ ಇದ್ದ ಹಾಗೆ ಕಾಣುವುದಿಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರು ಒಂದು ಮಾತನ್ನು ಹೇಳಿದರು. ಇಲ್ಲಿ ಮಂತ್ರಿಗಳು ಇಲ್ಲ, ಅಧಿಕಾರಿಗಳು ಇಲ್ಲ ಎಂದು ಹೇಳಿದಾಗ, ಈ ಸಭೆಯ ಗೌರವಾನ್ವಿತ ಸದಸ್ಯರುಗಳು ತಮ್ಮ ತಮ್ಮ ಕ್ಷೇತ್ರದ ಜನರ ಸಮಸ್ಯೆಗಳನ್ನು, ಜಿಲ್ಲೆಯ ಹಾಗೂ ರಾಜ್ಯದ ಸಮಸ್ಯೆಗಳನ್ನು, ಬರಗಾಲದ ವಿಚಾರಗಳನ್ನು ಸದನದ ಮುಂದೆ ಗಂಭೀರವಾಗಿ ಇಡುತ್ತಿದ್ದಾರೆ ಎಂದರೆ ಅದನ್ನು ಕೇಳುವುದಕ್ಕೆ ಮಂತ್ರಿಗಳು ಬೇಕಿಲ್ಲ, ಅಧಿಕಾರಿಗಳು ಬೇಕಿಲ್ಲ ನೀವು ಹೇಳುವುದನ್ನು ಹೇಳಿಬಿಡಿ. ಶಂಖ ಊದಿಬಿಡಿ ಎಂದು ಹೇಳಿದ್ದಾರೆ. ಯಾವುದೇ ರೀತಿಯ ಪಾಂಚಜನ್ಯ ಶಂಖ ಮೊಳಗಿಸಿದರೂ ಸರ್ಕಾರ ಕಿವುಡಾಗಿದೆ, ಈ ಸರ್ಕಾರಕ್ಕೆ ಮಂತ್ರಿಗಳಿಗೆ ಕಾಳಜಿ ಇಲ್ಲ ಜವಾಬ್ದಾರಿ ಇಲ್ಲವೆಂದು ಅನೇಕ ಜನ ಸದಸ್ಯರು ಹೇಳಿದ್ದಾರೆ. ಕಳೆದ ೩–೪ ವರ್ಷಗಳಿಂದ ಸತತವಾಗಿ ಬರಗಾಲದ ಬಗ್ಗೆ ಈ ಸರ್ಕಾರಕ್ಕೆ ಮತ್ತು ಇದೇ ಮಂತ್ರಿಗಳಿಗೆ ಹೇಳಿ ಹೇಳಿ ಸಾಕಾಗಿದೆ. ಸರ್ಕಾರ ಜಡ್ಡು ಹತ್ತಿ ಹೋಗಿದೆ ಸರ್ಕಾರಕ್ಕೆ ಕಾಳಜಿಯಾಗಲೀ ಚಿಂತನೆ ಮಾಡತಕ್ಕ ಶಕ್ತಿಯಾಗಲೀ ಕುಂದಿ ಹೋಗಿದೆ. ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಹಣ ಇಲ್ಲ,

ಸಂಪೂರ್ಣವಾಗಿ ಪಾಪರ್ ಆಗಿ ಹೋಗಿದೆ. ಮಂತ್ರಿಗಳೆಲ್ಲಾ ಕೈಕಟ್ಟಿ ಕೂತಿದ್ದಾರೆ ನನಗನ್ನಿಸುತ್ತದೆ. ಜನರ ಸಮಸ್ಯೆಗಳನ್ನು ಅಧ್ಯಯನ ಮಾಡಿಕೊಂಡು ಬಂದು. ಈ ಸಭೆಯಲ್ಲಿ ಹೇಳಿಬಿಟ್ಟರೆ ಸರ್ಕಾರದಿಂದ ಪರಿಹಾರ ಸಿಗುತ್ತದೆ. ಸದನದಲ್ಲಿ ಸರ್ಕಾರದಿಂದ ಉತ್ತರ ಸಿಕ್ಕಿಬಿಡುತ್ತದೆ. ಅದರಿಂದ ಒಂದು ಸಮಾಧಾನ ಕೂಡ ಬರಬಹುದು ಎನ್ನುವುದು ಕೇವಲ ಭ್ರಮೆಯಾಗಿ ಉಳಿಯುತ್ತದೆ. ಇದು ಸತ್ಯ ಕೂಡ ಎಂದ ನನಗನ್ನಿಸುತ್ತದೆ. ಇಲ್ಲಿ ಮಾತನಾಡಿದ್ದನ್ನು ಕೇಳಿಕೊಂಡು ಕೆಲಸ ಮಾಡತಕ್ಕಂಥವರು ಖಂಡಿತವಾಗಿಯೂ ಇಲ್ಲ ಇಲ್ಲಿ ಮಾತನಾಡಿದಂಥ ಸದಸ್ಯರುಗಳ ಭಾವನೆಗಳಿಗೆ ಸ್ಪಂದಿಸತಕ್ಕಂಥ ಮನೋಭಾವ ಯಾರಿಗೂ ಇಲ್ಲ, ಅದು ಹೊರಟು ಹೋಗಿದೆ ಆದರೂ ಕೂಡ ನಾವು ಹೇಳುವುದನ್ನು ಹೇಳಬೇಕು, ಅದೂ ಕೂಡ ನಮ್ಮ ಜವಾಬ್ದಾರಿ ಎನ್ನುವ ದೃಷ್ಟಿಕೋನದಿಂದ, ಮಲೆನಾಡು ಪ್ರದೇಶದ ಭೂಭಾಗ ಮತ್ತು ಆ ಜನರ ಅನಿಸಿಕೆಗಳನ್ನು ಈ ಸದನದಲ್ಲಿ ಇಡಬೇಕೆಂದು ಭಾವಿಸುತ್ತೇನೆ. ಮಲೆನಾಡು ಜನರಿಗೆ ಬರ ಅಂದರೆ ಕ್ಷಾಮ ಎನ್ನುವುದು ಗೊತ್ತಿರಲಿಲ್ಲ, ಅವರಿಗೆ ಇದು ಯಾವರೀತಿ ಇರುತ್ತದೆ ಎನ್ನುವ ಕಲ್ಪನೆಯೂ ಕೂಡ ಇರಲಿಲ್ಲ. ಬಯಲು ಪ್ರದೇಶದ ಜನರು ಆ ಕಡೆಯಿಂದ ಈ ಕಡೆಗೆ ಬಂದಿದ್ದಾರೆ ಎನ್ನುವ ಭಾವನೆ ಇತ್ತು ನಮಗೆ ಕ್ಷಾಮದ ಭಾವನೆಯು ಅರಿವು ಆಗಿರಲಿಲ್ಲ. ಇವರ ಸರ್ಕಾರ ಯಾವಾಗ ಪ್ರಾರಂಭವಾಯಿತೋ ಆವೊತ್ತಿನಿಂದಲೇ ಈ ಬರ ಪ್ರಾರಂಭವಾಯಿತು. ಇವೊತ್ತು ಏನಾಗಿದೆ, ಕ್ಷಾಮ ದೇವತೆ ಬಯಲು ಪ್ರದೇಶವನ್ನು ದಾಟಿ ಮಲೆನಾಡು ಪ್ರದೇಶಕ್ಕೆ ಬಂದಿದ್ದಾಳೆ.

ಶ್ರೀ. ಎ. ಲಕ್ಷ್ಮೀಸಾಗರ್ —ಅಧ್ಯಕ್ಷರೆ. ರಾಜಸ್ಥಾನ. ಗುಜರಾತ್, ಮಹಾರಾಷ್ಟ್ರದಲ್ಲಿಯೂ ಕೂಡ ಬರ ಇದೆ. ಅಲ್ಲಿಯೂ ಕೂಡ ಮೊದಲಿನಿಂದಲೂ ಇದೆ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೆ ಮಾನ್ಯ ಮಂತ್ರಿಗಳು ರಾಜಸ್ಥಾನದಲ್ಲಿ ಬರ ಇದೆ ಎಂದು ಹೇಳಿದರು. ಆದಕ್ಕೆ ಒಂದು ಕಾರಣ ನಮ್ಮ ಮುಖ್ಯ ಮಂತ್ರಿಗಳು ಏನು ಮಾಡಿದರು ಅಂದರೆ ಮೊದಲು ಕರ್ನಾಟಕದಲ್ಲಿ ರಾಜಕಾರಣ ಮಾಡುತ್ತೇನೆಂದು ಹೇಳಿ ಇಲ್ಲಿ ಇದ್ದವರು, ನಾನು ದೇಶ ಮಟ್ಟದಲ್ಲಿ ರಾಜಕಾರಣ ಮಾಡಬೇಕು, ಡೆಲ್ಲಿಗೆ ಹೋಗುತ್ತೇನೆ ಎಂದು ಹೇಳಿರುವುದರಿಂದ ಆ ಪ್ರಕೃತಿ ಅದಕ್ಕೆ ಮಣಿದು ರಾಜಸ್ಥಾನ ಮುಂತಾದ ಕಡೆಗಳಲ್ಲಿ ಬರ ಬಂದಿದೆ. ನಾನು ಮಾನ್ಯ ಹೆಗಡೆಯವರಿಗೆ ಹೇಳುವುದಿಲ್ಲ, ಜನತಾ ಪಕ್ಷದ ಜಾತಕಕ್ಕೆ ಬರ ಹಿಡಿದಿದೆ. ಅದನ್ನು ಅವರು ತೆಗೆಸಿಕೊಳ್ಳಬೇಕು.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ರಾಜ್ಯದಲ್ಲಿ ನಾಲ್ಕು ವರ್ಷದಿಂದ ಬರಗಾಲ ಇದೆ, ಇವರ ಆಡಳಿತ ಏನಾದರೂ ಇದು ಇದ್ದಿದ್ದರೆ, ಇಷ್ಟು ಹೊತ್ತಿಗೆ ಜನರಿಂದ ಹೊಡೆಸಿಕೊಂಡು ಓಡುತ್ತಿದ್ದರು.

(ಗೊಂದಲ)

ಅಧ್ಯಕ್ಷರು — ಮಾನ್ಯ ಸದಸ್ಯರಾದ ತಿಂಗಳ್ ಅವರು ಎಷ್ಟು ಸೀರಿಯಸ್ ಆಗಿ ಹೇಳಿದರು. ಆ ತರಹ ತಾವು ಹೇಳಬೇಕು. ಈಗ ರತ್ನಾಕರ್ ಅವರು ತಮ್ಮ ಭಾಷಣ ಪ್ರಾರಂಭ ಮಾಡಬೇಕು.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೆ, ಇವರು ಇಲ್ಲಿಯೇ ಮೌಲ್ಯಾಧಾರದ ರಾಜಕೀಯ ಮಾಡಿದರೆ ಸಾಕು. ಉತ್ತರ ಪ್ರದೇಶಕ್ಕೆ ಹೋಗಿ ಮಾಡುವಂಥಾದ್ದು ಏನೂ ಇಲ್ಲ

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು

ಶ್ರೀ ಪಟಮಕ್ಕಿ ರತ್ನಾಕರ್ —ಸನ್ಮಾನ್ಯ ಅಧ್ಯಕ್ಷರೆ, ನಾನು ಯಾವುದೇ ಮಂತ್ರಿಗಳಿಗಾಗಲಿ, ಅಥವಾ ಸದಸ್ಯರಿಗಾಗಲಿ ಟೀಕೆ ಮಾಡಬೇಕು ಅಥವಾ ಅವರ ಮನಸ್ಸನ್ನು ನೋಯಿಸಬೇಕೆಂದು ಯಾವುದೇ ದೃಷ್ಟಿಕೋನದಿಂದ ಈ ಮಾತನ್ನು ಆಡಲಿಲ್ಲ. ಅಧ್ಯಕ್ಷರಾಗಿರತಕ್ಕ ತಮ್ಮ ಗಮನಕ್ಕೆ ಈ ವಿಚಾರಗಳನ್ನು ತಂದು ನನ್ನ ಕರ್ತವ್ಯವನ್ನು ಮಾಡಬೇಕೆಂದು ಭಾವಿಸಿ ತಮ್ಮ ಮುಂದೆ ಕೆಲವು ವಿಚಾರಗಳನ್ನು ಇಡುತ್ತಿದ್ದೇನೆ. ಈ ಬರವನ್ನು ಎದುರಿಸಬೇಕಾದರೆ ಕ್ರೋಢೀಕೃತ ಸಂಪನ್ಮೂಲ ಅಗತ್ಯ ಸಹ ಇರುತ್ತದೆ. ಸರ್ಕಾರ ಆ ನಿಟ್ಟಿನಲ್ಲಿ ಸಂಪನ್ಮೂಲ ಸಂಗ್ರಹಣೆ ಮಾಡತಕ್ಕದ್ದು. ಸಂಗ್ರಹಣೆ ಮಾಡಿರತಕ್ಕ ಸಂಪನ್ಮೂಲಗಳನ್ನು. ಅದು ರಾಜ್ಯ ಮಟ್ಟದಲ್ಲಿರಲಿ ಅಥವಾ ಕೇಂದ್ರ ಮಟ್ಟದಲ್ಲಿರಲಿ,

ಅದನ್ನು ಕ್ರೋಢೀಕರಿಸಿ ವ್ಯವಸ್ಥಿತವಾಗಿ ಯಾವ ಜನರು ಕ್ಷಾಮದ ದವಡೆಯಲ್ಲಿ ಸಿಕ್ಕಿದ್ದಾರೆ ಅಂತಹ ಜನರಿಗೆ ಪರಿಹಾರದ ರೂಪದಲ್ಲಿ ಕೊಡತಕ್ಕ ಕೆಲಸವನ್ನು ಮಾಡಲು ಇವರು ವೈಜ್ಞಾನಿಕ ದೃಷ್ಟಿಕೋನದಿಂದ ಸಮಸ್ಯೆಗಳನ್ನು ಅಧ್ಯಯನ ಮಾಡಿ, ಆ ಸಮಸ್ಯೆಗೆ ಯಾವ ರೀತಿಯ ಪರಿಹಾರ ಕೊಡಬೇಕು ಎನ್ನುವುದನ್ನು ಮಾಡಬೇಕಾಗಿದೆ. ಇದರಲ್ಲಿ ಸುಮಾರು ೨೦೯ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಪಡೆದು ಕೊಂಡು ನಮ್ಮ ರಾಜ್ಯದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಲು ಹೊರಟಿದ್ದೀರಿ. ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ಸದನದಲ್ಲಿ ಇಲ್ಲ. ಎಲ್ಲೋ ಮಾಯವಾಗಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕ ಕ್ಷಾಮವನ್ನು ಹೋಗಲಾಡಿಸುವುದಕ್ಕೋಸ್ಕರ ಕೇಂದ್ರ ಸರ್ಕಾರದಿಂದ ಈ ೨೦೯ ಕೋಟಿ ರೂಪಾಯಿಗಳನ್ನು ನೀವು ಕೇಳಿದ್ದೀರಿ. ಆ ಪಕ್ಷದ ಸದಸ್ಯರೊಬ್ಬರು ಹೇಳಿರತಕ್ಕ ಒಂದು ಮಾತನ್ನು ಹೇಳುವುದಾದರೆ, ಈ ಸರ್ಕಾರ ಬೇಜವಾಬ್ದಾರಿಯಿಂದ ನಡೆದುಕೊಂಡು ೧ ದಿವಸಕ್ಕೆ ೧ ಕೋಟಿ ರೂಪಾಯಿಗಳ ಪ್ರಕಾರ ೧ ವರ್ಷಕ್ಕೆ ೩೬೫ ಕೋಟಿ ರೂಪಾಯಿಗಳನ್ನು ಹಾಳು ಮಾಡುತ್ತಿದೆ. ಸರ್ಕಾರ ತನ್ನ ಬೇಜವಾಬ್ದಾರಿಯಿಂದ, ಉದಾಸೀನ ಭಾವನೆಯಿಂದ ಹೀಗೆ ಹಣವನ್ನು ಹಾಳು ಮಾಡುತ್ತಿದೆ. ಇವನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಜವಾಬ್ದಾರಿಯಿಂದ ಈ ಸರ್ಕಾರ ನಡೆದುಕೊಂಡಿದ್ದರೆ ಕೇಂದ್ರ ಸರ್ಕಾರಕ್ಕೆ ೨೦೯ ಕೋಟಿ ರೂಪಾಯಿಗಳ ಧನ ಸಹಾಯಕ್ಕೆ ಪತ್ರ ಬರೆಯತಕ್ಕ ಪ್ರಮೇಯವೇ ಇರಲಿಲ್ಲ ಎನ್ನತಕ್ಕ ಮಾತನ್ನು ಆ ಪಕ್ಷದಲ್ಲಿ ಜವಾಬ್ದಾರಿ ಇರತಕ್ಕ ಸದಸ್ಯರೊಬ್ಬರು ಹೇಳಿರತಕ್ಕ ಮಾತು ಪತ್ರಿಕೆಗಳಲ್ಲಿ ಬಂದಿದೆ.

ಇನ್ನು ಜಿಲ್ಲಾ ಪರಿಷತ್ ಬಗ್ಗೆ ಹೇಳುವುದಾದರೆ ಇದು ''ಇಲ್ಲಾ ಪರಿಷತ್'' ಆಗಿದೆ. ನಿಮ್ಮ ಜಿಲ್ಲಾ ಪರಿಷತ್‌ನಲ್ಲಿ ಏನು ಕೇಳಿದರೂ ಇಲ್ಲ. ಆದ್ದರಿಂದಲೇ ನಾನು ಹೇಳಿದ್ದು ಜಿಲ್ಲಾ ಪರಿಷತ್ ಎಂದರೆ ಇಲ್ಲಾ ಪರಿಷತ್ ಎಂದು. ಅಲ್ಲಿ ಏನೇನೂ ಇಲ್ಲ. ಎಷ್ಟು ದುಡ್ಡನ್ನು ನೀವು ಕೊಡುತ್ತಿದ್ದೀರಿ, ಅವರು ಎಷ್ಟು ದುಡ್ಡನ್ನು ಖರ್ಚು ಮಾಡುತ್ತಿದ್ದಾರೆ ? ಅದು ಸರಿಯಾಗಿ ಖರ್ಚಾಗುತ್ತಿದೆಯೋ ಅಥವಾ ಎಲ್ಲಾದರೂ ಬೇರೆ ಕಡೆ ಹೋಗುತ್ತಿದೆಯೋ ಅವರಿಗೆ ಎಷ್ಟು ಸಂಬಳ ಕೊಡಬೇಕಾಗಿದೆ ಎಂಬುದನ್ನು ನೀವು ಯೋಚನೆಯನ್ನೇ ಮಾಡುತ್ತಿಲ್ಲ. ನಿಮಗೆ ಸಮಾಜ ವಾದದಲ್ಲಿ ನಂಬಿಕೆ ಇದ್ದರೆ, ಇದಕ್ಕೆ ಪರಿಹಾರವನ್ನು ಹುಡುಕಬೇಕೆಂಬ ಮನಸ್ಸಿದ್ದರೆ ಮಾನ್ಯ ಲಕ್ಷ್ಮೀಸಾಗರ್‌ರವರು ರಾಜೀನಾಮೆಯನ್ನು ಕೊಟ್ಟು ಹಿಂದಿನ ಸಾಲಿನಲ್ಲಿ ಹೋಗಿ ಕೂತುಕೊಳ್ಳುತ್ತಿದ್ದರು. ಇದರ ಬಗ್ಗೆ ವ್ಯವಸ್ಥಿತವಾದ ಯಾವುದೇ ಒಂದು ವಿಧಾನವೂ ನಿಮ್ಮಲ್ಲಿಲ್ಲ. ನಾವು ಎಷ್ಟು ಹೇಳಿದರೂ ಕೂಡ ನಿಮ್ಮಲ್ಲಿ ಯಾವುದೇ ರೀತಿಯ ಪರಿಣಾಮವೂ ಆಗುವುದಿಲ್ಲ ಎಂಬುದು ನನಗೆ ಚೆನ್ನಾಗಿ ಮನದಟ್ಟಾಗಿದೆ. ಆದ್ದರಿಂದ ನಾನು ಹೆಚ್ಚು ಹೇಳುವುದಕ್ಕೆ ಕೈ ಹಾಕುವುದಿಲ್ಲ.

ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ಮಾತನ್ನು ತರಬಯಸುತ್ತೇನೆ. ಬರಪರಿಹಾರಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರದವರು ಏನು ಮಂಜೂರು ಮಾಡುತ್ತಿದ್ದಾರೆ ಆ ಹಣವನ್ನು ಅಧಿಕಾರಿಗಳು ಸಮರ್ಪಕವಾಗಿ ಯಥೋಚಿತವಾಗಿ, ಯೋಜನೆಗಳನ್ನು ರೂಪಿಸಿಕೊಂಡು ರೈತರ ಕಷ್ಟಗಳ ನಿವಾರಣೆಗಾಗಿ ಉಪಯೋಗ ಮಾಡುತ್ತಿದ್ದಾರೆಯೋ ಎಂಬುದನ್ನು ನೋಡಬೇಕು. ಕೇಂದ್ರ ಸರ್ಕಾರದ ಹಣವಾಗಲಿ ನಮ್ಮ ರಾಜ್ಯದ ಬೊಕ್ಕಸದ ಹಣವಾಗಲಿ ಅಧಿಕಾರಿಗಳ ಕೈಗೆ ಕೊಟ್ಟಮೇಲೆ ನೀವು ಕೊಡತಕ್ಕ ಸ್ಪಷ್ಟ ನಿರ್ದೇಶನಗಳ ಪ್ರಕಾರ ಅವರು ನಡೆದುಕೊಳ್ಳಬೇಕು. ಅಧಿಕಾರಿಗಳ ಮೇಲೆ ನೀವು ಸರಿಯಾದ ಹಿಡಿತವನ್ನು ಇಟ್ಟುಕೊಳ್ಳದಿದ್ದರೆ ಅವರು ನಿಮ್ಮ ತಲೆಯ ಮೇಲೆಯೇ ಕೂತುಕೊಳ್ಳುತ್ತಾರೆ ಸರ್ಕಾರದ ಉದ್ದೇಶ ಏನಿದೆ ಅದು ಈಡೇರುವುದಿಲ್ಲ. ನಿಮ್ಮ ಯೋಜನೆಗಳು ಬಡವರಿಗೆ, ರೈತರಿಗೆ ಮುಟ್ಟುವುದಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಳೆದಸಾರಿ ಮಾನ್ಯ ಸದಸ್ಯರಾದ ಸ್ವಾಮಿರಾವ್‌ರವರು ಅವರ ತಾಲ್ಲೂಕಿನಲ್ಲಿ ನಡೆದ ಒಂದು ಪ್ರಕರಣವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದರು ಅವರ ತಾಲೂಕಿನಲ್ಲಿ ಒಬ್ಬ ತಹಸೀಲ್ದಾರ್‌ರವರು ೧೦೦ ಲೋಡು ಹುಲ್ಲನ್ನು ಬೇರೆ ಕಡೆಗೆ ಸಕಾಲದಲ್ಲಿ ಸಾಗಿಸದೇ ಬಿಟ್ಟಿದ್ದರಿಂದ ಪೂರ್ತಿ ಹುಲ್ಲೂ ಕೂಡ ಮಳೆಗೆ ಸಿಕ್ಕಿ ಕೊಳೆತು ಹೋದಂಥ ವಿಚಾರವನ್ನು ಅವರು ಈ ಸಭೆಯ ಮುಂದಿಟ್ಟರು. ಇದರ ಬಗ್ಗೆ ಬಹಳ ದೀರ್ಘವಾಗಿ ಚರ್ಚೆಯಾಯಿತು ಚರ್ಚೆಯಾದ ಮೇಲೆ ಆ ಅಧಿಕಾರಿಯ ಬಗ್ಗೆ ಯಾವುದೇ ತನಿಖೆ ಇದುವರೆಗೆ ನಡೆಯಲಿಲ್ಲ. ಸರ್ಕಾರದಿಂದ ಹಣ ಯಾವ ರೀತಿ ಒದಗಿಸಲಾಯಿತು, ಅದನ್ನು ಯಾವ ರೀತಿ ಖರ್ಚು ಮಾಡಿದ್ದಾರೆಂಬುದು ಸರ್ಕಾರಕ್ಕೆ ಗೊತ್ತೇ ಇಲ್ಲ. ಮಂತ್ರಿಗಳಿಗೂ ಕೂಡ ಗೊತ್ತಿಲ್ಲ, ಶಾಸಕರು ಜವಾಬ್ದಾರಿಯುತವಾಗಿ ಆಡಿದ ಮಾತಿಗೆ ಬೆಲೆ ಬರಲೇ

ಇಲ್ಲ. ತಪ್ಪು ಮಾಡಿದ ಅಧಿಕಾರಿಯ ಮೇಲೆ ಕಂಪ್ಲೈಂಟ್ ಬರೆದುಕೊಟ್ಟರೆ ಆತನನ್ನು ಕೇವಲ ವರ್ಗ ಮಾಡತಕ್ಕಂಥ ಕೃತ್ಯ ನೋಡಿದರೆ ಇವರಿಗೆ ಎಷ್ಟು ಕಾಳಜಿ ಇದೆ ಎಂದು ಅರ್ಥವಾಗುತ್ತದೆ. ಇವರು ಸಮಾಜವಾದಿಗಳೇ ಎನ್ನುವ ಬಗ್ಗೆ ಇವರ ಚಿಂತನೆಯ ಬಗ್ಗೆ ನಾವು ಯುವಕರಾಗಿರತಕ್ಕವರು ಬಹಳ ಯೋಚನೆ ಮಾಡಬೇಕಾಗಿದೆ.

ಶ್ರೀ ಆರ್. ಎನ್. ನಾಯಕ್.—ಈ ಸರ್ಕಾರದಲ್ಲಿರತಕ್ಕಂಥ ಅಧಿಕಾರಿಗಳಿಗೆ ಯಾವುದಾದರೂ ಬಡ್ತಿ ಸಿಕ್ಕಬೇಕಾದರೆ ಅವರ ಬಗ್ಗೆ ಕಂಪ್ಲೈಂಟ್ ಮಾಡಬೇಕು. ಅದರಲ್ಲೂ ಕಾಂಗ್ರೆಸ್ ಪಾರ್ಟಿಯವರು ಈ ಅಧಿಕಾರಿ ಸರಿ ಇಲ್ಲವೆಂದು ದೂರಬೇಕು. ಹಾಗೆ ದೂರಿದರೆ ಮರುಕ್ಷಣದಲ್ಲಿಯೇ ಅವರಿಗೆ ಪ್ರಮೋಷನ್ ದೊರೆಯುತ್ತದೆ. ನಾವು ಅಧಿಕಾರಿಗಳು ಸರಿಯಿಲ್ಲವೆಂದು ಹೇಳಿದವರಿಗೆಲ್ಲ ಪ್ರಮೋಷನ್ ಕೊಟ್ಟಿದ್ದಾರೆ. ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಈ ಬಗ್ಗೆ ಮಾನ್ಯ ಲಕ್ಷ್ಮೀಸಾಗರ್‌ರವರು ಏನಾದರೂ ಕಾಮೆಂಟ್ಸ್ ಇದ್ದರೆ ಮಾಡಲಿ.

ಅಧ್ಯಕ್ಷರು.—ನೀವು ಇಷ್ಟೆಲ್ಲ ಹೇಳುವುದಕ್ಕೆ ಬದಲಾಗಿ ಇಂತಹ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ.

ಶ್ರೀ ಪಟವಂಕ್ಕಿ ರತ್ನಾಕರ್.—ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ತಾವು ಈ ಕಡೆಯವರನ್ನೂ ರಕ್ಷಣೆ ಮಾಡಬೇಕು, ಆ ಕಡೆಯವರನ್ನೂ ಕೂಡ ರಕ್ಷಣೆ ಮಾಡಬೇಕು. ನಮ್ಮ ಭಾವನೆಗೆ ಧ್ವನಿಗೂಡಿಸಬೇಕು. ನಮ್ಮ ಭಾವನೆಗಳನ್ನು ಅರ್ಥಮಾಡಿಕೊಂಡು ಸರ್ಕಾರಕ್ಕೆ ತಿಳಿಸಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾವು ಎಷ್ಟೇ ಹೇಳಿದರೂ ಕೂಡ ಅವರು ಹೇಳುವುದನ್ನು ಹೇಳಲಿ ನಾವು ಮಾಡುವುದನ್ನು ಮಾಡುತ್ತೇವೆಂದು ಹೇಳತಕ್ಕಂಥದ್ದು ಸರಿಯಲ್ಲ. ನಾವು ಹೇಳತಕ್ಕಂಥ ವಿಚಾರಗಳಿಗೂ ಈವತ್ತು ನಡೆಯುತ್ತಾ ಇರತಕ್ಕಂಥ ವಿಚಾರಗಳಿಗೂ, ಮಂತ್ರಿಗಳು ಸ್ಪಂದಿಸುತ್ತಿರುವ ರೀತಿ ನೀತಿಗಳನ್ನು ನೋಡಿದರೆ ಅಜಗಜಾಂತರ ವ್ಯತ್ಯಾಸವಿದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಂದು ಕಿವಿ ಮಾತನ್ನು ಹೇಳಿದ್ದಾರೆ. ತಾವು ದೆಹಲಿಗೆ ಹೋದಾಗ ಪ್ರತಿಪಕ್ಷದ ಸಂಘಟನೆಯ ವಿಚಾರ, ಮತ್ತಿತರ ವಿಚಾರಗಳನ್ನು ತಲೆ ತುಂಬ ತುಂಬಿಕೊಂಡು ಹೋಗಿ ಬರಗಾಲದ ವಿಚಾರವನ್ನು ಮರೆತು ಬಿಟ್ಟು ಬರಬೇಡಿ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಪ್ರತಿಭಟನೆ, ಸಂಘಟನೆ, ಇದೆಲ್ಲ ವಿಚಾರಗಳನ್ನು ಒಂದು ಕಡೆ ಇಟ್ಟು ದೆಹಲಿಗೆ ಹೋದಾಗ ಇವುಗಳನ್ನೆಲ್ಲ ಮರೆತು ಬಡವರ ಬಗ್ಗೆ ರಾಜ್ಯದ ಜನತೆಯ ಬಗ್ಗೆ ದಯವಿಟ್ಟು ಪ್ರತಿನಿಧಿಸಬೇಕೆನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ಜ್ಞಾಪಿಸುತ್ತಾ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎ. ಉಪ್ಪಿನ್ (ಕುಂದಗೋಳ್).—ಮಾನ್ಯ ಸಭಾಧ್ಯಕ್ಷರೇ, ೧೯೮೭ನೇ ಇಸವಿ ಹೊಸ ಸಂವತ್ಸರದ ಪ್ರಾರಂಭದ ವರ್ಷ. ಹೊಸ ಸಂವತ್ಸರದ ಪ್ರಾರಂಭದಲ್ಲಿ ನಮ್ಮ ರಾಜ್ಯದ ಅನೇಕ ಜನ ಜ್ಯೋತಿಷ್ಯರು ತಮ್ಮ ಭವಿಷ್ಯವನ್ನು ನುಡಿದಿರತಕ್ಕಂಥದ್ದು ಏನೆಂದರೆ, ಪ್ರಾರಂಭದ ೨೦ ವರ್ಷಗಳಲ್ಲಿ ಒಳ್ಳೆಯ ಮಳೆ ಬೆಳೆಯಾಗಿ ದೇಶ ಆನಂದವಾಗಿರುತ್ತದೆ ಎನ್ನುವ ಮಾತನ್ನು ಹೇಳಿದ್ದನ್ನು ಕೇಳಿ ನಿಜವಾಗಿಯೂ ನಮ್ಮ ಕರ್ನಾಟಕದ ಜನತೆ ಬಹಳವಾಗಿ ಆನಂದವನ್ನು ಪಟ್ಟಿದ್ದರು. ಆದರೆ ಪ್ರಾರಂಭದ ವರ್ಷದಲ್ಲಿಯೇ ಭವಿಷ್ಯ ತಿರುಗುಮುರುಗಾಗಿರುವುದನ್ನು ನೋಡಿದರೆ ಈವತ್ತು ನಾವು ಗಂಭೀರವಾಗಿ ಬರದ ಬಗ್ಗೆ ಚರ್ಚಿಸಬೇಕಾದ ಸಮಯ ಬಂದಿದೆ. ಕಳೆದ ನಾಲ್ಕು ವರ್ಷಗಳಿಂದ ನಮ್ಮ ಕರ್ನಾಟಕ ರಾಜ್ಯದ ಜನತೆಯನ್ನು ಕಂಗಾಲು ಮಾಡಿದಂಥ ಬರ, ಈಗ ಐದನೇಯ ವರ್ಷದಲ್ಲಿ ತನ್ನ ಕರಾಳ ಹಸ್ತವನ್ನು ಕರ್ನಾಟಕದ ತುಂಬ ಚಾಚಿದೆ. ಈ ಬಗ್ಗೆ ಕಳೆದ ಒಂದು ದಿನದಿಂದ ಈ ಮನೆಯ ಸದಸ್ಯರು ಪಕ್ಷಬೇಧವನ್ನು ಮರೆತು ಚರ್ಚೆ ಮಾಡುತ್ತಾ ಸಮರೋಪಾದಿಯಲ್ಲಿ ಏನೆಲ್ಲ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆನ್ನುವ ಬಗ್ಗೆ ಅನೇಕ ಮಹತ್ತರವಾದ ಸಲಹೆ ಸೂಚನೆಗಳನ್ನು ಸರ್ಕಾರಕ್ಕೆ ನೀಡಿದ್ದಾರೆ. ಕೆಲವು ವಿರೋಧ ಪಕ್ಷದ ಮಿತ್ರರು ಈ ಬರ ಕರ್ನಾಟಕದಲ್ಲಿ ಜನತಾ ಪಕ್ಷದ ಜೊತೆಗೇ ಬಂದಿದೆ, ಜನತಾ ಪಕ್ಷ ಈ ಸರ್ಕಾರವನ್ನು ಬಿಡುವ ವರೆಗೆ ಕರ್ನಾಟಕದಲ್ಲಿ ಬರ ಇವರನ್ನು ಬಿಡುವುದಿಲ್ಲ ಎಂಬ ವ್ಯಂಗ್ಯವಾದ ಮಾತುಗಳನ್ನು ಹೇಳಿದ್ದು ನೋಡಿದರೆ ನನಗೆ ಖೇದ ಅನ್ನಿಸುತ್ತದೆ. ಈ ಸಂದರ್ಭದಲ್ಲಿ ಸಂಸ್ಕೃತದ ಒಂದು ಶ್ಲೋಕ ನೆನಪಾಗುತ್ತದೆ ಅದರ ಅರ್ಥ ಇಷ್ಟೆ, ದುಷ್ಟರು ಕೆಟ್ಟ ಕೆಲಸ ಮಾಡುತ್ತಾರೆ, ಆದರೆ ಅದರ ಫಲವನ್ನು ಒಳ್ಳೆಯ ಜನರು ಅನುಭವಿಸಬೇಕಾದ ಪರಿಸ್ಥಿತಿ ಬರುತ್ತದೆ ಎಂದು. ಈ ಮಾತನ್ನು ಕವಿ ಉದಾಹರಣೆಯಾಗಿ ಕೊಡುತ್ತಾನೆ. ರಾವಣ ಸೀತೆಯನ್ನು ಅಪಹರಿಸಿಕೊಂಡು ಹೋದ, ಆದರೆ ಅದರ ಫಲವನ್ನು ಅನು

ಭವಿಸಬೇಕಾದುದು ಸಮಂಜಸ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಳೆದ ೩೦ ವರ್ಷಗಳಿಂದ ಕರ್ನಾಟಕದಲ್ಲಿ ರಾಜ್ಯಭಾರ ಮಾಡಿದ ಸರ್ಕಾರ, ಕರ್ನಾಟಕ ರಾಜ್ಯದಲ್ಲಿದ್ದ ಪಟ್ಟ ಅರಣ್ಯವನ್ನು ನಾಶ ಮಾಡುವ ಪ್ರಯತ್ನ ಮಾಡಿದೆ. ಯಾವುದೇ ಮುಂದಾಲೋಚನೆ ಮಾಡದೆ ಮರಗಳನ್ನು ನಾಶಮಾಡಿದ ಪರಿಣಾಮವಾಗಿ ಮೋಡಗಳನ್ನು ಕ್ರೋಢೀಕರಿಸಿ ಮಳೆಯನ್ನು ತರತಕ್ಕ ಅರಣ್ಯ ನಾಶವಾಗುತ್ತಿದೆ ಅಂದಾಗ ಮಳೆ ಹೇಗೆ ಬರಬೇಕು ? ಆ ಸರ್ಕಾರ ಮಾಡಿದ ಪಾಪದ ಫಲವನ್ನು ಜನತಾ ಸರ್ಕಾರ ಅನುಭವಿಸಬೇಕಾಗಿದೆ ಎಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ಅದರ ಬಗ್ಗೆ ಚರ್ಚೆ......

(ಶ್ರೀ ಆರ್. ಎನ್. ನಾಯಕ್ ಅವರು ಮಾತನಾಡಲಾರಂಭಿಸಿದರು)

ಅಧ್ಯಕ್ಷರು.—ಮಾನ್ಯ ನಾಯಕ್ ಅವರು ಹೇಳಿದ್ದುದು ಏನೂ ರೆಕಾರ್ಡ್ ಆಗುವುದಿಲ್ಲ. ದಯ ಮಾಡಿ ನಾಯಕ್ ಅವರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ. ಎ. ಉಪ್ಪಿನ್.—ನಾವು ಮಾತತಕ್ಕ ನೀತಿ ಪಾಠವನ್ನು ಅವರು ಕಲಿಯಬೇಕು. ಅದು ಏನೇ ಇರಲಿ. ೧೯೭೬ರಲ್ಲಿ ಭೀಕರ ಬರಗಾಲ ಒದಗಿದಾಗ ವಿರೋಧ ಪಕ್ಷದವರು, ಜನತಾ ಸರ್ಕಾರಕ್ಕೆ ಬರಗಾಲವನ್ನು ಎದುರಿಸುವುದಕ್ಕೆ ಶಕ್ತಿ ಇಲ್ಲವೆಂದು ಹೇಳಿದ್ದರು. ಆದರೆ ಬರಗಾಲ ಕಾರ್ಯಕ್ರಮದ ನೇತೃತ್ವ ವಹಿಸಿದ ಶ್ರೀ ಎಸ್. ಆರ್. ಬೊಮ್ಮಾಯಿಯವರು ಅಭೂತಪೂರ್ವವಾಗಿ, ಸಮರೋಪಾದಿ ಯಲ್ಲಿ ಬರವನ್ನು ಎದುರಿಸಿ ಜಯವನ್ನು ಸಾಧಿಸಿ ತೋರಿಸಿದ್ದಾರೆ. ಆ ಸಂದರ್ಭದಲ್ಲಿ ಗೋಶಾಲೆಗಳನ್ನು ನಿರ್ಮಿಸಿ ಯಾವ ಸರ್ಕಾರವೂ ಮಾಡದ ಕೆಲಸವನ್ನು ಮಾಡಿ ಜನತೆಯ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆಂದು ಹೆಮ್ಮೆಯಿಂದ ಹೇಳುತ್ತೇನೆ. ಇವತ್ತೂ ದೇವರಲ್ಲಿ ಬೇಡಿಕೊಳ್ಳುತ್ತೇನೆ. ಏನೆಂದರೆ, ನೀನು ಕಷ್ಟ ಕೊಟ್ಟರ ನಾವು ಹೆದರುವುದಿಲ್ಲ. ಸಾಕಷ್ಟು ಕಷ್ಟ ಕೊಡು ಮತ್ತು ಅದನ್ನು ಎದುರಿಸುವ ಧೈರ್ಯ ವನ್ನು ಕೊಡು ಎಂದು. ದೇವರಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇರುವ ಪರಿಸ್ಥಿತಿಯನ್ನು ಹೇಳಿ, ಹೊಗಳುವುದು ಇದ್ದರೆ ಆಮೇಲೆ ಹೊರಗಡೆ ಹೊಗಳಿ. ಈಗ ಏನೇನು ಆಗಬೇಕೆಂಬುದನ್ನು ದಯಮಾಡಿ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಳ್ಳೆಯ ಮಾತು ಹೇಳುವಾಗ ದಯವಿಟ್ಟು ಸ್ವಲ್ಪ ತಾಳ್ಮೆ ಯಿಂದ ಕೇಳಿ.

ಅಧ್ಯಕ್ಷರು.—ಹೊಗಳುವವರು ಬೇಕಾಗುತ್ತದೆ, ಹೊಗಳಲಿ. ತಾವು ಕುಳಿತುಕೊಳ್ಳಿ. ಹೊಗಳು ಭಟ್ಟರು, ತೆಗಳುಭಟ್ಟರು ಎಂದು ಇರುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್.—ಒಂದು ಮಾತನ್ನು ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವು ದಕ್ಕೆ ಇಷ್ಟಪಡುತ್ತೇನೆ. ಹೊಗಳುವುದು ತೆಗಳುವುದು ಬಿಡಿ ಸ್ಪೀಚ್ ಕಂಟೆಂಟ್ಸ್ ಏನೇ ಇರಲಿ. ಮಾನ್ಯ ರತ್ನಾಕರ್ ಅವರು ಮಾತನಾಡಿದ್ದನ್ನು ಕೇಳಿದೆ. ಶ್ರೀನಿವಾಸ್ ಅವರು ಸಾಹಿತ್ಯಪೂರ್ಣವಾಗಿ ಮಾತನಾಡುತ್ತಿದ್ದರೆ ಕೇಳುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೋದಸಾರಿ ಮಾಡಿದ ಕೆಲಸ ಕಾರ್ಯಗಳೆಲ್ಲ ನಿಮಗೆ ಒಪ್ಪಿಗೆಯೇ ? ನ್ಯಾಯಸಮ್ಮತವಾಗಿವೆಯೆ ?

ಅವರು ತಾವೆಲ್ಲಾ ಸಾಧಿಸಿಬಿಟ್ಟಿದ್ದೀರಿ ಎಂದು ಮೆಚ್ಚುಗೆ ಸೂಚಿಸಿ ಹೇಳುತ್ತಿದ್ದಾರೆ, ಇನ್ನೂ ಮಾಡುವುದಿದೆ ಎಂದು ಹೇಳಲಿ.

ಶ್ರೀ ಜೆ. ಎಚ್. ಪಟೇಲ್.—ಕೆಲಸದ ಬಗ್ಗೆ ನಾನು ಹೇಳುತ್ತಿಲ್ಲ, ತಾವು ಕ್ರಿಟಿಸಿಸಮ್ ಮಾಡಿ. ದೋಷ ಇದ್ದರೆ ಎತ್ತಿತೋರಿಸಿ. ನಾನು ಹೇಳುತ್ತಿರುವುದು ಪಾರ್ಲಿಮೆಂಟರಿ ಸಂಪ್ರದಾಯದ ಬಗ್ಗೆ. ಅರಣ್ಯದ ಸುದ್ದಿ ಎತ್ತಿದ ತಕ್ಷಣ ಕೈ ಮುಡಚಿಕೊಂಡು ಕುಸ್ತಿ ಮಾಡುವುದು ಏತಕ್ಕೆ ? ಪಟವಾಕ್ಕಿ ರತ್ನಾಕರ್ ಅವರು ಎಂಥ ಕ್ಷೇತ್ರವನ್ನು ರೆಪ್ರಸೆಂಟ್ ಮಾಡುತ್ತಾರೆ ಅಂದರೆ ಶ್ರೀ ಗೋಪಾಲಗೌಡರು ಬರುತ್ತಿದ್ದಂಥ ಕ್ಷೇತ್ರ ಅದು. ಅಂಥವರು ತೋಳು ಮಡಚಿಕೊಂಡು ಹೇಳಬಾರದು ಎಂದು ಹೇಳುತ್ತಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಪಟೇಲರು ಹೇಳುವುದು ಕರೆಕ್ಟ್. ಆದರೆ...

(ಶ್ರೀ ಪಟವರ್ಧನ್ ರತ್ನಾಕರ್ ಅವರು ಮಾತನಾಡಲು ಎದ್ದರು)

ಅಧ್ಯಕ್ಷರು.- ರತ್ನಾಕರ್ ಅವರೆ, ನೀವು ಚೆನ್ನಾಗಿ ಮಾತನಾಡಿದ್ದೀರಿ, ಕುಳಿತುಕೊಳ್ಳಿ

ಶ್ರೀ ಎಸ್. ಆರ್. ಬೊಮ್ಮಾಯಿ.—ಒಳ್ಳೆ ಕೆಲಸ ಮಾಡಿದಾಗ ಒಳ್ಳೆ ಮಾತು ಹೇಳಬಾರದು.

ಶ್ರೀ ಆರ್. ವೆಂಕಟರಾಮಯ್ಯ.—ಹೊಗಳುಭಟ್ಟರು ಆಗುವುದು ಬೇಡ, ಬರದ ಬಗ್ಗೆ ಹೇಳಲಿ.

ಶ್ರೀ ಎಸ್. ಆರ್. ಬೊಮ್ಮಾಯಿ. ನಿಮ್ಮ ಕ್ಷೇತ್ರದಲ್ಲಿ ಏನಾಗಿದೆ ಎಂಬುದನ್ನು ಹೇಳಬಾರದೆ ? ಮಾನ್ಯ ಭೂಪತಿಯವರು ಹೇಳಿದರು. ಅದೇರೀತಿ ನಿಮ್ಮಲ್ಲಿ ಏನೇನು ಕೆಲಸವಾಗಿದೆ ಎಂಬುದನ್ನು ಹೇಳಿ. ಜೊತೆಗೆ ಮುಂದೆ ಏನು ಮಾಡಬೇಕು ಎಂಬುದನ್ನೂ ಹೇಳಲಿ.

(ಶ್ರೀ ಪಟವರ್ಧನ್ ರತ್ನಾಕರ್ ಅವರು ಮತ್ತೆ ಮಾತನಾಡಲು ಎದ್ದು ನಿಂತರು.)

ಅಧ್ಯಕ್ಷರು.—ನೀವು ಬಹಳ ಚೆನ್ನಾಗಿ ಮಾತನಾಡುತ್ತೀರಿ. ಶಹಭಾಸ್‌ಗಿರಿ ಕೊಡುತ್ತೇನೆ. ಈಗ ದಯಮಾಡಿ ಕುಳಿತುಕೊಳ್ಳಿ

ಶ್ರೀ ಬಿ. ಎ. ಉಪ್ಪಿನ.—ಜನತಾ ಪಕ್ಷದವರು ಕಷ್ಟಗಳಿಗೆ ಹೆದರುವುದಿಲ್ಲ. ದೇವರಲ್ಲಿ ಪ್ರಾರ್ಥನೆ ಮಾಡುತ್ತೇವೆ, ಬೇಕಾದಷ್ಟು ಕಷ್ಟಗಳನ್ನು ಕೊಟ್ಟು ಅದನ್ನು ಸಮರ್ಥ ರೀತಿಯಲ್ಲಿ ಎದುರಿಸತಕ್ಕ ಶಕ್ತಿ ಕೊಡು ಎಂದು ದೇವರಲ್ಲಿ ಪ್ರಾರ್ಥನೆ ಮಾಡಬೇಕಾದ ಸಂದರ್ಭ ಇದೆ, ನಿನ್ನೆ ದಿವಸ ಮಾನ್ಯ ಕಂದಾಯ ಸಚಿವರಾದ ಬೊಮ್ಮಾಯಿಯವರು ಕೊಟ್ಟ ಹೇಳಿಕೆಯ ೯ನೇ ಪುಟದಲ್ಲಿ ದಿಟ್ಟವಾಗಿ ಹೇಳಿದ್ದಾರೆ. ಅದನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ "ರಾಜ್ಯ ಸರ್ಕಾರವು ಅಭಾವ ಪರಿಹಾರ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುತ್ತದೆಂಬ ಆಶ್ವಾಸನೆಯನ್ನು ನೀಡುತ್ತೇನೆ. ಯಾವುದೇ ಕಾರಣಗಳಿಗಾಗಿಯಾದರೂ ಸರ್ಕಾರವು ಕೆಲಸವನ್ನು ಅರಸಿ ಬರುವ ಯಾವುದೇ ವ್ಯಕ್ತಿಗೂ ಕೆಲಸ ನೀಡದೆ ವಾಪಸ್ಸು ಕಳುಹಿಸಲಾಗುವುದಿಲ್ಲ. ಹಾಗೂ, ಏನೇ ಆರ್ಥಿಕ ಸಂಕಷ್ಟ ಹಾಗೂ ಅಡೆತಡೆಗಳು ಬಂದರೂ ಅವನ್ನೆಲ್ಲಾ ಬದಿಗೊತ್ತಿ ರಾಜ್ಯದ ಬಾಧಿತ ಜನ ಹಾಗೂ ಜಾನುವಾರುಗಳಿಗೆ ನಿರಂತರವಾಗಿ ಮುಂದಿನ ಹಂಗಾಮಿನವರೆಗೂ ಪರಿಹಾರ ಒದಗಿಸಿಕೊಡುವ ಕರ್ತವ್ಯಕ್ಕೆ ಸರ್ಕಾರವು ಪೂರ್ಣ ಬದ್ಧವಾಗಿದೆ ಎಂದು ಈ ಮೂಲಕ ಸದನದಲ್ಲಿ ಮತ್ತೊಮ್ಮೆ ಘೋಷಿಸುತ್ತೇನೆ. ಎಂದು ಹೇಳಿದ್ದಾರೆ. ಈ ಹೇಳಿಕೆ ನೋಡಿದರೆ ಎಂಥ ಕಷ್ಟ ಬಂದರೂ ಸರ್ಕಾರ ಸದಾ ಸಿದ್ಧವಾಗಿದೆ ಎಂದು ಅರ್ಥವಾಗುತ್ತದೆ. ಇಷ್ಟನ್ನು ಹೇಳಿ ಬರ ಪರಿಹಾರದ ಬಗ್ಗೆ ಒಂದೆರಡು ಸೂಚನೆಗಳನ್ನು ಕೊಡಬಯಸುತ್ತೇನೆ, ಇವತ್ತು ಸರ್ಕಾರ ಕೆಲಸವನ್ನು ಕೇಳಿದಂಥ ಜನರಿಗೆ ಕೆಲಸ ಕೊಡುತ್ತಿದೆ. ಅಗ್ಗದ ದರದಲ್ಲಿ ಧಾನ್ಯಗಳನ್ನು ಪೂರೈಸುತ್ತಿದೆ. ನಮ್ಮ ಕ್ಷೇತ್ರದಲ್ಲಿ ಸಂಚಾರ ಮಾಡಿದಾಗ ಸಾಮಾನ್ಯರೈತನಿಂದ ಬಂದಂಥ ಪ್ರತಿಕ್ರಿಯೆಯನ್ನು ಅವರ ಭಾವನೆಯನ್ನು ಮಂತ್ರಿಗಳಿಗೆ ತಿಳಿಸುವುದು ಅವಶ್ಯ. ಸರ್ಕಾರ ಕೊಡತಕ್ಕ ಕೆಲಸದಿಂದ ಕೂಲಿಕಾರರು ಸ್ವಲ್ಪ ನೆಮ್ಮದಿಯಿಂದ ಬಾಳಬಹುದು, ಉಚ್ಚ ವರ್ಗದ ಜನ ನೆಮ್ಮದಿಯಿಂದ ಬಾಳಬಹುದು ಆದರೆ ಮಧ್ಯಮ ವರ್ಗದ ರೈತನ ಪರಿಸ್ಥಿತಿ ಕಷ್ಟವಾಗಿದೆ. ಅವರ ಮನೆಯಲ್ಲಿ ಬಂಗಾರ ಉಳಿದಿಲ್ಲ. ಬ್ಯಾಂಕಿನಲ್ಲಿ ಸಾಲ ಮಾಡಿದ್ದಾರೆ. ಸಹಕಾರಿ ಸಂಘದಲ್ಲಿ ಸಾಲ ಮಾಡಿದ್ದಾರೆ ಖಾಸಗಿಯವರ ಹತ್ತಿರ ಸಾಲ ಮಾಡಿದ್ದಾರೆ. ಹೀಗೆ ಸಾಲದಿಂದ ಜರ್ಜರಿತರಾಗಿದ್ದಾರೆ, ತತ್ತರಿಸಿ ಹೋಗಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರ ಮುಂದೆ ಬಂದು ಅವನ ಸಾಲದ ವಸೂಲಿ ನಿಲ್ಲಿಸುವುದರ ಜೊತೆಗೆ, ಸಾಧ್ಯವಾದರೆ ಸಾಲಗಳನ್ನು ಮನ್ನಾ ಮಾಡಿ ಹೊಸದಾಗಿ ಸಾಲಗಳು ರೈತರಿಗೆ ಸಿಗತಕ್ಕ ಏರ್ಪಾಡನ್ನು ಮಾನ್ಯ ಕಂದಾಯ ಮಂತ್ರಿಗಳು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ ನನ್ನ ತಾಲ್ಲೂಕಿನಲ್ಲಿ ಒಂದು ವಿಶಿಷ್ಟ ಪರಿಸ್ಥಿತಿ ಇದೆ. ಸಚಿವರು ನಮ್ಮ ತಾಲ್ಲೂಕಿನವರಾಗಿರುವುದರಿಂದ ಅವರಿಗೆ ಆ ಸಮಸ್ಯೆಯ ಅರಿವು ಇದೆ ವಿಶೇಷವಾಗಿ ರೈತರು ಕಷ್ಟಕಾಲದಲ್ಲಿ ತಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳುವುದಕ್ಕೆ ಇರುವ ಒಂದೆರಡು ಎಕರೆ ಜಮೀನನ್ನು ಮಾರುವ ಪರಿಸ್ಥಿತಿ ಇದೆ ನಮ್ಮಲ್ಲಿರತಕ್ಕ ಜಮೀನನ್ನು ೧೫ ವರ್ಷಗಳವರೆಗೆ ಮಾರದ ಹಾಗೆ ನಿರ್ಬಂಧ ಇರುವುದರಿಂದ ಮಾರುವುದಕ್ಕೆ ಆಗದ ಪರಿಸ್ಥಿತಿಯಲ್ಲಿ ರೈತರು ಇದ್ದಾರೆ. ಅದಕ್ಕಾಗಿ ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಜಮೀನನ್ನು ರೀಡಾಲ್ಪ್ರೆಂಟ್ ಮಾಡಿದ ಮೇಲೆ ಕೊನೆಯಪಕ್ಷ ೧೫ ವರ್ಷ ಯಾರಿಗೂ ಮಾರಾಟ ಮಾಡಬಾರದು ಎಂಬ ರಿಸ್ಟ್ರಿಕ್ಷನ್ ಇದೆ ಅದನ್ನು ಕೊನೆಯಪಕ್ಷ ಸಡಿಲ ಮಾಡುವುದಕ್ಕೆ ಆಗದಿದ್ದರೆ ಸರ್ಕಾರದಿಂದ ಪರವಾನಗಿ ಪಡೆದುಕೊಂಡು ಮಾರಲಿಕ್ಕೆ ಅವನಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು

ಕಾರ್ಮಿಕರ ಬಗ್ಗೆ ಒಂದು ವಿಚಾರವನ್ನು ಹೇಳುವುದಾದರೆ. ಕಳೆದ ವರ್ಷ ಹಸಿರು ಕಾರ್ಡುಗಳನ್ನು ಕೊಡುವಾಗ ನಮ್ಮ ತಾಲ್ಲೂಕಿನಲ್ಲಿ ಅನೇಕ ಜನ ಕೂಲಿಗಾರರು ಬೇರೆ ಬೇರೆ ಜಿಲ್ಲೆಗಳಿಗೆ ವಲಸೆ ಹೋಗಿದ್ದರು. ಹಸಿರು ಕಾರ್ಡುಗಳ ಕೊಡುವ ಮುಂಚೆ ಸರ್ವೇಕ್ಷೆಯನ್ನು ಮಾಡತಕ್ಕ ಸಂದರ್ಭದಲ್ಲಿ ಅನೇಕ ಕಾರ್ಮಿಕರು ಊರು ಬಿಟ್ಟು ಹೋಗಿದ್ದು, ಪುನಃ ತಿರುಗಿ ವಾಪಸ್ಸು ಬಂದಿದ್ದಾರೆ. ಅಂತಹವರಿಗೆ ಪುನಃ ಹಸಿರು ಕಾರ್ಡನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕಾಗಿ ಮತ್ತೊಮ್ಮೆ ವಿಶೇಷವಾಗಿ ತನಿಖೆಯನ್ನು ನಡೆಸಿ, ಯಾರು ಯೋಗ್ಯರು ಇದ್ದಾರೋ ಅವರಿಗೆ ಹಸಿರು ಕಾರ್ಡು ಸಿಕ್ಕಿಲ್ಲ. ಅವರಿಗೆ ಹಸಿರು ಕಾರ್ಡನ್ನು ಕೊಡಿಸತಕ್ಕ ಯೋಚನೆಯನ್ನು ಸನ್ಮಾನ್ಯ ಸಚಿವರು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇದರ ಜೊತೆಗೆ ಅನೇಕ ಜನ ಮಾನ್ಯ ಸದಸ್ಯರು ಏನು ಹೇಳಿದರು ಎಂದರೆ, ಬರ ಬಂತೆಂದರೆ ಅಧಿಕಾರಿಗಳಿಗೆ ಒಂದು ಸುಗ್ಗಿಯಾಗುತ್ತದೆ ಎಂದು ಹೇಳಿದರು. ಬರಗಾಲ ಪರಿಹಾರ ಕಾರ್ಯಕ್ರಮದಲ್ಲಿ ಏನಾದರೂ ಅವ್ಯವಹಾರ ನಡೆದಿದ್ದರೆ ಅದನ್ನು ಕೂಲಂಕುಷವಾಗಿ ವಿಚಾರ ಮಾಡಿ ಅಧಿಕಾರಿ ಯಾವನೇ ಇರಲಿ, ಎಷ್ಟು ದೊಡ್ಡವನೇ ಇರಲಿ, ಅವನ ಬಗ್ಗೆ ಯೋಗ್ಯವಾದ ಹಾಗೂ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ಸರ್ಕಾರ ಹಿಂದು ಮುಂದು ನೋಡಬಾರದು. ಆ ಪ್ರಕಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ಈಗಾಗಲೇ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣದಲ್ಲಿ ಈ ಬರವನ್ನು ಸಮರೋಪಾದಿಯಲ್ಲಿ ಎದುರಿಸುವ ಬಗ್ಗೆ ಯಾವ ಪಕ್ಷಬೇಧವನ್ನು ಮಾಡದೆ ಸಹಾಯ-ಸಹಕಾರವನ್ನು ನೀಡುತ್ತೇವೆಂದು ಹೇಳಿದ್ದಾರೆ. ಅವರ ಬಗ್ಗೆ ನನ್ನ ಮೆಚ್ಚುಗೆಯನ್ನು ಸೂಚಿಸುತ್ತೇನೆ. ಆದರೆ ಅವರು ಆಡಿದ ಮಾತಿನಂತೆ ನಡೆಯುವುದಕ್ಕೆ ಸದ್ಬುದ್ಧಿಯನ್ನು ದೇವರು ಅವರಿಗೆ ದಯಪಾಲಿಸಲೆಂದು ದೇವರಲ್ಲಿ ಕೇಳಿಕೊಳ್ಳುತ್ತಾ, ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ.— ಬಹಳ ಆತಂಕಕಾರಿಯಾದ ಸುದ್ದಿಯೊಂದು ನನಗೆ ಮುಟ್ಟಿದೆ. ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳಿಗೆ ನಾಲ್ಕನೇ ಸ್ಥಾನವೆಂದು ಕರೆಯುತ್ತಾರೆ. ಇಂದು ಬೆಳಿಗ್ಗೆ ದೇಶದಾದ್ಯಂತ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕಾ ಸಮೂಹದ ಮೇಲೆ ಬೆಂಗಳೂರಿನಲ್ಲೂ ಹಠಾತ್ ಧಾಳಿಯನ್ನು ಮಾಡುತ್ತಿದ್ದಾರೆ. ಆ ರೀತಿಯ ಸುದ್ದಿ ಬಂದಿರುವಂತಹದ್ದು ನಿಜವಾಗಿದ್ದರೆ...

ಅಧ್ಯಕ್ಷರು.— ಅವರು ಏನು ಹೇಳುತ್ತಿದ್ದಾರೆ ?

ಶ್ರೀ ಸಿ. ಬೈರೇಗೌಡ.— ಇದು ನಿಜವಾಗಿದ್ದರೆ, ನಾನು ರಾಜ್ಯ ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರಿನಲ್ಲಿರುವಂತಹ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕಾ ಕಛೇರಿಯ ಮೇಲೆ ಧಾಳಿ ನಡೆಯುತ್ತಿದೆ ಎಂಬ ಮಾತನ್ನು ಕೇಳಿದ್ದೇನೆ. ಹಾಗೇನಾದರೂ ನಡೆದಿದ್ದರೆ ಅಲ್ಲಿ ಅಂತಹ ರಾಷ್ಟ್ರ ವಿರೋಧಿ ಚಟುವಟಿಕೆಗಳು ಪತ್ತೆ ಆಗಿವೆಯೋ...?

(ಗೊಂದಲ)

ಅಧ್ಯಕ್ಷರು.— ಶ್ರೀಮಾನ್ ಬೈರೇಗೌಡರೇ, ನೀವು ನಡುವೆ ಈ ರೀತಿಯಾಗಿ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ, ಇದು ಸರಿಯಲ್ಲ. ದಯಮಾಡಿ ಕುಳಿತುಕೊಳ್ಳಿ. ಈ ತರಹದ ಸುದ್ದಿಯನ್ನು ತಂದು ಹರಡುವಂತಹದ್ದು ಸರಿಯಲ್ಲ. ಇನ್‌ಫರ್ಮೇಷನ್ ಮಂತ್ರಿಗಳು ಇದ್ದಾರೆ. ಎಲ್ಲರೂ ಕೂಡಿ. ಬರಗಾಲದ ವಿಷಯಕ್ಕಿಂತ ಮಹತ್ವದ್ದು ಇನ್ನು ಯಾವ ವಿಷಯ ಇದೆ ?

ಶ್ರೀ ಆರ್. ವೆಂಕಟರಾಮಯ್ಯ.— ಶ್ರೀಮಾನ್ ಬೈರೇಗೌಡರು ಹೇಳಿದ್ದು ಸರಿಯಾಗಿಯೇ ಇದೆ. ಅವರು ಹೇಳಿದ್ದುದು ನಿಜ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕಾ ಕಛೇರಿಯ ಮೇಲೆ ಧಾಳಿ ನಡೆದಿದೆ. ರೈಡ್ ಮಾಡಿದ್ದಾರೆ. ಅದನ್ನು ನಾವು ಖಂಡಿಸಬೇಕಾಗುತ್ತದೆ.

ಅಧ್ಯಕ್ಷರು.— ತಾವು ಸುಮ್ಮನೆ ಏಕೆ ಮಾತನಾಡುತ್ತಿದ್ದೀರಿ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಇದೆಲ್ಲಾ ರೆಕಾರ್ಡ್ ಆಗಬೇಕೆ ? ಯೋಚನೆಗೆ ಬಂದದ್ದನ್ನೆಲ್ಲಾ ಹೇಳಿದರೂ ಅದು ರೆಕಾರ್ಡ್ ಆಗಬೇಕೆ ?

ಶ್ರೀ ಎಸ್. ಜಿ. ನಂಜಯ್ಯನ ಮಠ್.— ಈಗ ತಾವು Nothing will go on Record ಎಂದು ಹೇಳಲೇ ಇಲ್ಲ. ಹಿಂದೆ ತಾವು ಅನೇಕ ಸಾರಿ ಈ ರೀತಿ ಹೇಳುತ್ತಿದ್ದೀರಿ.

ಶ್ರೀ ಆರ್. ವೆಂಕಟರಾಮಯ್ಯ.— ಶ್ರೀಮಾನ್ ಬೈರೇಗೌಡರು ಹೇಳಿದ್ದಾಗ ಸಿ.ಬಿ.ಐ. ರೈಡ್ ಮಾಡುತ್ತಿದ್ದಾರೆ. ಇದನ್ನು ಖಂಡಿಸಬೇಕಾಗುತ್ತದೆ.

ಅಧ್ಯಕ್ಷರು.— ನಿರಾಧಾರವಾದ ಸುದ್ದಿಯನ್ನು ಇಲ್ಲಿ ಏನನ್ನೂ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಸಿ. ಬೈರೇಗೌಡ.— ಇದು ಸುದ್ದಿಯನ್ನು ಹಬ್ಬಿಸತಕ್ಕಂತಹದ್ದಲ್ಲ, ನಡೆದಿರತಕ್ಕ ನಿಜವಾದ ಸುದ್ದಿ.

(ಗೊಂದಲ)

ಶ್ರೀ ಎಸ್. ಜಿ. ನಂಜಯ್ಯನಮಠ್ (ಗುಳೇದಗುಡ್ಡ).— ಮಾನ್ಯ ಅಧ್ಯಕ್ಷರೇ...

ಶ್ರೀ ಸಿ. ಭೈರೇಗೌಡ.— ಅಧ್ಯಕ್ಷರೇ, ನಾನು ಕೇಳಿದ... (ಗೊಂದಲ)

ಅಧ್ಯಕ್ಷರು.— ನಾನು ಸಭೆ ನಡೆಸಬೇಕೋ ಬೇಡವೋ ? ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ.— ಸರ್ಕಾರ ಈ ಬಗ್ಗೆ ಹೇಳಿಕೆ ಕೊಡಲಿ. (ಗೊಂದಲ)

MR. SPEAKER.— Nothing will go on record.

ಶ್ರೀ ಜೆ. ಎಚ್. ಪಟೇಲ್.— ಅಧ್ಯಕ್ಷರೇ, ಸದನದ ಗಮನಕ್ಕೆ ಮತ್ತು ತಮ್ಮ ಗಮನಕ್ಕೆ ಮಾನ್ಯ ಸದಸ್ಯರು ತಂದಿರತಕ್ಕ ವಿಷಯ ಅಧಿಕೃತವಾಗಿ ಸರ್ಕಾರಕ್ಕೆ ಬಂದಿಲ್ಲ. ಟೆಲೆಕ್ಸ್ ಮೆಸೇಜ್‌ನ್ನು ಅವರೂ ನೋಡಿದ್ದಾರೆ. ಇಂಡಿಯನ್ ಎಕ್ಸ್‌ಪ್ರೆಸ್ ಗ್ರೂಪ್‌ನ ಆಫೀಸ್‌ಗಳ ಮೇಲೆ ಸಿ.ಬಿ.ಐ. ಆಫೀಸರ್ಸ್ ಭಾರತದಾದ್ಯಂತ ರೈಡ್ ಮಾಡುತ್ತಿದ್ದಾರೆಂದು ಟೆಲೆಕ್ಸ್‌ನಲ್ಲಿ ಬಂದಿದೆ. ಇದಕ್ಕೆ ಕಾರಣ ಗೊತ್ತಿಲ್ಲದೇ ಇರುವುದರಿಂದ...(ಗೊಂದಲ)

SRI R. VENKATARAMAIAH.—Bofors submarine deal ಪ್ರಕಟಣೆ ಮಾಡಿದ್ದಕ್ಕಾಗಿ ಅವರು ರೈಡ್ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.— ಮಾನ್ಯ ಅಡ್ಯಂತಾಯ. ಅವರೇ ತಾವು ಕುಳಿತುಕೊಳ್ಳಿ.

ಶ್ರೀ ಬಿ. ಎಂ. ಉಮರಬ್ಬ.— ಒಬ್ಬ ಮಹಿಳಾ ಪತ್ರಕರ್ತರ ಬಗ್ಗೆ...(ಗೊಂದಲ) ವಿಧಾನ ಪರಿಷತ್ತಿನ ಲಾಂಜ್‌ನಲ್ಲಿ phone ಮಾಡಿದರು ಎಂದು ಒಂದು ಸುದ್ದಿ ಬಂದಿದೆ. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ, ಪತ್ರಕರ್ತರ ಗೌರವದ ಬಗ್ಗೆ ಮಾತನಾಡುವ...

MR. SPEAKER.— Nothing will go on record.

* * *

† ಶ್ರೀ ಎಸ್. ಜಿ. ನಂಜಯ್ಯನಮಠ್ (ಗುಳೇದಗುಡ್ಡ).— ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕಿಂತ ಪೂರ್ವದಲ್ಲಿ ತಾವು ನನ್ನನ್ನು ತಾವು ಮಾತನಾಡಲು ಕರೆದ ಮೇಲೆ ಇಷ್ಟು ನಿಮಿಷಗಳು ಏನು ಕಳೆದು ಹೋದವು ಅವುಗಳ ಲೆಕ್ಕವನ್ನು ನನ್ನ ಲೆಕ್ಕಕ್ಕೇ ಸೇರಿಸದೆ ಬೈರೇಗೌಡರ ಲೆಕ್ಕಕ್ಕೇ ಸೇರಿಸಬೇಕು. ಈಗ ರಾಜ್ಯದಲ್ಲಿ ತೀವ್ರ ಬಂಗಾಲವನ್ನು ಜನ ಎದುರಿಸುತ್ತಿದ್ದಾರೆ. ಇದರ ಬಗ್ಗೆ ಸಾಕಷ್ಟು ರೀತಿಯಲ್ಲಿ ಬೆಳಿಗ್ಗೆಯಿಂದ ಚರ್ಚೆ ನಡೆಯುತ್ತಿದೆ. ಕಳೆದ ನಾಲ್ಕು ವರ್ಷಗಳಿಂದ ರಾಜ್ಯದ ಜನತೆ ಎರಡು ರೀತಿಯಿಂದ ಕಷ್ಟವನ್ನು ಅನುಭವಿಸುತ್ತಿದ್ದಾರೆ, ಒಂದನೆಯದು, ಪ್ರಕೃತಿಯ ವಿಕೋಪದಿಂದ ಬರ ಎನ್ನತಕ್ಕದ್ದು ಳಿವರ್ಷಗಳಿಂದ ಭಾರಿ ಪ್ರಮಾಣದಲ್ಲಿ ರಾಜ್ಯ ವ್ಯಾಪಿ ಹಬ್ಬಿ ಜನತೆಯನ್ನು ಸಂಕಷ್ಟಕ್ಕೀಡು ಮಾಡಿರತಕ್ಕದ್ದು ಒಂದು. ಪ್ರಕೃತಿ ವಿಕೋಪವಾಗಿರತಕ್ಕ ಸಂದರ್ಭದಲ್ಲಿ ಸರ್ಕಾರದ ಕರ್ತವ್ಯ ಬಹಳ ಮುಖ್ಯವಾಗಿರುತ್ತವೆ. ರಾಜ್ಯ ಸುಭಿಕ್ಷವಾಗಿರತಕ್ಕ ಸಂದರ್ಭದಲ್ಲಿ, ರಾಜ್ಯದ ಜನತೆಗೆ ರಾಜ್ಯ ಸರ್ಕಾರದ ಕಡೆ ಕಣ್ಣು ಎತ್ತಿ ನೋಡುವುದಕ್ಕೂ ಸಮಯ ಇರುವುದಿಲ್ಲ ಎನ್ನುವುದು ಜಗಜ್ಜಾಹಿರವಾದಂತಹ ಮಾತು. ಆದರೆ ಸರ್ಕಾರ ಅವಶ್ಯಕವಾಗಿ ಜನತೆಗೆ ಬೇಕಾಗುವ ಸೇವೆಯನ್ನು ಅಂದರೆ ಶಾಸಕರ ಸೇವೆಯ ಮೂಲಕವಾಗಿಯಾಗಲೀ, ಮಂತ್ರಿಗಳ ಸೇವೆಯ ಮೂಲಕವಾಗಿಯಾಗಲಿ, ಅಧಿಕಾರಿಗಳ ಸೇವೆಯ ಮೂಲಕ

*** Not recorded as ordered by the Chair.

ವಾಗಲೀ ಭಾರೀ ಪ್ರಮಾಣದಲ್ಲಿ ಜನತೆಗೆ ಅನುಕೂಲಗಳನ್ನು ಒದಗಿಸುವಂತಹ ಸಮಯದಲ್ಲಿ, ಬರಗಾಲ ಬಂದಿರತಕ್ಕ ಸಮಯದಲ್ಲಿ ಸರಕಾರ ಕಾರ್ಯವಂಚಿತರಾಗಿಬಿಟ್ಟರೆ ಕಷ್ಟವಾಗುತ್ತದೆ. ಆ ಕಡೆ ದೇವರ ಶಾಪದಿಂದ ಈ ಕಡೆ ಸರ್ಕಾರದ ಹೊಣೆಗೇಡಿತನದ ರೀತಿನೀತಿಯಿಂದ ಜನರ ಪರಿಸ್ಥಿತಿ ಹೇಗೆ, ಏನು, ಎನ್ನುವಂತಹ ಒಂದು ಗಂಭೀರವಾದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆ. ಪ್ರಕೃತಿಯ ವಿಕೋಪದಲ್ಲಿ, ನಮ್ಮ ಕೈಗೆ ಸಿಗುವಂತಹ ಎಲ್ಲ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ರಾಜ್ಯದ ಜವಾಬ್ದಾರಿಯನ್ನು ಹೊತ್ತಿರತಕ್ಕ ಜವಾಬ್ದಾರಿಯುತ ಜನ, ಜವಾಬ್ದಾರಿಯಿಂದ ಕೆಲಸವನ್ನು ನಿರ್ವಹಿಸದೇ ಇರುವುದರಿಂದ ಜನತೆ ನಾಲ್ಕು ವರ್ಷಗಳಿಂದ ಬರದ ಬೇಗೆಯಲ್ಲಿ ಬಿದ್ದಿದ್ದಾರೆನ್ನುವುದು ಜಗಜ್ಜಾಹೀರಾಗಿದೆ. ಕರ್ನಾಟಕದ ಪರಿಸ್ಥಿತಿ. ಯಾವ ರೀತಿಯಲ್ಲಿ ಜನತೆಗೆ ಕೂಲಿಗಾಗಿ ಕಾಳನ್ನು ಇಂತಹ ಸಂದರ್ಭಗಳಲ್ಲಿ ಸರ್ಕಾರ ಒದಗಿಸ ಬೇಕು ಎಂಬ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಹೋದವರ್ಷ ಆಚೆವರ್ಷ ಏನಾದರೂ ಕೆಲಸ ಮಾಡುವುದಕ್ಕೆ ಆಗುತ್ತಿತ್ತು. ಹೇಗೆಂದರೆ ತಾಲ್ಲೂಕು ಬೋರ್ಡ್‌ಗಳಲ್ಲಿ ಎನ್.ಆರ್.ಇ.ಪಿ ಕೆಲಸ ಕಾರ್ಯಗಳು ಸ್ವಲ್ಪವಾದರೂ ಆಗಿ ಜನರಿಗೆ ಅನುಕೂಲವಾಗುತ್ತಿತ್ತು. ಈ ವರ್ಷ ಆ ಪರಿಸ್ಥಿತಿಯನ್ನು ದೇವರೇ ಬಲ್ಲ. ಬರಗಾಲದ ಬಗ್ಗೆ ಸರ್ಕಾರದ ಅಧಿಕಾರಿಗಳನ್ನು ಮತ್ತು ಮಂತ್ರಿಗಳನ್ನು ಕೇಳಿದಾಗ ಎಲ್ಲ ಅಧಿಕಾರವನ್ನು ಜಿಲ್ಲಾಪರಿಷತ್‌ಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಜಿಲ್ಲಾಪರಿಷತ್‌ನಲ್ಲಿ ವಿಚಾರಿಸಿದರೆ ಬರಗಾಲ ಕಾಮಗಾರಿಗಾಗಿ ನಮಗೆ ಯಾವುದೇ ಹಣ ಬಂದಿಲ್ಲವೆಂದು ಹೇಳುತ್ತಾರೆ. ಮಂತ್ರಿಗಳ ಹೇಳಿಕೆ ಯಂತೂ ವಿಧಾನಸೌಧದಿಂದ ಎಲ್ಲ ಹಣವನ್ನು ಜಿಲ್ಲಾ ಪರಿಷತ್‌ಗೆ ಕೊಟ್ಟಿದ್ದೇವೆಂದು ಹೇಳುತ್ತದೆ. ಜಿಲ್ಲಾ ಪರಿಷತ್‌ನಲ್ಲಿ ಹೋಗಿ ನೋಡಿದರೆ ಅಲ್ಲಿ ಏನೂ ಇಲ್ಲ ಜನ ಸಂಕಷ್ಟದಲ್ಲಿದ್ದಾರೆ. ಬರಗಾಲ ಕಾಮಗಾರಿ ಗಳನ್ನು ಕೈಗೆತ್ತಿಕೊಂಡು ಜನರಿಗೆ ಕೆಲಸಕಾರ್ಯಗಳನ್ನು ಒದಗಿಸುವಂತಹ ಕೆಲಸವನ್ನು ಇನ್ನು ಮೇಲಾ ದರೂ ಮಾಡಿ. ಬರಗಾಲ ಕಾಮಗಾರಿ ಕೆಲಸದಲ್ಲಿ ರಸ್ತೆಗಳನ್ನು ಮಾಡತಕ್ಕದ್ದು ಕೆರೆಗಳ ಹೂಳನ್ನು ತೆಗೆಯತಕ್ಕದು ಒಡ್ಡುಗಳನ್ನು ಹಾಕತಕ್ಕದ್ದು ಇಂತಹ ಕೆಲಸಗಳು ಏನಿವೆ ಅವುಗಳ ಬಗ್ಗೆ ಜಿಲ್ಲಾದಲ್ಲಿ ವಿಚಾರಿಸಿದರೆ ನಮಗೆ ಇನ್ನೂ ಹಣ ಬಂದಿಲ್ಲವೆಂದು ಹೇಳುತ್ತಾರೆ. ಇವತ್ತು ಜನತಾ ಪಕ್ಷದ ಅಧ್ಯಕ್ಷ ರಾದಿಯಾಗಿ ಈ ಮಾತನ್ನು ಹೇಳುತ್ತಿದ್ದಾರೆ. ನಾವು ಕೇಳುತ್ತಿದ್ದೇವೆ ಇದು ಏತಕ್ಕೆ ಹೀಗಾಗಿದೆ ? ಇದು ಹೇಗಾಗಿದೆ ಅಂದರೆ ಗಂಡಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು. ಎನ್ನುವಹಾಗೆ ಆಗಿದೆ. ಹೀಗಾದರೆ ಹೇಗೆ ? ಜಿಲ್ಲಾ ಪರಿಷತ್‌ನಲ್ಲಿ ಹೋಗಿ ಕೇಳಿದರೆ ಸಿಗತಕ್ಕ ಉತ್ತರ ಶೇಕಡ ೯೧ರಷ್ಟು ಹಣ ಸರ್ಕಾರಿ ನೌಕರರ ಸಂಬಳಕ್ಕೆ ಖರ್ಚು ಮಾಡಿದ್ದೇವೆ. ಉಳಿದ ಶೇಕಡ ೯ ರಷ್ಟು ಹಣದಲ್ಲಿ ಅಧಿಕಾರಿಗಳ ಕಾರುಗಳ ಪೆಟ್ರೋಲ್ ಭತ್ಯ ಇದಕ್ಕೆ ಆಗಿದೆ.

ಇನ್ನು ಮಂಡಲ ಪಂಚಾಯಿತಿಗಳಲ್ಲಿ ನಾವು ಅಭಿವೃದ್ಧಿ ಕೆಲಸಗಳು ಆಗಿವೆಯೆಂದು ನೋಡಿದರೆ ಅಲ್ಲಿ ಶುಕ್ರವಾರದ ಪೂಜೆಗೆ ಊದುಬತ್ತಿ ಹಚ್ಚಲಿಕ್ಕೆ ೫ ಪೈಸೆಯಿಲ್ಲ. ಮಂಡಲ ಪಂಚಾಯಿತಿಗಳ ಪರಿಸ್ಥಿತಿ ಹೀಗಿದೆ. ನಾವು ಜನಸಂಖ್ಯೆಯ ಆಧಾರದ ಮೇಲೆ ಮಂಡಲ ಪಂಚಾಯಿತಿಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹಾಗೂ ಆ ರೀತಿ ಮಂಜೂರು ಮಾಡಿದ್ದೇವೆಂದು ಮಾನ್ಯ ನಜೀರ್‌ಸಾಬ್ ರವರು ಹೇಳಿದ್ದು ಹೇಳಿದ್ದೇ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ೮೯೨ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಪತ್ರಿಕೆಗಳಿಗೆ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಮಂಡಲ ಪಂಚಾಯತ್‌ಗಳಲ್ಲಿರತಕ್ಕ ಒಮ್ಮೆಯಾದರೂ ಅಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಪತ್ರಿಕೆಗಳಲ್ಲಿ ಮಾನ್ಯ ಬೊಮ್ಮಾಯಿಯವರ ಹೇಳಿಕೆ ಇದ್ದೇ ಇರುತ್ತದೆ ರಾಜ್ಯ ಸರ್ಕಾರದ ಆರ್ಥಿಕಸ್ಥಿತಿ ಸುಭದ್ರ ವಾಗಿದೆಯೆಂದು ಅವರು ಹೇಳುತ್ತಾರೆ. ಕೆಲವು ಮಂತ್ರಿಗಳು, ಮಾನ್ಯ ವೀರಣ್ಣನವರು, ರಾಮಯ್ಯ ನವರು ಆರ್ಥಿಕ ಪರಿಸ್ಥಿತಿ ಗಂಭೀರವಾಗಿದೆ ಎಂಬುದನ್ನು ವಿರೋಧ ಮಾಡಿದ್ದಾರೆ. ನಮ್ಮ ರಾಜ್ಯದ ಆರ್ಥಿಕಸ್ಥಿತಿ ಸುಭದ್ರವಾಗಿದೆಯೆಂದು ಅವರು ಹೇಳುವುದು, ಮತ್ತೊಬ್ಬರು ಸುಭದ್ರವಾಗಿಲ್ಲವೆಂದು ಹೇಳುವುದು ಏನಿದು ? ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ ಅವರ ಹೇಳಿಕೆಯನ್ನು ಮೆಚ್ಚಬೇಕಾಗಿದೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲವೆಂದು ಹೇಳಿದ್ದಾರೆ. ಒಂದೇ ಸಚಿವ ಸಂಪುಟದ ಸದಸ್ಯರೊಬ್ಬರು ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಭದ್ರವಾಗಿಲ್ಲವೆಂದು ಹೇಳುತ್ತಾರೆ. ಖಾತೆಯನ್ನು ಹೊಂದಿರುವವರು ಆರ್ಥಿಕ ಪರಿಸ್ಥಿತಿ ಅಭದ್ರವಾಗಿದೆ ಸುಭದ್ರವಾಗಿಲ್ಲ ವೆಂದು ಹೇಳುತ್ತಾರೆ ಇದೊಂದು ವಿಪರ್ಯಾಸವಾದ ಪರಿಸ್ಥಿತಿ ಉಂಟಾಗಿದೆ ಕಷ್ಟದ ಪರಿಸ್ಥಿತಿಯನ್ನು ಶಾಸಕರು ಅನುಭವಿಸುತ್ತಿದ್ದೇವೆ. ಮಾನ್ಯ ಬೊಮ್ಮಾಯಿಯವರು ಪತ್ರಿಕಾ ಹೇಳಿಕೆಗಳನ್ನು ಹುಬ್ಬಳ್ಳಿ-ಧಾರವಾಡಗಳಲ್ಲಿ ಕೊಡುತ್ತಿದ್ದಾರೆ. ಬೆಂಗಳೂರಿನಿಂದ ಅವರ ಹೇಳಿಕೆಗಳು ಒಂದೂ ಬಂದಿಲ್ಲ, ಅವರು ಪತ್ರಿಕಾ ಸಂದರ್ಶನವನ್ನು ಹುಬ್ಬಳ್ಳಿಯಲ್ಲೇ ಮಾಡುತ್ತಾರೆ, ಎಲ್ಲಿಯಾದರೂ ಮಾಡಿಕೊಳ್ಳಲಿ. ೨೦ಕೋಟಿ

ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಆಮೇಲೆ ೨೦೦ ಕೋಟಿ ರೂಪಾಯಿ ಬಿಡುಗಡೆ ಮಾಡಲು ಕೇಳಿಕೊಂಡಿದ್ದೇವೆಂದು ಅವರ ಹೇಳಿಕೆ ಪತ್ರಿಕೆಗಳಲ್ಲಿ ಬರುತ್ತವೆ. ಇಷ್ಟೊಂದು ಎಲ್ಲಿ ಹೋಯಿತು ಎಂದು ಜನರು ನಮ್ಮನ್ನು ಕೇಳುತ್ತಾರೆ ನಾವೇನು ಹೇಳಬೇಕು ? ಜನರ ಪ್ರಶ್ನೆಗೆ ನಾವು ಯಾವ ಉತ್ತರವನ್ನು ಕೊಡಬೇಕು ? ಇವತ್ತು ರಾಜ್ಯದಲ್ಲಿ ನಾಲ್ಕು ವರ್ಷಗಳ ಕಾಲ ಬರ ಬಿದ್ದಿದೆ. ಆರು ನೂರು ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಆದ್ದರಿಂದ ಖರ್ಚು ಮಾಡುವುದಕ್ಕೆ ಹಣ ಇಲ್ಲ ಎನ್ನತಕ್ಕದನ್ನು ಹೇಳಿ ಈ ಸತ್ಯವನ್ನು ಹೇಳುವುದಕ್ಕೆ ಸರ್ಕಾರ ಕಲಿತುಕೊಳ್ಳಲಿ ಎಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇವರು ಸುಳ್ಳು ಹೇಳುವುದು ಯಾವ ಪರಿಸ್ಥಿತಿಗೆ ಬಂದಿದೆ ಎಂದರೆ ಒಂದು ರೋಡಿಗೆ ಮಣ್ಣು ಹಾಕತಕ್ಕಂಥ ಪರಿಸ್ಥಿತಿ ಬಂದರೆ ಅದು ಮಂಡಲ್ ಪಂಚಾಯತ್‌ಗೆ ಬರುತ್ತದೆ ಎಂದು ಜಿಲ್ಲಾ ಪರಿಷತ್ತಿನವರು ಹೇಳುತ್ತಾರೆ. ಮಂಡಲ್ ಪಂಚಾಯತ್ ನವರನ್ನು ಕೇಳಿದರೆ ನಮಗೆ ಬಂದಿದ್ದು ಆರುವರೆ ಸಾವಿರ ರೂಪಾಯಿಗಳು. ಅದು ಸಂಬಳ ಕೊಡಲಿಕ್ಕೇ ಮುಗಿದುಹೋಯಿತು ಎಂದು ಹೇಳುತ್ತಾರೆ. ವಿಧಾನ ಸಭೆಯಲ್ಲಿ ಕೇಳಿದರೆ ಅಧಿಕಾರ ವಿಕೇಂದ್ರೀಕರಣಕ್ಕಾಗಿ ಎಲ್ಲವನ್ನೂ ಕೊಟ್ಟು ಬಿಟ್ಟಿದ್ದೇವೆ ಎಂದು ಹೇಳುತ್ತಾರೆ. ಹೀಗಾಗಿ ಸಂಪೂರ್ಣವಾಗಿ ರಾಜ್ಯದ ಆಡಳಿತ ಪರಿಸ್ಥಿತಿ ಕುಸಿದುಹೋಗಿದೆ ಎಂದು ರಾಜ್ಯದ ಜನರು ಮಾತನಾಡಿಕೊಳ್ಳುತ್ತಿದ್ದಾರೆ ಎಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ ಅಧಿಕಾರ ವಿಕೇಂದ್ರೀಕರಣ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ಆದರೆ ಪತ್ರಿಕೆಗಳಲ್ಲಿ ಕೋಟಿಗಟ್ಟಲೆ ಅಂಕಿಗಳನಗೆ ಓಡಿಸಿ ನಿಮ್ಮ ಪಕ್ಷದ ಶಾಸಕರೂ ಕೂಡ ಎಂತಹ ಒಂದು ಸಂದಿಗ್ಧವಾದ, ಸಂಕಟಕರ ಪರಿಸ್ಥಿತಿಗೆ ಬಂದಿದ್ದಾರೆ ಎಂದರೆ, ಮಾನ್ಯ ಸ್ನೇಹಿತರಾಗಿರತಕ್ಕಂಥ ಶ್ರೀ ಬಾಬುರೆಡ್ಡಿ ತುಂಗಳ್ ಅವರು ಹಳ್ಳಿಗಳಲ್ಲಿ ಶಾಸಕರು ಅಡ್ಡಾಡತಕ್ಕಂಥ ಪರಿಸ್ಥಿತಿ ಇಲ್ಲ ಎಂಬ ಮಾತನ್ನು ಹೇಳಿದ್ದಾರೆ. ಈ ಪರಿಸ್ಥಿತಿಯನ್ನು ನಾವು ಕೂಡ ಅನುಭವಿಸುತ್ತಿದ್ದೇವೆ. ಒಂದು ದಿಟವಾದ ಹೇಳಿಕೆಯನ್ನು ಕೊಟ್ಟುಬಿಡಿ. ಆರ್ಥಿಕ ಪರಿಸ್ಥಿತಿ ಸರಿ ಇಲ್ಲದ ಕಾರಣ ಮಾರ್ಚ್ ತಿಂಗಳವರೆಗೆ ಯಾವುದೇ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವುದಿಲ್ಲ. ಸುಮ್ಮನೆ ನಮ್ಮನ್ನು ನಂಬಬೇಡಿ ನಮ್ಮ ಪಾಡಿಗೆ ನಾವು ರಾಜ್ಯದಲ್ಲಿ ರಾಜ್ಯಭಾರ ಮಾಡಿಕೊಂಡಿರುತ್ತೇವೆ. ನೀವು ಎಲ್ಲಿಯಾದರೂ ಹೋಗಿ ಜೀವನ ಮಾಡಿಕೊಳ್ಳಿ ಎಂದು ಹೇಳಿ. ನೀವು ಜಿಲ್ಲಾಪರಿಷತ್ತು ಮಾಡುತ್ತದೆ ಎಂದು ಹೇಳುವುದು, ಜಿಲ್ಲಾಪರಿಷತ್ತಿನವರು ಮಂಡಲ್ ಪಂಚಾಯತ್‌ಗೆ ಹೋಗಿ ಎಂದು ಹೇಳುವುದು. ಅಲ್ಲಿಂದ ಇಲ್ಲಿ ಓಡಾಡುವುದರಲ್ಲೇ ಸಾರ್ವಜನಿಕರ ಕೆಲಸ ಆಗುವ ಪರಿಸ್ಥಿತಿ ಬಂದಿದೆಯೇ ಹೊರತಾಗಿ, ನೇರವಾಗಿ ಅವರಿಗೆ ಉಪಯೋಗ ಮಾಡಿಕೊಡುವ ಸಂದರ್ಭ ನಮ್ಮ ರಾಜ್ಯದಲ್ಲಿ ಕಂಡು ಬರುತ್ತಿಲ್ಲ. ಇದರ ಜೊತೆಗೆ ಮತ್ತೊಂದು ಭಾರವನ್ನು ಜನರ ಮೇಲೆ ಹೊರಿಸುತ್ತಿದ್ದಾರೆ ಆ ಕಡೆಯ ಅಂದರೆ ಟ್ರೆಜರಿ ಬೆಂಚಿನ ಶಾಸಕರು ಹೇಳಿದರು, ವಸೂಲಾತಿ ಕ್ರಮವನ್ನು ಭಾರಿ ಪ್ರಮಾಣದಲ್ಲಿ ರೈತರಿಗೆ ತೊಂದರೆ ಕೊಟ್ಟು ಮಾಡುತ್ತಿಲ್ಲ ನಮ್ಮ ಸರ್ಕಾರ ಎಂದು ಹೇಳಿದರು. ದಯವಿಟ್ಟು ಈ ಮಾತನ್ನು ಹೇಳಬೇಡಿ. ಇವತ್ತು ಸರ್ಕಾರ ತಮ್ಮ ಲೋಪದೋಷಗಳನ್ನು ಮುಚ್ಚಿಟ್ಟುಕೊಳ್ಳಲು ಈ ರೀತಿಯ ಹೇಳಿಕೆಯನ್ನು ಕೊಡಬಾರದು. ಎಂತಹ ಪರಿಸ್ಥಿತಿ ಹಳ್ಳಿಗಳಲ್ಲಿ ನಡೆಯುತ್ತಿದೆ ಎಂದರೆ, ಹತ್ತು ಹತ್ತು ವರ್ಷಗಳ ಕಾಲ ನೋಟಿಸ್ ಕೊಡದೆ ಈಗ ಹಠಾತ್ತನೆ ವಸೂಲು ಮಾಡಬೇಕೆಂದು ಬಂದು ಬಡರೈತರ ಮನೆಯನ್ನು ಜಪ್ತಿ ಮಾಡತಕ್ಕಂಥ ಸ್ಥಿತಿ ಎಂದು ಅಧಿಕಾರಿಗಳ ಮೇಲೆ ಒತ್ತಡ ಹಾಕುತ್ತಿದ್ದಾರೆ. ಸರ್ಕಾರದ ಆರ್ಥಿಕ ಪರಿಸ್ಥಿತಿ ಮೊದಲೇ ಸರಿಯಿಲ್ಲದ ಕಾರಣ ಇಂತಹ ಒಂದು ಇಬ್ಬಗೆಯ ನೀತಿ ಸರ್ಕಾರದಲ್ಲಿ ಕಂಡು ಬರುತ್ತಿದೆ ಒಂದು ಕಡೆ ಅಧಿಕಾರಿಗಳಿಗೆ ಹೋಗಿ ಜಪ್ತಿಮಾಡಿ ಕೊಡ, ತಂಬಿಗೆ, ಹಂಡೆಗಳನ್ನು ಮಾರಿ ಹಣ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ನನ್ನ ಮತಕ್ಷೇತ್ರದಲ್ಲೇ ಕೆಲವೊಂದು ಕಡೆ ಪಂಪುಸೆಟ್ಟುಗಳನ್ನು ಬಿಚ್ಚಿ ಮೋಟಾರುಗಳನ್ನು ಕಿತ್ತುಕೊಂಡು ಪಿ. ಎಲ್. ಡಿ. ಬ್ಯಾಂಕಿನಲ್ಲಿ ಇಟ್ಟುಕೊಂಡಿರುವ ಉದಾಹರಣೆಗಳು ಬೇಕಾದಷ್ಟು ಇವೆ. ಇದರ ಜೊತೆಗೆ ಬರದ ಬರೆ, ಮೊದಲೇ ಸಾಕಷ್ಟು ಮಳೆಯಾಗಿಲ್ಲ. ಹೊಳೆ ಬತ್ತಿದ್ದು ಪಂಪುಸೆಟ್ಟಿಗೆ ನೀರೆ ಇಲ್ಲ ಅವರ ಮನೆಯನ್ನು ಹೊಕ್ಕು ವಸೂಲಿ ಮಾಡತಕ್ಕಂಥ ಕ್ರಮ ಮತ್ತೊಂದು ಕಡೆ ದಯವಿಟ್ಟು ಈ ಕ್ರಮವನ್ನು ನಿಲ್ಲಿಸಿ. ಜನತೆಯ ಶಾಪಕ್ಕೆ ಗುರಿಯಾಗಬೇಡಿ ಎಂದು ನಾನು ತಮ್ಮ ಮೂಲಕ ರಾಜ್ಯ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಏಕೆಂದರೆ ಎಂತಹ ಪರಿಸ್ಥಿತಿ ಇದೆ ಎಂದರೆ. ಹತ್ತು ವರ್ಷಗಳಿಂದ ಬಾಕಿ ಇದ್ದ ಜನತಾ ಮನೆಯ ಬಿಲ್ಲುಗಳನ್ನು, ಈಗ ವಸೂಲಿ ಮಾಡುತ್ತಿದ್ದಾರೆ. ೧೬೪ ಕೋಟಿ ರೂಪಾಯಿಯಷ್ಟು ವಿದ್ಯುತ್ ಬಾಕಿ ದೊಡ್ಡ ದೊಡ್ಡ ಫ್ಯಾಕ್ಟರಿಗಳಿಂದ ಬರಬೇಕಾದಂಥ ಸಂದರ್ಭ ಇದ್ದಾಗ ಎರಡು ರೂಪಾಯಿ ಭಾಗ್ಯಜ್ಯೋತಿ ಬಾಬಿನ ಬಾಕಿಯನ್ನು ವಸೂಲಿ ಮಾಡಲು ಆತ್ಮ

ಮನೆಯನ್ನು ಜಪ್ತಿ ಮಾಡುವುದು ಯಾವ ನ್ಯಾಯ ? ದೊಡ್ಡ ದೊಡ್ಡ ಬಂಡವಾಳ ಶಾಹಿಗಳಿಂದ ಬರಬೇಕಾದ ಬಾಕಿಯನ್ನು ಬಿಟ್ಟು ಭಾಗ್ಯಜ್ಯೋತಿಯ ಐದು ರೂಪಾಯಿಗಳನ್ನು ಬಾಕಿ ಕೊಡಬೇಕೆಂಬ ಕಾರಣಕ್ಕಾಗಿ ಲೈಟ್ ಕಟ್ ಮಾಡತಕ್ಕಂಥ ಸ್ಥಿತಿಯನ್ನು ನೋಡಿದರೆ ಯಾರ ಪರವಾಗಿ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಕೇಳಬೇಕಾಗುತ್ತದೆ. ಸರಕಾರದವರು ಇಂತಹ ದೊಡ್ಡ ದೊಡ್ಡ ಬಂಡವಾಳ ಶಾಹಿಗಳ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಜನ ಬೇಜಾರುಪಟ್ಟುಕೊಂಡಿದ್ದಾರೆ ಎಂದು ದಯವಿಟ್ಟು ತಿಳಿದುಕೊಳ್ಳಬೇಕು.

೫-೦೦ ಪಿ. ಎಂ.

ಶ್ರೀ ಜೆ. ಹೆಚ್. ಪಟೇಲ್.—ಭಾಗ್ಯಜ್ಯೋತಿ ಬಾಕಿಗೋಸ್ಕರ ಯಾವ ಕಡೆಯೂ ಡಿಸ್-ಕನೆಕ್ಟ್ ಮಾಡಕೂಡದೆಂದು ಹೇಳಿದ್ದೇವೆ...

(ಗೊಂದಲ)

ಶ್ರೀ ಎಸ್. ಜಿ. ಸಂಜಯ್ಯನಮಠ್.—ಎಲ್ಲಾ ಕಡೆ ಡಿಸ್-ಕನೆಕ್ಟ್ ಮಾಡುತ್ತಿದ್ದಾರೆ...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಭಾಗ್ಯಜ್ಯೋತಿಯವರೂ ಕೂಡ ಹಣ ಕಟ್ಟಬೇಕಾಗುತ್ತದೆ. ಆದರೆ ಬಾಕಿಯನ್ನು ಒಂದೇ ಸಲಕ್ಕೆ ವಸೂಲ್ಮಾಡುವುದು ಕಷ್ಟವಿದೆ. ನಾವು ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಭಾಗ್ಯಜ್ಯೋತಿ ಹಣ ಯಾರು ಕಟ್ಟಿಲ್ಲ, ಅಂತಹವರಿಗೆ ಡಿಸ್-ಕನೆಕ್ಟ್ ಮಾಡಕೂಡದು ಎಂದು ತಿಳಿಸಿದ್ದೇವೆ. ಒಂದು ವೇಳೆ ಡಿಸ್-ಕನೆಕ್ಟ್ ಮಾಡಿದ್ದರೆ. ಕೂಡಲೇ ಕನೆಕ್ಷನ್ ಕೊಡಬೇಕೆಂದು ಆದೇಶ ಕೊಟ್ಟಿದ್ದೇವೆ. ಬಾಕಿ ಹಣವನ್ನು ಕಂತುಗಳ ಮುಖಾಂತರ ವಸೂಲ್ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಎಸ್. ಜಿ. ಸಂಜಯ್ಯನಮಠ್.—ಕೇವಲ ಎರಡೆರಡು ಬಲ್ಬ್ ಹಾಕುವ ಕಡೆಯೂ ಕಟ್ ಮಾಡುವುದು. ನಿಮ್ಮ ೧೭೪ ಕೋಟಿ ರೂಪಾಯಿಗಳ ಹಣ ಎಲ್ಲಿ ಹೋಯಿತು. ಎರಡು ಲೈಟ್ ಇಟ್ಟುಕೊಂಡು ೬— ರೂಪಾಯಿಗಳ ಬಿಲ್ಲಿನಲ್ಲಿ ನೀವು ಕಟ್ ಮಾಡುವುದು ಯಾವ ಸಮಾಜವಾದ, ಸಮಾಜವಾದದ ಆಧಾರದ ಮೇಲೆ, ಮಾನ್ಯ ಪಟೇಲರ ವ್ಯಾಪ್ತಿಯಲ್ಲಿ ಇದು ನಡೆಯುತ್ತಿರುವುದು ವಿಪರ್ಯಾಸ.

ಇನ್ನು ನಮ್ಮ ಜಿಲ್ಲೆಯಲ್ಲಿ ಮಳೆ ಆಗಿರುವ ಸುದ್ದಿ ಇದೆ. ಈ ಸುದ್ದಿ ಸರ್ಕಾರಿ ಅಧಿಕಾರಿಗಳಿಂದ ಬಂದಿರಬಹುದು ಅಥವಾ ಸಾರ್ವಜನಿಕರಿಂದ ಬಂದಿರಬಹುದು ಆದರೆ ಮಳೆ ಯಾವಾಗ ಆಗಿದೆ ಎಂದರೆ " ಸಾಯುವ ಮುಂದೆ ಔಷಧಿ ತಂದುಕೊಟ್ಟರೆ ಅವನು ಬದುಕುವುದಕ್ಕೆ ಸಾಧ್ಯವಾಗುತ್ತದೆಯೇ " ಎಂಬಂತೆ, ಮಳೆ ಈಗ ಬಂದಿರಬಹುದು ಆದರೆ ಮುಂಗಾರು ಬೆಳೆ ಪೂರ್ತಿ ಬತ್ತಿ ಹೋಗುವ ಸಂದರ್ಭದಲ್ಲಿ ಮಳೆ ಆಗಿದೆ. ಮುಂಗಾರು ಬೆಳೆಯುವ ಸ್ಥಿತಿಯಲ್ಲಿಲ್ಲ ಸೂರ್ಯಕಾಂತಿ ಬೆಳೆ ಸ್ವಲ್ಪ ಬರಬಹುದು. ಆದರೆ ಕುಡಿಯುವ ನೀರಿನ ಪರಿಸ್ಥಿತಿ ಸುಧಾರಿಸಿದೆ. ಆದರೆ ಇದನ್ನೇ ಆಧಾರವಾಗಿಟ್ಟುಕೊಂಡು ನಮ್ಮ ಭಾಗದಲ್ಲಿ ಬರಗಾಲವಿಲ್ಲ ಎಂಬ ತೀರ್ಮಾನಕ್ಕೆ ಬರಬಾರದು. ಮುಂಗಾರು ಸಂಪೂರ್ಣವಾಗಿ ಒಣಗಿ ಹೋಗಿರುತ್ತದೆ. ಉಳಿದಿರುವ ಬೆಳೆಗೆ ಹಾಗೂ ಮುಂದೆ ಬೆಳೆಯುವ ಬೆಳೆಗಳಿಗೆ ಸ್ವಲ್ಪ ಅನುಕೂಲವಾಗುತ್ತದೆ ಆದುದರಿಂದ ಈ ಸಂದರ್ಭದಲ್ಲಿ ರೈತರ ಸಾಲ ವಸೂಲಾತಿಗೆ ನಿಮ್ಮ ಅಧಿಕಾರಿಗಳನ್ನು ಕಳುಹಿಸಬೇಡಿ. ಎಂದು ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಂಡು, ರಾಜ್ಯದಲ್ಲಿರತಕ್ಕ ಬರ ಪರಿಹಾರದ ಅಂಕಿಸಂಖ್ಯೆಗಳನ್ನು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟು ಪರಿಹಾರ ಮಾಡುವುದಕ್ಕೆ ಹೋಗಬೇಡಿ. ನಿಜವಾದ ಕೆಲಸ ಕಾರ್ಯಗಳಲ್ಲಿ ತೊಡಗಬೇಕೆಂದು ಹೇಳುತ್ತೇನೆ. ಜಿಲ್ಲಾ ಪರಿಷತ್ತಿನ ಮುಖಾಂತರವಾಗಲೀ, ಅಥವಾ ಯಾವುದರ ಮುಖಾಂತರವಾದರೂ ಆಗಲೀ ಕೆಲಸ ಆಗಬೇಕು, ಒಬ್ಬರ ಮೇಲೆ ಒಬ್ಬರು ಹೇಳಿಕೆ ಕೊಟ್ಟು ಜವಾಬ್ದಾರಿಯಿಂದ ನುಣಚಿಕೊಂಡು ರಾಜ್ಯದ ಜನತೆಗೆ ತೊಂದರೆ ಮಾಡಬೇಡಿ ನೀವು ಬರೀ ಪತ್ರಿಕಾ ಹೇಳಿಕೆ ಕೊಟ್ಟು ಪತ್ರಿಕಾ ಹುಲಿಗಳಾಗಬೇಡಿ. ನಿಜವಾದ ಕೆಲಸ ಮಾಡಿ ಎಂದು ತಮ್ಮ ಮುಖಾಂತರ ಮನವಿ ಮಾಡಿಕೊಂಡು, ನಿರ್ದಾಕ್ಷಿಣ್ಯವಾಗಿ ರೈತರ ವಸೂಲಾತಿಯನ್ನು ನಿಲ್ಲಿಸ

ಬೇಕು. ಇಲ್ಲದೇ ಹೋದರೆ ರೈತ ಸಮುದಾಯ ಹೋರಾಟಕ್ಕೆ ಇಳಿಯಬೇಕಾಗುತ್ತದೆ, ಎಂಬ ಎಚ್ಚರಿಕೆಯನ್ನು ಕೊಡುತ್ತೇನೆ. ಅನಂತರ ನಮ್ಮ ಕಡೆ ರಾಮತಾಳ ಲಿಫ್ಟ್ ಇರಿಗೇಷನ್‌ನಿಂದ ನೀರು ಕೊಡುತ್ತಾ ಇಲ್ಲ ಎರಡು ಪಂಪ್‌ಗಳು ಕೆಟ್ಟು ಹೋಗಿವೆ, ಸುದ್ದನಕೊಳ ಹೊಳೆಯಲ್ಲಿ ನೀರು ಇಲ್ಲ. ೧೫-೬-೮೭ರಿಂದ ನೀರು ಕೊಡುತ್ತೇವೆಂದು ನೋಟೀಸ್ ಕೊಟ್ಟಿದ್ದಾರೆ' ನೀರು ಕೊಟ್ಟಿದ್ದೇವೆ ಎನ್ನುವಂಥ ದಾಖಲಾತಿಗಳನ್ನು ಸೃಷ್ಟಿಮಾಡಿಕೊಳ್ಳುವುದಕೋಸ್ಕರ ಈ ನೋಟೀಸ್ ಕೊಟ್ಟಿದ್ದಾರೆ. ಈ ಬಗ್ಗೆ ಸರ್ಕಾರದವರು ತೀವ್ರವಾಗಿ ಗಮನಹರಿಸಬೇಕು. ಹೊಳೆಯಲ್ಲಿ ನೀರು ಇಲ್ಲದೆ ನೀರಾವರಿ ಬೆಳೆಗಳಿಗೆ ನೀರು ಕೊಟ್ಟಿಲ್ಲ. ನೀರು ಕೊಟ್ಟಿದ್ದೇವೆಂದು ಹೇಳಿ ಎಕರೆವಾರು ಕರ ಹಾಕುವುದಕ್ಕೆ ಅಧಿಕಾರಿಗಳು ಸೂಚನೆ ಕೊಡುತ್ತಾರೆ. ಆದುದರಿಂದ ತಾವು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು, ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಬರ ಪರಿಹಾರ ಸಮಸ್ಯೆಯನ್ನು ತೀವ್ರವಾಗಿ ಎದುರಿಸಿ, ರಾಜ್ಯದ ಜನತೆ ಯಾವ ಸಂಕಷ್ಟದಲ್ಲಿದ್ದಾರೆ, ಆ ಸಂಕಷ್ಟದ ಸಂಕೋಲೆಗಳನ್ನು ಬಿಡಿಸಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಸಭಾಧ್ಯಕ್ಷರೇ, ಸುಮಾರು ನಿನ್ನೆಯಿಂದ ಬರಗಾಲದ ಉಲ್ಬಣದ ಬಗ್ಗೆ ಎರಡೂ ಕಡೆಯಿಂದ ಸಾಕಷ್ಟು ಜನ ಮಾತನಾಡಿದ್ದಾರೆ. ಇದು ಚರ್ಚೆಯಾಗುತ್ತಿರತಕ್ಕದ್ದು ಸತತವಾಗಿ ನಾಲ್ಕು ವರ್ಷಗಳಿಂದ. ಆದರೆ ನಾವು ಒಂದು ಸತ್ಯವನ್ನು ಮರೆತು ಈ ಚರ್ಚೆಯಲ್ಲಿ ಭಾಗವಹಿಸುತ್ತಿದ್ದೇವೆ ಎಂದರೆ ತಪ್ಪಾಗಲಾರದು ಸತತವಾಗಿ ಬರಗಾಲದ ಪರಿಸ್ಥಿತಿ ನಾಲ್ಕು ವರ್ಷಗಳಿಂದ ಬರಬೇಕಾದರೆ ಇದಕ್ಕೆ ಒಂದು ಹಿನ್ನೆಲೆ ಉಂಟು. ನಮ್ಮ ಎಕಲಾಜಿಕಲ್ ಸಿಸ್ಟಮ್ ಏನಿದೆ, ಅಂದರೆ ಪ್ರಕೃತಿ ಪರಿಸರ ಏನಿದೆ ಅದರ ಸಮತೋಲನ ಸರಿಯಾಗಿಲ್ಲದಿರುವುದರಿಂದ ನಾವು ಸತತವಾಗಿ ನಾಲ್ಕು ವರ್ಷಗಳಿಂದ ಬರಗಾಲವನ್ನು ಎದುರಿಸುತ್ತಿದ್ದೇವೆ ಇದಕ್ಕೆ ಶಾಶ್ವತವಾದಂತಹ ಒಂದು ಪರಿಹಾರವನ್ನು ನಾವು ಕಂಡುಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಜನತಾ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಕೋಟ್ಯಾಂತರ ಸಸಿಗಳನ್ನು ನೆಡುವುದರ ಮುಖಾಂತರ ಹಿಂದೆ ಕಾಡನ್ನು ಏನು ನಾಶ ಮಾಡಿದ್ದರು ಅದನ್ನು ಸರಿಪಡಿಸುತ್ತಿದೆ. ಕಾಡನ್ನು ನಾಶಮಾಡತಕ್ಕ, ಮರಗಿಡಗಳನ್ನು ಬೆಳಸದಿರತಕ್ಕ ಪ್ರವೃತ್ತಿ ಮುಂದುವರಿದರೆ ನಾಲ್ಕು ವರ್ಷ ಬಿಟ್ಟಿಕ್ಕೆ ಹದಿನಾರು ವರ್ಷಗಳಾದರೂ ಸಹ ಬರಗಾಲವನ್ನು ಎದುರಿಸುವುದಕ್ಕೆ ಆಗುವುದಿಲ್ಲ. ಆದುದರಿಂದ ಜನತಾ ಸರಕಾರ ಪ್ರತಿಯೊಂದು ಹಳ್ಳಿಹಳ್ಳಿಗಳಲ್ಲೂ, ಬೀದಿ ಬೀದಿಗಳಲ್ಲೂ ಮರಗಿಡಗಳನ್ನು ಬೆಳೆಸುತ್ತಿದೆ. ಬೆಂಗಳೂರು ನಗರವನ್ನು ತೆಗೆದುಕೊಂಡು ನೋಡಿದರೂ ಕೂಡಾ ಪ್ರತಿಯೊಂದು ಗಲ್ಲಿಗಲ್ಲಿಯಲ್ಲೂ ಕೂಡಾ ಮರಗಳನ್ನು ಬೆಳೆಸಲಾಗುತ್ತಿದೆ. ಪರಿಸರ ಸಮತೋಲನವನ್ನು ಇದರ ಮುಖಾಂತರ ಮಾಡಬಹುದೇ ಹೊರತು ಪ್ರಾರ್ಥನೆಯಿಂದಾಗಲೀ ಪೂಜೆಯಿಂದಾಗಲೀ ಮಾಡುವುದರಿಂದ ಮಳೆ ಬರತಕ್ಕದ್ದು ಸುಳ್ಳು. ಆದುದರಿಂದ ಇಂತಹ ಒಂದು ಬರಗಾಲವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಶಾಶ್ವತವಾದ ಒಂದು ಕಾರ್ಯಕ್ರಮವನ್ನು ನಾವು ರೂಪಿಸಿಕೊಳ್ಳಬೇಕೆಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಒಂದು ಕಡೆ ಮಳೆ ಬರಲಿಲ್ಲ, ಜನಕಷ್ಟದಿಂದ ನರಳುತ್ತಿದ್ದಾರೆ. ಆದರೆ ಇನ್ನೊಂದು ಕಡೆ, ಭ್ರಷ್ಟ, ಅಧಿಕಾರಿಗಳು, ಕಂಟ್ರಾಕ್ಟರ್‌ಗಳು, ರಾಜಕಾರಣಿಗಳು ಇದರಿಂದ ಲಾಭ ಪಡೆಯುವುದಕ್ಕೋಸ್ಕರ ಮಳೆ ಬರದೇ ಇರಲಿ ಎಂದು ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ಇದನ್ನು ನಾನು ಕಣ್ಣಾರೆ ನೋಡಿರತಕ್ಕದ್ದು ಉಂಟು. ಮಳೆ ಬರದೇ ಇದ್ದರೆ ಸಾಕು, ಸರಕಾರದಿಂದ ಸಾಕಷ್ಟು ದುಡ್ಡು ಬರುತ್ತದೆ ಈ ದುಡ್ಡನ್ನು ಹೊಡೆದು ನಾವು ನಮ್ಮ ಮನೆಯವರು ಉದ್ಧಾರವಾಗಬಹುದು ಎಂಬಂತಹಕ್ಕಂಥ ಭ್ರಷ್ಟ ಕಂಟ್ರಾಕ್ಟರುಗಳು ಅಧಿಕಾರಿಗಳು ರಾಜಕಾರಣಿಗಳು ನಮ್ಮ ಸಮಾಜದಲ್ಲಿದ್ದಾರೆ ಎಂದಾಗ ನಮಗೆ ಆಶ್ಚರ್ಯವಾಗದಿರದು. ಇವರ ಬಗ್ಗೆ ನಾವು ಎಚ್ಚರಿಕೆಯಿಂದ ಇರಬೇಕು. ನಮ್ಮ ಜನತಾ ಸರಕಾರವು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದಕ್ಕಾಗಿ ಮಾನ್ಯ ಕಂದಾಯ ಸಚಿವರು ೨೧೯ ಕೋಟಿ ರೂಪಾಯಿಗಳ ಒಂದು ಬೇಡಿಕೆಯನ್ನು ಕೇಂದ್ರ ಸರಕಾರದ ಮುಂದಿಟ್ಟಿದ್ದಾರೆ. ಈ ೨೧೯ ಕೋಟಿ ರೂಪಾಯಿಗಳೂ ಸಾಲದೇನೋ ಎಂಬತಕ್ಕಂಥ ನಂಬಿಕೆ ನನಗೆ ಬಂದಿದೆ. ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ಇನ್ನೂ ೭-೮ ತಿಂಗಳ ಕಾಲ ಮಳೆ ಬಾರದಿರಬಹುದು. ಮುಂದಿನ ವರ್ಷದ ಜುಲೈ ತಿಂಗಳವರೆಗೆ ಮಳೆಯನ್ನು ನಿರೀಕ್ಷೆ ಮಾಡುವಹಾಗೆ ಇಲ್ಲ ಆದುದರಿಂದ ಈ ೨೧೯ ಕೋಟಿ ರೂಪಾಯಿಗಳು ಬರ ಪರಿಹಾರಕ್ಕೆ ಸಾಲುವುದಿಲ್ಲ. ಮಾನ್ಯ ಸಚಿವರು

ಇದರ ಬಗ್ಗೆ ಇನ್ನೂ ಹೆಚ್ಚಿನ ಆಸಕ್ತಿಯನ್ನು ವಹಿಸಿ ಇನ್ನೂ ಹೆಚ್ಚಿನ ಬೇಡಿಕೆಯನ್ನು ಕೇಂದ್ರ ಸರಕಾರದ ಮುಂದೆ ಇಡಬೇಕು. ಕೇಂದ್ರ ಸರಕಾರ ಈಗಾಗಲೇ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿರುವುದರಲ್ಲಿ ಅನುಮಾನ ಇಲ್ಲ. ೨೯೯ ಕೋಟಿ ರೂಪಾಯಿ ಕೇಳಿದರೆ ಅವರು ೫೦ ಕೋಟಿ ಆಗುವುದಿಲ್ಲವೇ, ೪೦ ಕೋಟಿ ಆಗುವುದಿಲ್ಲವೇ ಎಂದು ಹೇಳುತ್ತಾರೆ. ಆದುದರಿಂದ ಬೇಡಿಕೆಯನ್ನು ಜಾಸ್ತಿ ಮಾಡಿದರೆ, ಅದರಲ್ಲಿ ಅರ್ಧವನ್ನಾದರೂ ಕೂಡಾ ಕೊಡಲು ಮುಂದೆ ಬರಬಹುದೆಂದು ಹೇಳುತ್ತಾ, ಮಾನ್ಯ ಸಚಿವರು ಈಗೇನು ಬೇಡಿಕೆಯನ್ನು ಇಟ್ಟಿದ್ದಾರೆ ಅದಕ್ಕಿಂತ ಹೆಚ್ಚು ಬೇಡಿಕೆಯನ್ನು ಕೇಂದ್ರ ಸರಕಾರದ ಮುಂದೆ ಇಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಜನತಾ ಸರಕಾರ ಅಧಿಕಾರಕ್ಕೆ ಬಂದ ಮೇಲೆ ೭೫ ಸಾವಿರ ಕೊಳವೆ ಬಾವಿಗಳನ್ನು ಹಳ್ಳಿ ಹಳ್ಳಿಗಳಲ್ಲಿ ತೋಡಿಸಿದುದರ ಫಲವಾಗಿ ಇವತ್ತು ಕುಡಿಯುವ ನೀರಿನ ಬವಣೆ ಸುಧಾರಿಸಿದೆ ಎಂಬ ಮಾತನ್ನು ಹೇಳುತ್ತೇನೆ. ಕಾಂಗ್ರೆಸ್ ಪಕ್ಷದವರು ತಮ್ಮ ೩೦ ವರ್ಷಗಳ ಅಧಿಕಾರದ ಅವಧಿಯಲ್ಲಿ ತೋಡಿಸಿರತಕ್ಕದ್ದು ಕೇವಲ ೨೮ ಸಾವಿರ ಕೊಳವೆ ಬಾವಿಗಳು ಮಾತ್ರ. ಜನತಾ ಸರಕಾರ ೭೫ ಸಾವಿರ ಕೊಳವೆ ಬಾವಿಗಳನ್ನು ರಾಜ್ಯದಲ್ಲಿ ತೋಡಿಸದೇ ಹೋಗಿದ್ದರೆ ಬಹುಶಃ ವಿಪರೀತವಾದಂಥ ಉಲ್ಬಣ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೆವು, ಇದರ ಒಂದು ಕೀರ್ತಿ ಜನತಾ ಸರಕಾರಕ್ಕೆ ಹೋಗಬೇಕು. ಇದರ ಬಗ್ಗೆ ಮುಂಚೆಯೇ ಯೋಚನೆ ಮಾಡಿ Prevention is better than cure ಎಂಬಂತೆ ಬರಗಾಲದ ಬಗ್ಗೆ ಸರಿಯಾದ ಲೆಕ್ಕಾಚಾರವನ್ನು ಹಾಕಿ ಸೂಕ್ತವಾದ ಯೋಜನೆಗಳನ್ನು ಹಾಕಿಕೊಳ್ಳಬೇಕು. ತರಾತುರಿಯಲ್ಲಿ ಕೆಲಸ ಮಾಡುವ ಗೋಜಿಗೆ ಹೋಗದೆ, ಕ್ರಮಬದ್ಧವಾದ ರೀತಿಯಲ್ಲಿ ಒಂದು ಕಾರ್ಯಕ್ರಮಗಳನ್ನು ರೂಪಿಸಿಕೊಂಡಲ್ಲಿ ಹೆಚ್ಚು ಶಕ್ತಿಯುತವಾಗಿ ನಾವು ಬರಗಾಲವನ್ನು ಎದುರಿಸಬಹುದು ಎಂಬ ವಿಚಾರವನ್ನು ಹೇಳುತ್ತೇನೆ. ತಕ್ಷಣವೇ ಇದರ ಬಗ್ಗೆ ಜಿಲ್ಲೆಯಲ್ಲಿರತಕ್ಕ ಎಲ್ಲಾ ಅಧಿಕಾರಿಗಳಿಗೂ ಹಾಗೂ ಎಲ್ಲಾ ಜಿಲ್ಲಾ ಪರಿಷತ್ ಅಧ್ಯಕ್ಷರುಗಳಿಗೂ ಆದೇಶವನ್ನು ನೀಡಿ, ಅವರು ಈಗಿನಿಂದಲೇ ಮೇವನ್ನು ಸಂಗ್ರಹ ಮಾಡಬೇಕು, ಎಲ್ಲೆಲ್ಲಿ ಧಾರುಣ ಪರಿಸ್ಥಿತಿ ಇದೆಯೋ ಅಂತಹ ಕಡೆಯಲ್ಲಿ ಜನಗಳಿಗೆ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕ್ಕೋಸ್ಕರ ಗಂಜಿ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು. ಈ ವಿಚಾರವನ್ನೂ ಕೂಡಾ ತೀವ್ರವಾಗಿ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೋರುತ್ತೇನೆ.

ಇದಕ್ಕಿಂತ ಹೆಚ್ಚಾಗಿ ಹಣ ದುರುಪಯೋಗವಾಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಕೇಂದ್ರ ಸರ್ಕಾರದಿಂದ ಬರುವ ಕೋಟ್ಯಾಂತರ ರೂಪಾಯಿಗಳು ಮತ್ತು ರಾಜ್ಯ ಸರ್ಕಾರ ಕೊಡುವ ಕೋಟ್ಯಾಂತರ ರೂಪಾಯಿಗಳು ಸದುಪಯೋಗವಾಗಬೇಕು. ಮಧ್ಯವರ್ತಿಗಳಿಂದಾಗಲೀ ಅಥವಾ ಕಂಟ್ರಾಕ್ಟ್‌ದಾರರಿಂದಾಗಲೀ ಹಣ ದುರುಪಯೋಗವಾಗದ ರೀತಿಯಲ್ಲಿ ನಾವು ನೋಡಿಕೊಳ್ಳಬೇಕು. ಮಧ್ಯವರ್ತಿಗಳ ಹಿಡಿತವನ್ನು ನಾವು ತಪ್ಪಿಸದಿದ್ದರೆ ಇಲ್ಲಿ ಎಷ್ಟೇ ಬೊಬ್ಬೆ ಹಾಕಿದರೂ ಏನೂ ಪ್ರಯೋಜನವಾಗುವುದಿಲ್ಲ. ಹಣ ದುರುಪಯೋಗವಾಗುವುದನ್ನು ತಡೆಗಟ್ಟಬೇಕಾದರೆ, ಶಾಸಕರುಗಳನ್ನೊಳಗೊಂಡ ಒಂದೊಂದು ಉಸ್ತುವಾರಿ ಸಮಿತಿಯನ್ನು ಮಾಡಬೇಕು. ಈ ಉಸ್ತುವಾರಿ ಸಮಿತಿಯು ಎಲ್ಲಾ ಕೆಲಸ ಕಾರ್ಯಗಳಿಗೆ ಹಣ ಕೊಡುವ ಬಗ್ಗೆ ಎಚ್ಚರದಿಂದ ಇರಬೇಕು. ಹಾಗೂ ಕೊಟ್ಟ ಹಣ ಯಾವ ರೀತಿ ಉಪಯೋಗವಾಗಿದೆ ಎಂಬುದನ್ನು ಪರಿಶೀಲನೆ ಮಾಡಬೇಕು. ಈ ರೀತಿ ಶಾಸಕರು ಮತ್ತು ಅಧಿಕಾರಿಗಳ ಸಮಿತಿಯನ್ನು ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸಮಿತಿ ಮಾಡದಿದ್ದರೆ ಕೊಟ್ಟ ಹಣ ದುರುಪಯೋಗವಾಗುತ್ತದೆ. ಕಂಟ್ರಾಕ್ಟ್‌ದಾರರು ಇನ್ನೂರು ಜನದ ಕೈಲಿ ಕೆಲಸ ಮಾಡಿಸಿ ಐದು ನೂರು ಜನರ ಕೈಯಲ್ಲಿ ಕೆಲಸ ಮಾಡಿಸಿದ್ದೇವೆಂದು ಲೆಕ್ಕ ಬರೆದುಕೊಂಡು ಹಣವನ್ನು ದುರುಪಯೋಗ ಮಾಡುತ್ತಾರೆ. ಕೂಲಿಗಾಗಿ ಕಾಳು ಯೋಜನೆಯಲ್ಲಿಯೂ ಸಹ ಇನ್ನೂರು ಜನರ ಹತ್ತಿರ ಕೆಲಸ ಮಾಡಿಸಿ ಐದು ನೂರು ಜನರ ಹತ್ತಿರ ಕೆಲಸ ಮಾಡಿಸಿದ್ದೇವೆಂದು ಲೆಕ್ಕ ಬರೆದು ಹಣವನ್ನು ಹೊಡೆಯುತ್ತಾರೆ. ಆದುದರಿಂದ ಒಂದು ಸಮಿತಿಯನ್ನು ಮಾಡಿ ಪರಿಹಾರ ಕಾಮಗಾರಿಗಳ ಉಸ್ತುವಾರಿ ನೋಡಿಕೊಳ್ಳುವುದಕ್ಕೆ ಬಿಟ್ಟರೆ ಈ ರೀತಿ ದುರುಪಯೋಗವಾಗುವುದನ್ನು ತಪ್ಪಿಸಬಹುದು. ಮಾನ್ಯ ಜೆ. ಹೆಚ್. ಪಟೇಲರು ಒಂದು ಮಾತನ್ನು ಹೇಳಿದರು. ಏನೆಂದರೆ ಕೇಂದ್ರ ಸರ್ಕಾರದವರು ಕೊಡುವ ೨೯೯ ಕೋಟಿ ರೂಪಾಯಿಗಳಲ್ಲಿ ನಾವು ಯಾವುದೇ ರೀತಿಯ ಶಾಶ್ವತ ಬರಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಕೇವಲ

ಕೂಲಿಗಾಗಿ ಕಾಳು ಅಥವಾ ಸಣ್ಣ ಪುಟ್ಟ ಕಾಮಗಾರಿಗಳನ್ನು ಮಾಡಿಸಬಹುದೆಂದು ಹೇಳಿದ್ದಾರೆ. ನಾವು ಅಲ್ಪಕಾಲಿಕ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬದಲು ಶಾಶ್ವತವಾದ ಪರಿಹಾರ ಕೆಲಸಗಳನ್ನು ಮಾಡಿದರೆ ಬಹಳ ಒಳ್ಳೆಯದು. ಇದರ ಬಗ್ಗೆ ಸರ್ಕಾರ ತೀವ್ರವಾಗಿ ಯೋಚನೆ ಮಾಡಿ ಕೆಲಸವನ್ನು ಮಾಡಬೇಕು. ಸಾಯಿಲ್ ಕನ್‌ಸರ್‌ವೇಷನ್ ಡಿಪಾರ್ಟ್‌ಮೆಂಟಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ಸಾಯಿಲ್ ಕನ್‌ಸರ್‌ವೇಷನ್ ಕೆಲಸವನ್ನು ಮಾಡಿಸಬೇಕು. ಆಮೇಲೆ ನಮ್ಮ ರಾಜ್ಯದಿಂದ ಅನೇಕ ಜನ ಲೋಕಸಭಾ ಸದಸ್ಯರು ಪಾರ್ಲಿಮೆಂಟಿನಲ್ಲಿ ಇದ್ದಾರೆ. ಈ ಎಲ್ಲಾ ಮಾನ್ಯ ಸದಸ್ಯರುಗಳು ಕೇಂದ್ರ ಸರ್ಕಾರದ ಮೇಲೆ ತುಂಬಾ ಒತ್ತಡ ತಂದು ನಮ್ಮ ಕರ್ನಾಟಕ ರಾಜ್ಯದಲ್ಲಿ ಸತತವಾಗಿ ೪ ವರ್ಷಗಳಿಂದಲೂ ಬರಗಾಲ ಬಂದು ಜನರು ಬಹಳ ಕಷ್ಟದಲ್ಲಿ ಸಿಕ್ಕಿದ್ದಾರೆ. ಆದುದರಿಂದ ಕೇಂದ್ರ ಸರ್ಕಾರವು ಹೆಚ್ಚಿನ ಆದ್ಯತೆಯನ್ನು ಕೊಟ್ಟು ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡಿ ಹೆಚ್ಚು ಹಣವನ್ನು ಕೊಡಿಸಿದರೆ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಉತ್ತರ ಭಾರತದಲ್ಲಿ ನೋಡಿದರೆ ಪ್ರವಾಹದಿಂದ ಜನರು ಬರಗಾಲಕ್ಕೆ ತುತ್ತಾಗುತ್ತಿದ್ದಾರೆ. ದಕ್ಷಿಣ ಭಾರತದಲ್ಲಿ ನೋಡಿದರೆ ಮಳೆ ಬಾರದೆ ಬರಗಾಲಕ್ಕೆ ತುತ್ತಾಗುತ್ತಿದ್ದಾರೆ. ಒಟ್ಟಿನಲ್ಲಿ ದೇಶವು ಬರಗಾಲಕ್ಕೆ ಪ್ರತಿ ವರ್ಷವೂ ತುತ್ತಾಗುತ್ತಲೇ ಇರುತ್ತದೆ. ಒಂದು ಕಡೆ ಅನಾವೃಷ್ಟಿಯಾದರೆ ಇನ್ನೊಂದು ಕಡೆ ಅತಿವೃಷ್ಟಿಯಾಗುತ್ತಿದೆ. ಇದನ್ನು ತಪ್ಪಿಸಬೇಕಾದರೆ "ಗಂಗಾ ಕಾವೇರಿ ಯೋಜನೆ" ಯನ್ನು ಮಾಡಬೇಕು. ನಮಗೆ ಸ್ವಾತಂತ್ರ್ಯ ಬಂದು ೪೦ ವರ್ಷಗಳಾಯಿತು. ಈ ೪೦ ವರ್ಷಗಳಲ್ಲಿ ನಾವು ಗಂಗಾ ಕಾವೇರಿ ಯೋಜನೆಯನ್ನು ಮಾಡಿಬಿಟ್ಟಿದ್ದರೆ ಒಂದು ಕಡೆ ಆಗುತ್ತಿರುವ ಅತಿವೃಷ್ಟಿಯನ್ನು ತಡೆದು ಇನ್ನೊಂದು ಕಡೆ ಆಗುತ್ತಿರುವ ಅನಾವೃಷ್ಟಿಯನ್ನು ತಪ್ಪಿಸಬಹುದಾಗಿತ್ತು. ಈ ಗಂಗಾ ಕಾವೇರಿ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರ ಪ್ರಯತ್ನ ಮಾಡಬೇಕೆಂದು ಮಾನ್ಯ ಲೋಕಸಭೆ ಸದಸ್ಯರು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕು. ಕೇಂದ್ರ ಸರ್ಕಾರದವರು ನಮ್ಮ ರಾಜ್ಯ ಸರ್ಕಾರಕ್ಕೆ, ಈಗ ಕೇಳಿರತಕ್ಕ ೨೯೮ ಕೋಟಿ ರೂಪಾಯಿಗಳನ್ನಾದರೂ ಬೇಗ ಬಿಡುಗಡೆ ಮಾಡಬೇಕೆಂದು ಮಾನ್ಯ ಲೋಕಸಭಾ ಸದಸ್ಯರು ಒತ್ತಾಯ ಮಾಡಬೇಕು. ಈಗ ರಾಜ್ಯದಲ್ಲಿ ಬಂದಿರುವ ಬರಗಾಲವನ್ನು ಧೈರ್ಯವಾಗಿ ಎದುರಿಸತಕ್ಕಂಥ ಶಕ್ತಿಯನ್ನು ಜನತಾ ಸರ್ಕಾರಕ್ಕೆ ದೇವರು ಕೊಟ್ಟು ಜನರ ಕಷ್ಟಕಾರ್ಪಣ್ಯಗಳಿಗೆ ಸರ್ಕಾರ ಸ್ಪಂದಿಸುವುದಕ್ಕೆ ಶಕ್ತಿ ಕೊಟ್ಟು ಇನ್ನೆಂದೂ ನಮ್ಮ ರಾಜ್ಯದಲ್ಲಿ ಬರಗಾಲ ಬರದಂತೆ ಶಾಶ್ವತ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲಿ ಎಂದು ಹೇಳುತ್ತೇನೆ. ಈ ಬಗ್ಗೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಲಿ ಎಂದು ಮತ್ತೊಮ್ಮೆ ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀಮತಿ ಲೀಲಾದೇವಿಯವರೇ ತಮ್ಮ ಹೆಸರು ಲಿಸ್ಟಿನಲ್ಲಿ ಇಲ್ಲ. ಆದುದರಿಂದ ತಮಗೆ ಅವಕಾಶವನ್ನು ಕೊಡಲಾಗುವುದಿಲ್ಲ, ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಅಧ್ಯಕ್ಷರೇ, ನಾನು ಯಾರೂ ಹೇಳದಿರುವ ವಿಚಾರವನ್ನು ಹೇಳುತ್ತೇನೆ. ಅವಕಾಶವನ್ನು ಕೊಡಿ.

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರೇ, ನೀವು ಇವೊತ್ತು ೬-೭-೮ ಗಂಟೆಯ ತನಕವೂ ಸಭೆಯನ್ನು ನಡೆಸಿ ಎಂದು ಹೇಳಿದರೂ ನಾನು ನಡೆಸುತ್ತೇನೆ. ಅವರ ಹೆಸರು ಪಟ್ಟಿಯಲ್ಲಿ ಇಲ್ಲದ ಕಾರಣ ಅವರಿಗೆ ಅವಕಾಶವನ್ನು ಕೊಡುವುದು ಆಗುವುದಿಲ್ಲ. ನೀವುಗಳೇ ಸಹಕಾರವನ್ನು ಕೊಡದಿದ್ದರೇ ಹೇಗೆ ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಕೇವಲ ಎರಡು ನಿಮಿಷಗಳ ಅವಕಾಶ ಕೊಡಿ

ಅಧ್ಯಕ್ಷರು.—ಹೆಣ್ಣುಮಕ್ಕಳು ಎಂದು ಎರಡು ನಿಮಿಷಗಳ ಅವಕಾಶವನ್ನು ಕೊಡುತ್ತೇನೆ, ಮಾತನಾಡಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಮಗೆ ಅವಕಾಶವನ್ನು ಕೊಡುತ್ತೀರಿ ಎಂದು ಕೊಂಡು ನಾನು ಇಲ್ಲಿ ಕುಳಿತಿದ್ದೆ,

ಅಧ್ಯಕ್ಷರು.—ನೋಡಿ, ಪಟ್ಟಿಯ ಪ್ರಕಾರ ೧೩ ಜನ ಅಬ್‌ಸೆಂಟ್ ಇದ್ದಾರೆ. ನಿಮ್ಮ ಕಾಂಗ್ರೆಸ್ ಪಕ್ಷದವರು ೯ ಜನರು ಅಬ್‌ಸೆಂಟ್ ಇದ್ದಾರೆ ಹೆಸರು ಕರೆದಾಗ ತಾವುಗಳು ಇರಲಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಮಗೂ ಈಗ ಸ್ವಲ್ಪ ಅವಕಾಶವನ್ನು ಮಾಡಿಕೊಡಿ ಮಾತನಾಡುತ್ತೇವೆ......

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ಉತ್ತರ ಕೊಡಲು ಸಿದ್ಧವಾಗಿ ಇದ್ದರು, ಆಗ ಲೀಲಾದೇವಿಯವರು ಮಾತನಾಡಲು ಶುರು ಮಾಡಿದರು, ಈಗ ಎಲ್ಲರೂ ನನಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಇದೊಂದು ನಿಮ್ಮ ಸತ್‌ಸಂಪ್ರದಾಯವೇ ? ಈಗ ತಾವುಗಳು ಮಾತನಾಡಬಹುದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಅಧ್ಯಕ್ಷರೇ, ನಾನು ಕಂದಾಯ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಹಿಂದೆ ಕರ್ನಾಟಕ ವಿದ್ಯುತ್ ಮಂಡಳಿಯವರು ಒಂದು ರೆಸಲ್ಯೂಷನನ್ನು ಜಾರಿ ಮಾಡಿದ್ದರು. ಆದನ್ನು ಇಲ್ಲಿ ತಮ್ಮ ಅಪ್ಪಣೆ ಪಡೆದು ಓದುತ್ತೇನೆ.

" Regulation section 35 (1) which states as

" Whenever the State Government declare specified area as scarcity/drought affected area for purpose of suspension waiver of collection of land revenue, collection of annual minimum charges on I.P. set installations be suspended or waived on the same terms and conditions and as applicable to collection of land revenue and only the actual consumption charges be collected in these areas during the period so declared. "

ಇದನ್ನು ನಾನು ಮೊನ್ನೆಯ ದಿವಸ ಕೆ.ಇ.ಬಿ. ಅಧ್ಯಕ್ಷರಿಗೆ ಕೇಳಿದೆ. ಯಾವ ಯಾವ ಹಳ್ಳಿಗಳನ್ನು ಬರಗಾಲ ಪೀಡಿತ ಪ್ರದೇಶ ಎಂದು ನೋಟಿಫೈ ಮಾಡುತ್ತಾರೆಯೋ, ಆ ಹಳ್ಳಿಗಳಿಂದ ರೆವಿನ್ಯೂ ವಸೂಲಿ ಮನ್ನಾ ಮಾಡಿದ್ದಾರೆ, ಹಾಗೆಯೇ ಹಳ್ಳಿಯಲ್ಲಿನ ಪಂಪ್‌ಸೆಟ್‌ಗಳಿಗೆ ಕೂಡ ಮಿನಿಮಂ ಚಾರ್ಜ್ ವಸೂಲಿ ಮಾಡುವುವನ್ನು ಬಿಟ್ಟು, ಬಳಸಿದ ವಿದ್ಯುತ್‌ಗೆ ಮಾತ್ರ ಚಾರ್ಜ್ ಮಾಡಬೇಕೆಂದು ಕೇಳಿದ್ದಕ್ಕೆ ಅವರು ಇನ್ನೂ ಆ ರೆಸಲ್ಯೂಷನ್ ಜಾರಿಗೆ ತಂದಿಲ್ಲ ಎಂದು ಹೇಳುತ್ತಾರೆ. ರೈತರಿಗೆ ಬರಗಾಲದಿಂದಾಗಿ ಬಾವಿಗಳಲ್ಲಿ ನೀರು ಇಲ್ಲದೇ ಕಂಗಾಲಾಗಿದ್ದರೂ ಕೂಡ ವಿದ್ಯುತ್‌ನ ಮಿನಿಮಮ್ ಬಿಲ್ ಕಟ್ಟಬೇಕಾಗಿದೆ. ಅದನ್ನು ಬೋರ್ಡ್‌ನವರು ವಸೂಲು ಮಾಡುತ್ತಾ ಇದ್ದಾರೆ. ಇದು ರೈತರಿಗೆ ಬಹಳ ಕಷ್ಟದಾಯಕವಾದ ವಿಚಾರ. ಆದುದರಿಂದ ದಯಮಾಡಿ, ಲ್ಯಾಂಡ್ ರೆವಿನ್ಯೂ ಮನ್ನಾ ಮಾಡಿದಂತೆ ವಿದ್ಯುತ್ ಮಿನಿಮಮ್ ಚಾರ್ಜ್‌ನ್ನು ಕೂಡ ಅಂತಹ ಪ್ರದೇಶಗಳಲ್ಲಿ ಮನ್ನಾ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಾ ಈ ವಿಷಯವನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಅಂತೆಯೇ ಹಿಂದೆ ಮಾಡಿದ ರೆಸಲ್ಯೂಷನ್‌ನ್ನು ಕೂಡಲೇ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು) —ಮಾನ್ಯ ಸಭಾಧ್ಯಕ್ಷರೇ, ಈ ಸದನದ ಪ್ರಾರಂಭದಿಂದ ಇದುವರೆಗೂ ರಾಜ್ಯದಲ್ಲಿರತಕ್ಕಂಥ ಅಭಾವ ಪರಿಸ್ಥಿತಿಯ ಬಗ್ಗೆ ಸುದೀರ್ಘವಾದ ಚರ್ಚೆಯಾಗಿದೆ. ಮಾನ್ಯ ಸದಸ್ಯರುಗಳು ತಮ್ಮ ಆತಂಕವನ್ನು ವ್ಯಕ್ತಪಡಿಸುತ್ತಾ, ಬರಗಾಲದ ಕಾಮಗಾರಿಗಳನ್ನು ಇನ್ನೂ ಚುರುಕಾಗಿ ಮಾಡಬೇಕು. ಜನಗಳಿಗೆ ಕೆಲಸ ಮತ್ತು ಕುಡಿಯುವ ನೀರು, ಮತ್ತು ದನಕರುಗಳಿಗೆ ಮೇವನ್ನು ಒದಗಿಸತಕ್ಕಂಥಾ ವಿಚಾರದಲ್ಲಿ ಬಹಳ ಒತ್ತಾಯವನ್ನು ಮಾಡಿದ್ದಾರೆ. ಪ್ರಾರಂಭದಲ್ಲಿ ನಾನು ಪ್ರಾಸ್ತಾವಿಕವಾಗಿ ಹೇಳ ಬಯಸುತ್ತೇನೆ ಈ ವಿಚಾರದಲ್ಲಿ ಸರಕಾರ ಪಕ್ಷ ಭೇದವಿಲ್ಲದೇ ಎಲ್ಲರ ಸಲಹೆ ಮತ್ತು ಸಹಕಾರಗಳನ್ನು ಮೊದಲಿನಿಂದಲೂ ಪಡೆಯುತ್ತಾ ಬಂದಿದೆ. ಎರಡು ವರ್ಷಗಳ ಹಿಂದೆ ಬರಗಾಲದ ತೀವ್ರತೆ ಇರುವಾಗ ಈ ಸದನದ ಒಂದು ಸಲಹೆಯಂತೆ ಮಾನ್ಯ ಸದಸ್ಯರಾದ ಶ್ರೀ ಖರ್ಗೆಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿ, ಆ ಸಮಿತಿಯವರು ರಾಜ್ಯದಾದ್ಯಂತ ಪ್ರವಾಸವನ್ನು ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಮತ್ತು ಕೆಲವಾರು ಸಲಹೆಗಳನ್ನು ಕೊಟ್ಟಿದ್ದಾರೆ

(ಮಾನ್ಯ ಕಡಪಟ್ಟಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆ ಸಲಹೆಗಳನ್ನು ಬಹುತೇಕವಾಗಿ ಸರ್ಕಾರ ಅಂಗೀಕರಿಸಿ ಜಾರಿಗೆ ಕೊಟ್ಟಿದೆ. ಒಂದೊಂದನ್ನೇ ಹೇಳುವುದಕ್ಕೆ ಸಮಯ ಇಲ್ಲದಿರುವುದರಿಂದ ಕೆಲವನ್ನು ಮಾತ್ರ ಹೇಳುತ್ತಿದ್ದೇನೆ. ಜೊತೆಗೆ ರಾಜ್ಯದ

ಲೋಕಸಭಾ ಸದಸ್ಯರು ರಾಜ್ಯಸಭಾ ಸದಸ್ಯರುಗಳನ್ನು ಕರೆದು ಅವರಿಗೆ ವಿವರವಾಗಿ ಮಾಹಿತಿಯನ್ನು ಕೊಟ್ಟು ಕೇಂದ್ರಕ್ಕೆ ಸರಿಯಾದ ತಿಳಿವಳಿಕೆ ಕೊಡಬೇಕೆಂದು ಅವರ ಸಹಕಾರವನ್ನು ಕೋರಿದ್ದೇವೆ.

ಸಿ.ಬಿ.ಐ.ಯವರು ಇಂಡಿಯನ್ ಎಕ್ಸ್‌ಪ್ರೆಸ್ ಕಚೇರಿ ಮೇಲೆ ದಾಳಿ ಮಾಡಿರುವ ಪ್ರಸ್ತಾಪ

ಶ್ರೀ ಸಿ. ಭೈರೇಗೌಡ (ವೇಮಗಲ್) —ಅಧ್ಯಕ್ಷರೇ ಈಗ ಮುಖ್ಯ ಮಂತ್ರಿಗಳು ಬಂದಿದ್ದಾರೆ. ಆವಾಗಲೇ ಶ್ರೀ ಜೆ. ಹೆಚ್. ಪಟೇಲರು ಅದೇನೋ ಟೆಲೆಕ್ಸ್ ಮೆಸೇಜ್ ಎಂದು ಒಂದು ವಿಷಯವನ್ನು ಸಭೆಯ ಗಮನಕ್ಕೆ ತಂದರು. ಅದರಿಂದ ನನಗೆ ತೃಪ್ತಿಯಾಗಿದ್ದರೂ ಸದನಕ್ಕೆ ತೃಪ್ತಿಯಾಗಿಲ್ಲ. ಏಕೆಂದರೆ ಇವತ್ತು ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗ ಇವುಗಳ ಜೊತೆಗೆ ಪತ್ರಿಕಾರಂಗ ಇವು ನಮ್ಮ ಸಾಧನಗಳು. ಇವತ್ತು ದೇಶಾದ್ಯಂತ ಇಂಡಿಯನ್ ಎಕ್ಸ್‌ಪ್ರೆಸ್ ಸಂಸ್ಥೆಗಳ ಮೇಲೆ ಕೇಂದ್ರದಿಂದ ಧಾಳಿ ನಡೆದಿದೆ. ಇದೇನು, ಮತ್ತೆ ಕಪ್ಪು ದಿನಗಳು ಮರುಕಳಿಸುತ್ತಿವೆಯೇ ? ನನ್ನನ್ನು ಪೀಡಿಸುತ್ತಿರುವ ಮತ್ತೊಂದು ಅಂಶವೇನೆಂದರೆ ಈ ದೇಶದಲ್ಲಿ ಅಸತ್ಯವನ್ನು ನುಡಿದರೆ ಏನು ಬೇಕಾದರೂ ಆಗಬಹುದು, ಆದರೆ ಸತ್ಯವನ್ನು ನುಡಿದರೆ ಧಾಳಿ ಹಿಂಸೆಗಳಿಗೊಳಗಾಗ ಬೇಕಾಗುತ್ತದೆ. ಈ ದೇಶದ ಉತ್ಪತ್ತಿ ಸಂಪತ್ತೆಲ್ಲ ಹೊರಗಡೆಗೆ ಹೋಗುತ್ತಿದೆ. ದೊಡ್ಡ ಹಗರಣಗಳು ಯಾವ್ಯಾವ ರೀತಿ ನಡೆಯುತ್ತಿವೆ ಎಂಬುದನ್ನೆಲ್ಲ ಇಂಡಿಯನ್ ಎಕ್ಸ್‌ಪ್ರೆಸ್ ಧೈರ್ಯವಾಗಿ ಹೇಳುತ್ತಾ ಹೋದುದರ ಫಲವೇ ಇದು ? ಪ್ರಜಾಪ್ರಭುತ್ವದ ಮೇಲೆ ಗದಾಪ್ರಹಾರವೇ ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ಈಗ ಬರಗಾಲದ ವಿಷಯದಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಅದಕ್ಕೆ ಕಂದಾಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಈ ಮಧ್ಯದಲ್ಲಿ ಸನ್ಮಾನ್ಯ ಭೈರೇಗೌಡರು ಹಿಂದೆ ಏನೋ ಯಾರೋ ಮಾತನಾಡಿದರು ಎಂದು ಈಗ ಅದೇನೋ ರೇಡ್ ವಿಷಯದಲ್ಲಿ ಮಾತನಾಡುತ್ತಿದ್ದಾರೆ, ಮಾತನಾಡಲಿ ಅಭ್ಯಂತರವಿಲ್ಲ. ಆದರೆ ಯಾವ ನಿಯಮಾವಳಿಯ, ಯಾವ ಕಲಮಿನ ಪ್ರಕಾರ ಅವರು ಇದನ್ನು ಎತ್ತಿದ್ದಾರೆ ? ನಿಮಗೇನಾದರೂ ಪತ್ರ ಬರೆದಿದ್ದಾರೆಯೇ ? ನೋಟೀಸ್ ಕೊಟ್ಟಿದಾರೆಯೇ ? ಯಾವ ಆಧಾರದ ಮೇಲೆ ಅವರಿಗೆ ಮಾತನಾಡಲು ಅವಕಾಶ ಕೊಡುತ್ತಿದ್ದೀರಿ ?

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಭೈರೇಗೌಡರು ಆಗಲೇ ಹೇಳಿದಂತೆ ಕೇವಲ ಇನ್‌ಫರ್ಮೇಶನ್‌ಗಾಗಿ ಹೇಳುತ್ತಿದ್ದೇನೆ. ಬೋಫೋರ್ಸ್ ಹಗರಣ, ಫೇರ್‌ಫ್ಯಾಕ್ಸ್ ಹಗರಣಗಳ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಬರೆದಿದ್ದರಿಂದ ಸೆಂಟ್ರಲ್‌ನವರು ಸಿಬಿಐ ಕೈಲಿ ಅವುಗಳ ಕಛೇರಿ ಮೇಲೆ ರೇಡ್ ಮಾಡಿಸಿ ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆಯೊಡ್ಡಿದ್ದಾರೆ. ಈಗ ಭೈರೇಗೌಡರಿಗೆ ರೆವಿನ್ಯೂ ಮಂತ್ರಿಗಳು ಯೀಲ್ಡ್ ಆಗಿದ್ದಾರೆ. ಆದ್ದರಿಂದ ಭೈರೇಗೌಡರಿಗೆ ಅವಕಾಶ ಮಾಡಿಕೊಡಬಹುದು ಮತ್ತು ಈ ಧಾಳಿಯನ್ನು ನಾವು ಖಂಡಿಸಬೇಕಾಗುತ್ತದೆ.

(ಗೊಂದಲ)

ಶ್ರೀ ಸಿ. ಭೈರೇಗೌಡ.—ಮಾನ್ಯ ಬಸವಲಿಂಗಪ್ಪನವರು....

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಉತ್ತರ ಕೊಡುತ್ತಿದ್ದಾರೆ ಅಷ್ಟು ಹೊತ್ತಿನಿಂದ. ಮಧ್ಯದಲ್ಲಿ ಎದ್ದು ಎಲ್ಲೋ ರೈಡ್ ಆಯಿತಂತೆ...... ಎಂದರೆ ಹೇಗೆ ?

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಇಡೀ ದೇಶದ ದರೋಡೆ ನಡೆದಿದೆ ರಾಜೀವ ಗಾಂಧಿಯವರಿಂದ, ಆ ವಿಷಯ ಬರೆದಿದ್ದಾರೆಂದು ಹೇಳಿ....

(ಗೊಂದಲ)